Clause 1, the Long Title the preamble and the enacting formula were added to the Bill,

Motion to pass

SRI D. K. NAIKAR.—I beg to move,

That the Karnataka Small Cause Courts (Amendment) Bill, 1975, be passed.

MADAM SPEAKER.—The question is:

"That the Karnataka Small Cause Courts (Amendment) Bill, 1975, be passed."

The motion was put and adopted and the Bill was passed.

THE ESSENTRIAL COMMODITIES (KARNATAKA AMENDMENT BILL, 1976

Motion to Consider

SMT E.E. VAZ (Minister for food and Civil Supplies).—
I beg to move ;

" That the Essential Commodities (Karnataka Amendment) Bill, 1976, be taken into consideration."

MADAM SPEAKER.—Motion moved:

"That the Essential Commodities (Karnataka Amendment) Bill, 1976, be taken into consideration."

† SMT. E.E. VAZ —The Essential Commodities Act, 1955 (Central Act 10 of 1955) has been in force since 1955 Keeping in view the working experience of the Act in the State, it is considered necessary to make certain amendments in the Act, which are within the competence of the State Legislature so that the whole working pattern is simplified and certain definitions are clarified so that the public may know what exactly is the purpose of the Government. The term 'Collector' has not been defined in the Act, and all action has necessarily to be taken by the Deputy Commissioners. Therefore, it is found necessary to define the term 'Collector' to include Special Deputy Commissioners and Assistant Commissioners Section of the principal Act is too general In nature. Therefore, it is proposed to amend this section so that it clearly brings out the scope and intention of procurement operations. Further, the Governmnet has to pay the post-harvest price for grains procured which is not possible. To get over this difficulty, the Sub-section 3 (B) of Section 3 is proposed to be recast to specify the procurement price as one fixed by the Govern-

ment of India in consultation with the State Government It has further been decided that if the grower has not surrendered his levy fixed, he will be made to pay double the cost of the levy fixed on him This has been made to simplify the procurement operations. Therefore request the Hon'ble Members to agree to these amendments and see the Bill is passed.

ಶ್ರೀ ಸಿ ಬೈರೇಗೌಡ.—ಮಾನ್ಯ ಅಧ್ಯಕ್ಷರೆ ನಾನು ಇದರ ಬಗ್ಗೆ ಒಂದೇ ಒಂದು ಸ್ಪಷ್ಟೀಕರಣ ಕೇಳು ವುದು ಏನೆಂದರೆ, ಲೆವಿ ಕೊಡದಿದ್ದರೆ 2 ರಷ್ಟು ಬೆಲೆ ಕೊಡಬೇಕೆಂದು ಹೇಳಿದ್ದಾರೆ, ಆದರೆ ಈ ಲೆವಿ ಪ್ರೈಸನ್ನು ಯಾವ ಆಧಾರದ ಮೇಲೆ ನಿಗದಿ ಮಾಡಿದ್ದಾರೆ ಎಂಬುದನ್ನು ದಯವಿಟ್ಟು ಹೇಳಿದರೆ, ಮುಂದೆ ನಾವು ಇದರ ಮೇಲೆ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರ.—ಅದಕ್ಕೆ ಮುಂದೆ ಸಮಯ ಬರುತ್ತದೆ, ಆಗ ತಾವು ಮಾತನಾಡ ಬಹುದು.

SMT. E.E VAZ —It has been clearly explained in the amendment that has been brought in the Bill, i e., whichever the price the Central Government fixes in consultation with the State Government that will be taken as a price for levy in the particular State.

† ಶ್ರೀ ಟಿ.ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೆ, ಈ ದಿನ ಮಾನ್ಯ ಆಹಾರ ಮಂತ್ರಿಗಳು ತಂದಿರತಕ್ಕ ತಿದ್ದುಪಡಿಯನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ತಿದ್ದುಪಡಿಯನ್ನು ತರುವ ಉದ್ದೇಶವೇನು, ಅದರಿಂದ ರಾಜ್ಯದ ಜನತೆಗೆ ಆಗುವ ಸೌಲಭ್ಯಗಳು ಏನು ಎಂಬುದನ್ನು ಸ್ವಲ್ಪಮಟ್ಟಿಗೆ ತಿಳಿವಳಿಕೆ ಕೊಟ್ಟಿದ್ದಾರೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ತಾವು ಏನು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಈ ಆಹಾರ ಇಲಾಖೆಯಿಂದ ಜನತೆಗೆ ಬೇಕಾದಂಥ ಅತ್ಯವಶ್ಯಕ ಪದಾರ್ಥಗಳ ಬಗ್ಗೆ ತಾವು ಯಾವ ಯಾವ ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೀರಿ, ಇವು ಜನತೆಗೆ ಸಂಪೂರ್ಣವಾಗಿ ತೊಂದರೆಯನ್ನು ಕೊಡುವಂತಹವುಗಳು ಆಗಿವೆಯೋ ವಿನಃ ಸೌಕರ್ಯಗಳನ್ನು ಕೊಡುವಂತಹವುಗಳು ಅಗಿಲ್ಲವೆಂದು ನಾನು ನಿರ್ವಿವಾದವಾಗಿ ಹೇಳಬೇಕಾಗಿದೆ. ಈಗಿನ ಸಂದರ್ಭದಲ್ಲಿ ಜನತೆಗೆ ಬಹಳ ಮುಖ್ಯವಾಗಿ ಅವಶ್ಯಕವಾಗಿ ಬೇಕಾಂಥದ್ದು ಗಾಳಿ, ಬೆಳಕು ಮತ್ತು ಆಹಾರ. ಸರ್ಕಾರದವರು ಜನತೆಗೆ ಆಹಾರವನ್ನು ಒದಗಿಸುವಂತಹ ದಿಸಿಯಲ್ಲಿ ಅವರಿಗೆ ಬೇಕಾದ ಪದಾರ್ಥಗಳಾದ ರಾಗಿ, ಜೋಳ, ಅಕ್ಕಿ ಮಕ್ಕಳಿಗೆ ಬೆಳವಣಿಗೆಗೆ ಬೇಕಾದಂಥ ಪದಾರ್ಥಗಳು, ದಿನನಿತ್ಯದ ಬಳಕೆಗೆ ಬೇಕಾದಂಥ ಸೀಮೆ ಎಣ್ಣೆ ಇತ್ಯಾದಿ ಅನೇಕ ಪದಾರ್ಥಗಳು, ಸೈಕಲ್ ಟೈರ್ ಮುಂತಾದ ಪದಾರ್ಥಗಳಿಗೆ ಕೊಳ್ಳುವಂತಹ ಶಕ್ತಿ ಏನಿದೆ ಎಂಬುದನ್ನು ನೋಡಿ ಅವುಗಳಿಗೆ ಧಾರಣೆಗಳನ್ನು ನಿಗದಿ ಮಾಡ ಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯ.

ಉದಾಹರಣೆಗೆ ತೆಗೆದುಕೊಂಡರೆ ಸೀಮೆ ಎಣ್ಣೆ ಧಾರಣೆ ನೋಡಿದರೆ; ನಾಲ್ಕಾರು ವರ್ಷಗಳ ಕೆಳಗೆ ಎಷ್ಟಿತ್ತೋ? ಅಷ್ಟೇ ಪ್ರಮಾಣದಲ್ಲಿ ಹೆಚ್ಚಿದೆ; ಇದಕ್ಕೆ ಕಾರಣಗಳು ಏನು ಎಂಬುದಕ್ಕೆ ಸರ್ಕಾರ ವಿವರಣೆ ನೀಡಬೇಕಾಗಿದೆ. 100ಕ್ಕೆ 80 ಭಾಗ ಇವತ್ತು ಹಳ್ಳಿಗಳಲ್ಲಿರತಕ್ಕ ಜನ; ಸಣ್ಣ ಸಣ್ಣ ಪಟ್ಟಣಗಳಲ್ಲಿರತಕ್ಕ ಜನ; ಬೆಂಗಳೂರಿನಂತಹ ನಗರಗಳಲ್ಲಿ ಇರತಕ್ಕ ಜನ ಅನೇಕ ಕೆಲಸ ಕಾರ್ಯಗಳಿಗೆ ಸೀಮೆ ಎಣ್ಣೆ ಉಪಯೋಗ ಮಾಡುತ್ತಿರುವುದ ಸರ್ಕಾರದ ಗಮನಕ್ಕೂ ಬಂದಿದೆ ಪ್ರತಿಯೊಬ್ಬರಿಗೂ ಬೇಕಾದ ಪದಾರ್ಥವಾಗಿದೆ. ಇವತಿನ ಸಮಾಜದಲ್ಲಿ ಆರ್ಥಿಕ ಪರಿಸ್ಥಿತಿ ಕುಸಿದುಬಿದ್ದಿರಬೇಕಾದರೆ; ಈ ಒಂದು ಮಾರುಕಟ್ಟೆಯಲ್ಲಿ ಪದಾರ್ಥಗಳ ಬೆಲೆ ಇಳಿದಿರುವದೇ ಕಾರಣ ಇದರ ಬಗ್ಗೆ ಸರ್ಕಾರ ಏನೂ ಕಾರ್ಯ ಕ್ರಮ ಕೈಗೊಂಡಿದೆ; ಈ ಬಗ್ಗೆ ತಾವು ಕೂಡ ವಿಚಾರ ಮಾಡಬೇಕು. ಮಾನ್ಯ ಮಿತ್ರರಾದ ಬೈರೇಗೌಡರ ಪ್ರಶ್ನೆಗೆ ತಾವು ಹೇಳಿದಿರಿ, ಲೆವಿ ರೇಟ್ ಹಾಕಬೇಕಾದರೆ ಯಾವ ಆಧಾರದ ಮೇಲೆ ಹಾಕುತ್ತೀರಿ? ಶಾಸ್ತ್ರೀಯವಾದ ಅಥವಾ ಅನುಭವದ ಆಧಾರವನ್ನು ತೆಗೆದುಕೊಂಡಿದ್ದೀರಾ? ಯೂನಿವರ್ಸಿಟಿ ಅಥವಾ ವ್ಯವಸಾಯ ತಜ್ಞರ ಅಭಿಪ್ರಾಯವನ್ನು ಕೇಳಿದ್ದೀರಾ? ರೈತ ಬೆಳೆದ ಒಂದು ಕ್ವಿಂಟಾಲ್ ಭತ್ತಕ್ಕೆ ಎಷ್ಟು ಖರ್ಚಾಗುತ್ತದೋ ಅದರಲ್ಲಿ ಮುಕ್ಕಾಲು ಭಾಗ ಹಣ ಫಿಕ್ಸ್ ಮಾಡಿದರೆ ಸಾಕು. ಇವತ್ತಿನ ದಿವಸ ಒಂದು

ಕಡೆ ವ್ಯವಸಾಯ ಕೂಲಿಗಾರರಿಗೆ ಕೊಡುವ ಕೂಲಿ ಜಾಸ್ತಿಯಾಗಿದೆ; ಮತ್ತೊಂದು ಕಡೆ ಗೊಬ್ಬರದ ಧಾರಣೆ ಕಡಿಮೆಯಾಗಿಲ್ಲ; ಒಂದು ದಿವಸ ಒಂದು ಜೊತೆ ನೇಗಿಲುಗಳಿಗೆ 12 ರೂಪಾಯಿ ಕೂಲಿ ಇದೆ. ಇವೆಲ್ಲವನ್ನೂ ನೋಡಿದಾಗ ಸರ್ಕಾರ ತಯಾರು ಮಾಡಿರತಕ್ಕ ಬೆಲೆ ಏನು ಇದೆ; ಆದರಿಂದ ರೈತನಿಗೆ ದುಬಾರಿಯಾಗಿದೆ. ಇಂಥ ಕಾಲದಲ್ಲಿ ರೈತನಿಗೆ ಪ್ರೋತ್ಸಾಹ ಕೊಡದೇ ಹೋದರೆ; ಆತನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕದೆ ಹೋದರೆ, ಬೆಳೆಯುವವನು ತನ್ನಷ್ಟಕ್ಕೇ ತಾನೇ ಬೆಳೆಯುವುದನ್ನು ಕಡಿಮೆ ಮಾಡುತ್ತಾನೆ; ಈ ಕಡೆಗೆ ಸರ್ಕಾರ ಗಮನಕೊಡಬೇಕು. ಇವತ್ತು ರೈತ ಬೆಳೆವಂತ ಎಲ್ಲಾ ಪದಾರ್ಥಗಳ ಬೆಲೆಗಳು ಅಂದರೆ ಹಣ್ಣುಕಾಯಿಫಲ್ಯಗಳು; ಅಕ್ಕಿ, ರಾಗಿ ಎಲ್ಲವೂ ಕುಸಿದಿವೆ. ನಾನು ಅನೇಕ ಕಡೆ ಮಾರುಕಟ್ಟೆಗಳಲ್ಲಿ ನೋಡಿದ್ದೇನೆ; ಜನತೆಯಲ್ಲಿ ಹಣ ಇಲ್ಲದೇ ಬಹಳ ತೊಂದರೆ ಪಡುತ್ತಿದ್ದಾರೆ. ತರೀಕೆರೆ, ಭದ್ರಾವತಿ, ಮಂಡ್ಯ ಮತ್ತಿತರ ಕಡೆ ರೈತರು ಬೆಳೆದಂತ ಪದಾರ್ಥಗಳು ಹಾಗೆ ಇದ್ದು; ರೈತರು ಗಾಭರಿಯಲ್ಲಿದ್ದಾರೆ. ಇದರಿಂದ ಲುಕ್ಸಾನು ಆಗುವುದು ಯಾರಿಗೆ? ರೈತನಿಗೆ ಅನೇಕ ಸಾಲಗಳು ಇರುತ್ತವೆ; ಸೊಸೈಟಿಗೆ ಕಂತುಗಳನ್ನು ಕಟ್ಟಬೇಕು; ಮತ್ತಿತರ ಸರ್ಕಾರ ಸಾಲಗಳನ್ನು ಕೊಡಬೇಕಾಗುತ್ತದೆ. ಇಂಥ ಪರಿಸ್ಥಿತಿಯೊಳಗೆ ರೈತನನ್ನು ಕೇಳುವವರು ಇಲ್ಲದೇ ಇದ್ದಾಗ; ಇವರನ್ನು ರಕ್ಷಣೆ ಮಾಡತಕ್ಕವರು ಯಾರು? ಜನತೆಗೆ ಅವಶ್ಯಕವಾದ ಪದಾರ್ಥಗಳನ್ನು ನಿಗಧಿಯಾದ ಧರದಲ್ಲಿ ಒದಗಿಸತಕ್ಕದ್ದು ಸರ್ಕಾರದ ಉದ್ದೇಶವಾಗಿದೆ. ಅದೇ ರೀತಿ ಬೆಳೆದವರಿಗೆ ರಕ್ಷಣೆ ಕೊಡುವುದರ ಜೊತೆಗೆ ಸೂಕ್ತವಾದ ಬೆಲೆ ಕೊಡುವುದು ಸರ್ಕಾರದ ಮೂಲ ಉದ್ದೇಶ. ಮಕ್ಕಳ ಆಹಾರದ ಅಮೂಲ್ ಶ್ರೀಮಂತರಮಕ್ಕಳಿಗೆ ದೊರೆಯುತ್ತದೆಯೇ ವಿನಹ; ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಬಡ ಮಕ್ಕಳಿಗೆ; ಕಾರ್ಮಿಕ ಮಕ್ಕಳಿಗೆ ಇದು ಸಿಗುವುದಿಲ್ಲ. ಇದರ ಬೆಲೆಯನ್ನು ಏತಕ್ಕೆ ಕಡಿಮೆ ಮಾಡಬಾರದು. ಇದರಿಂದ ಫ್ಯಾಕ್ಟರಿಯವರಿಗೆ ಲಾಭ ದೊರೆಯುತ್ತದೆ; ಕೆಳಮಟ್ಟದಲ್ಲಿರತಕ್ಕ ಬಡ ಜನತೆ ಕೊಂಡು ಕೊಳ್ಳುವ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು? ತಯಾರಾದ ಪದಾರ್ಥಗಳು ಸ್ವಲ್ಪಮಟ್ಟಿಗೆ ಕಡಿಮೆದರದಲ್ಲಿ ಸಿಗುವಂತಾದರೆ; ಟರ್ನ್ ಓವರ್ ಜಾಸ್ತಿಯಾಗುತ್ತದೆ; ಅಲ್ಲದೆ ಕಂಪನಿಗೆ ಲಾಭ ಬರುತ್ತದೆ. ಕೆಲವು ಬ್ರಾಂಡುಗಳು ತಯಾರು ಮಾಡುವ ವಸ್ತುವಿನ ಬೆಲೆ ಎಷ್ಟು ಜಾಸ್ತಿಯಾದರೂ ಜನತೆ ಕೊಂಡುಕೊಳ್ಳುತ್ತಾರೆ. ಸರ್ಕಾರ ಕೆಲವು ಪದಾರ್ಥಗಳನ್ನು ಕೋಆಪರೇಟೀವ್ ಸೆಕ್ಟಾರ್ ಮೂಲಕ; ಜನತಾ ಬಜಾರ್ ಮೂಲಕ ಮಾರಾಟ ಮಾಡುತ್ತಿದೆ. ಕೆಲವು ಕಳ್ಳಸಾಗಣೆಕೆಯಲ್ಲಿ ದೊರೆತ ವಸ್ತುಗಳನ್ನು ಸರ್ಕಾರ ಕೋ ಅಪರೇಟೀವ್ ಸೆಕ್ಟಾರ್ ಮೂಲಕ ಮಾರಾಟ ಮಾಡುತ್ತಾರೆ. ಅದು ಯಾರಿಗೆ ದೊರೆಯುತ್ತದೆ? ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಡೈರೆಕ್ಟರುಗಳಿಗೆ ಹೋಗಿ ಅಲ್ಲಿಂದ ಅದು ಬ್ಲಾಕ್ ಮಾರ್ಕೆಟ್ ಶುರುವಾಗುತ್ತದೆ, ಇದು ಈ ಇಲಾಖೆಯಲ್ಲಿ ಸಾಮಾನ್ಯವಾಗಿ ನಡೆಯುವ ರೀತಿಯಾಗಿದೆ, ಇದರ ಬಗ್ಗೆ ಸರ್ಕಾರ ಗಮನಕೊಡಬೇಕು. ಸಾರ್ವಜನಿಕರಿಗೆ ಈ ಕಾನೂನಿನ ವ್ಯಾಪ್ತಿಯಿಂದ ಹೆಚ್ಚಿನ ಅನುಕೂಲವಾಗುವಂತಾಗಬೇಕು. ಇದರಿಂದ ಹೆಚ್ಚಿನ ಗುರಿ ಮುಟ್ಟುವುದು ತಪ್ಪಿ, ಲಾಭ ಪಡೆಯತಕ್ಕ ಬುದ್ಧಿವಂತರು ಇದ್ದಾರೆ. ದಡ್ಡ ಜನ, ತಿಳುವಳಿಕೆಯಿಲ್ಲದ ಜನಕ್ಕೆ ನಿಮ್ಮ ಕಾನೂನಿನಿಂದ ಲಾಭವಾಗುವುದಿಲ್ಲ.

ಮಾನ್ಯ ಅಧ್ಯಕ್ಷರೇ, ಸರ್ಕಾರದ ಈ ಕಾನೂನಿನಂತ ವಶಕ್ಕೆ ತೆಗೆದುಕೊಂಡಂತ ಆಹಾರ ಪದಾರ್ಥಗಳನ್ನು; ಆ ವಿಚಾರದಲ್ಲಿ ತೀರ್ಮಾನವಾಗಬೇಕಾದರೆ, 1–2 ವರ್ಷಗಳು ಬೇಕಾಗುತ್ತದೆ. ಆ ಪದಾರ್ಥ ಅಲ್ಲಿಯೇ ಬಿದ್ದು; ಅದರ ಗುಣಮಟ್ಟ ಕೆಟ್ಟುಹೋಗಿ; ಅದು ಗೊಬ್ಬರವಾಗಿ ಮಾರತಕ್ಕ ಸಂದರ್ಭವೂ ಇದೆ. ಇಂಥ ಸಂದರ್ಭಗಳು ಬಂದಾಗ ವಿಶೇಷವಾಗಿ ಅಂದರೆ 15 ದಿವಸದಲ್ಲಿ ಮಾರಾಟ ಮಾಡತಕ್ಕ ವ್ಯವಸ್ಥೆ ಮಾಡಿ, ಅದರಿಂದ ಬಂದ ಹಣವನ್ನು ಕೊಡಬೇಕಾದವರಿಗೆ ಕೊಡಿ. ಈ ರೀತಿ ಮಾಡದೇ ಹೋದರೆ ರೈತರಿಗೆ ಲುಕ್ಸಾನು ಆಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಅವರು ತಪ್ಪು ಮಾಡಿರುತ್ತಾರೋ, ಅಥವಾ ಮಾಡಿರುವುದಿಲ್ಲವೊ ಅದನ್ನು ವಿಚಾರ ಮಾಡತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ; ಈ ವಿಚಾರದಲ್ಲಿ ಅನುಕೂಲ ಒದಗಿಸುವ ವ್ಯವಸ್ಥೆ ಮಾಡಬೇಕು. ಇವತ್ತು ತಾವು ರೇಟನ್ನು ನಿಗಧಿ ಮಾಡಿದ್ದೀರಿ; ಉದಾಹರಣೆ ಅಕ್ಕಿಯನ್ನು ತೆಗೆದುಕೊಳ್ಳಿ. ಅನೇಕ ಗುಣ ಮಟ್ಟದ ಅಕ್ಕಿಗಳನ್ನು ಇಟ್ಟಿದ್ದಾರೆ, ಬೆಳೆವಂತ ರೈತನಿಗೂ ಸ್ವಲ್ಪ ಅವಕಾಶ ಕೊಟ್ಟರೆ ನಿಮಗೂ ಜವಾಬ್ದಾರಿ ಕಡಿಮೆ ಆಗಬಹುದು. ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹಾಕುವುದು ಕಡಿಮೆ ಯಾಗುತ್ತದೆ. ಜಿಲ್ಲಾ ಮಟ್ಟದಲ್ಲಿರುವ ನಿರ್ಬಂಧವನ್ನು ತೆಗೆಯಿರಿ ಎಂದು ರಾಜ್ಯಕ್ಕೆ ಅನುಗುಣವಾದ ಬತ್ತ, ರಾಗಿಯನ್ನು ಒಂದುಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವ ಅವಕಾಶ ಮಾಡಿಕೊಡಬೇಕೆಂದು ನಮ್ಮ ಪಕ್ಷದವರು ಮತ್ತು ನಿಮ್ಮ ಪಕ್ಷದವರು ಅನೇಕ ಸಾರಿ ಒತ್ತಾಯ ಮಾಡಿದ್ದೇವೆ. ಪ್ರಾಯೋಗಿಕವಾಗಿ 6 ತಿಂಗಳು, ಮೂರು ತಿಂಗಳು ತೆಗೆದು ನೋಡಿ;

ಬೆಂಗಳೂರು, ಕೋಲಾರ ಮತ್ತು ತುಮಕೂರು ಹಾಗೂ ಮಂಡ್ಯ, ಶಿವಮೊಗ್ಗ ಹಾಸನ ಈ ಮೂರ್ರು ಜಿಲ್ಲೆಗಳನ್ನು ಸೇರಿಸಿ ಒಂದು ಡಿವಿಜನ್ ಮಾಡಿ. ಕೊಂಡು ಕೊಳ್ಳುವವರಿಗೂ ಅನುಕೂಲವಾಗಬೇಕು; ಬೆಳೆದವರಿಗೂ ಅನುಕೂಲ ಮಾಡಿಕೊಡುವುದು ಸರ್ಕಾರದ ಮೂಲ ಉದ್ದೇಶವಾಗಿದೆ. ಹಿಂದೆ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕೆಲವು ಅವಶ್ಯಕವಾದ ಪದಾರ್ಥಗಳು ಕಳ್ಳಸಾಗಾಣದ ಮೂಲಕ ಹೋಗುತ್ತಿದ್ದವು; ಈಗ ಆಗಿಲ್ಲ, ನೆರೆರಾಜ್ಯಗಳಲ್ಲೂ ಸಹ ಕೆರೆ ಕಟ್ಟೆಗಳು ತುಂಬಿ ಹೆಚ್ಚು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದುದನ್ನು ನೋಡಿದ್ದೇವೆ. ತಮ್ಮ ಹೇಳಿಕೆಯಂತೆ 84 ಲಕ್ಷ ಕ್ವಿಂಟಾಲ್ ಆಹಾರ ಬೆಳೆದು ಗುರಿ ಸಾಧಿಸಿದ್ದಾರೆ.

ಅದೇ ರೀತಿಯಲ್ಲಿ ನಮ್ಮ ನೆರೆರಾಷ್ಟ್ರಗಳಾದ ಆಂಧ್ರಪ್ರದೇಶ್, ತಮಿಳ್‌ನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಹೆಚ್ಚಾಗಿ ಆಹಾರ ಪದಾರ್ಥಗಳನ್ನು ಬೆಳೆಯುತ್ತಿರುವುದು ತಮಗೆ ಗೊತ್ತಿದೆ. ಸಾಮಾನ್ಯ ಜನತೆಗೆ ತಮ್ಮ ಕಾನೂನು ವ್ಯಾಪ್ತಿಯಲ್ಲಿ ಸಿಕ್ಕುವಂಥ ಸೌಲಭ್ಯಗಳನ್ನು ಉಪಯೋಗಿಸಿ ಕೊಂಡು ಜನಗಳು ಮುಂದೆ ಬಾಧೆ ಕೊಡಬೇಕಾದರೆ ಅಂಥ ಅವಕಾಶಗಳನ್ನು ಏಕೆ ಮಾಡಿಕೊಡುವುದಿಲ್ಲವೆನ್ನುವ ವಾದವನ್ನು ತಮ್ಮ ಮುಂದಿಡಬಯಸುತ್ತೇನೆ. ಇವರಬಗ್ಗೆ ತಾವು ಕೂಲಂಕಷವಾಗಿ ವಿಚಾರ ಮಾಡ ಬೇಕೆಂದು ಹೇಳುತ್ತೇನೆ.

2-30 P.M.

ಸನ್ಮಾನ್ಯ ಅಧ್ಯಕ್ಷರೆ ಕಂಟ್ರೋಲ್ ಆರ್ಟಿಕಲ್ಸ್ ಸಾರ್ವಜನಿಕರಿಗೆ ಸಿಗಬೇಕಾದರೆ ಬಹಳ ಕಷ್ಟ ವಿರುತ್ತದೆ, ಸಾಮಾನ್ಯ ಜನತೆಗೆ ಸಿಗುವುದಿಲ್ಲ. ಎಲ್ಲಿಂದ ಬರುತ್ತದೋ ಅಲ್ಲಿಯೇ ಮಾಯವಾಗಿಬಿಡುತ್ತವೆ. ಸಣ್ಣ ಸಣ್ಣ ಪದಾರ್ಥಗಳೆಂದರೆ ಬ್ಲೇಡ್‌ಗಳು, ಒಳ್ಳೆಯ ಬಟ್ಟೆಗಳು ಜನತಾ ಬಜಾರಿನಲ್ಲಿ ಮಾರತಕ್ಕಂಥದ್ದು ಸಾಮಾನ್ಯ ಜನರಿಗೂ ದೊರೆಯಲೆನ್ನುವ ಉದ್ದೇಶ ಒಳ್ಳೆಯದಿರುತ್ತದೆ ಇದು ಯಾರಿಗೆ ಅನುಕೂಲ ವಾಗುತ್ತಿದೆ ಎಂದರೆ ಮಂತ್ರಿಗಳು ಯಾರಾದರೂ ನಮ್ಮ ಮನೆಗೆ ಕಳುಹಿಸಿಕೊಡಿ ಎಂದು ಫೋನ್ ಮಾಡಿದರೆ ಕೂಡಲೆ ಕಳುಹಿಸುವ ಕಾರ್ಯ ನಡೆಯುತ್ತದೆ ಇದು ಸಾರ್ವಜನಿಕರಿಗೂ ಸಿಕ್ಕುವಂಥ ಅವಕಾಶ ವಾಗಬೇಕು ಸರ್ಕಾರವು ಇದರಬಗ್ಗೆ ಪೂರ್ಣವಾಗಿ ಗಮನಕೊಟ್ಟು ಜನರಿಗೆ ಒಳ್ಳೆಯದಾಗುವ ರೀತಿಯಲ್ಲಿ ಅಧಿಕಾರಿಗಳಿಗೆ ಮಾರ್ಗದರ್ಶನ ಕೊಡಬೇಕೆಂದು ಹೇಳುತ್ತೇನೆ. ನಾನು ಈಗಾಗಲೇ ಹೇಳಿದಹಾಗೆ ಜಿಲ್ಲೆ ಗಳಲ್ಲಿ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದರಲ್ಲಿ ಕಾನೂನಿಗೆ ವಿರುದ್ಧವಾಗಿ ನಡೆಯುತಕ್ಕ ಅನೇಕ ಸಂದರ್ಭಗಳು ಇರುತ್ತದೆ. ಆ ಅವ್ಯವಹಾರ ನಡೆಯದಂತೆ ತಕ್ಷಣ ವ್ಯವಸ್ಥೆ ಮಾಡಿ ಜನಗಳಿಗೆ ಅವಶ್ಯಕವಾಗಿ ಸರಿಯಾದ ರೀತಿಯಲ್ಲಿ ದೊರೆಯುವಂತೆ ಕಾನೂನನ್ನು ಬಿಗಿ ಮಾಡಬೇಕೆಂದು ಹೇಳುತ್ತೇನೆ ಕೆಲವರಿಗೆ ಕಂಟ್ರಾಕ್ಟ್ ಕೊಡುವ ಪದ್ಧತಿ ಇರುತ್ತದೆ ಈ ಕಂಟ್ರಾಕ್ಟ್ ಕೊಡುವ ಕಾಲಕ್ಕೆ ಇರುವ ರೇಟ್‌ಗಳಿಗೂ, ಸಪ್ಲೆ ಮಾಡುವ ಕಾಲಕ್ಕೆ ಇರುವ ರೇಟ್ಸ್‌ಗಳಿಗೂ ವ್ಯತ್ಯಾಸವಾಗುತ್ತದೆ. ಮುಂದಿನ ಭವಿಷ್ಯವನ್ನು ನೋಡಿ ಧಾರಣೆವಾಸಿಗಳನ್ನು ನಿಗದಿಮಾಡಬೇಕೆಂದು ಹೇಳಿ ಆಹಾರಮಂತ್ರಿಗಳು ಕೆಲವೊಂದು ತಿದ್ದು ಪಡಿಗಳನ್ನು ತಂದಿದ್ದಾರೆ ಇದು ಬಹುಶಃ ಚುರುಕಾಗಿಯೂ ಯಶಸ್ವಿಯಾಗಿಯೂ ಕಾರ್ಯಗತವಾಗ ಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ, (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ ನಮ್ಮ ಆಹಾರ ಖಾತೆಯ ಸಚಿವರು ಮಂಡಿಸಿರತಕ್ಕಂಥ ಕರ್ನಾಟಕ ಎಸ್‌ನ್ಶಿಯಲ್ ಕಮಾಡಿಟೀಸ್ ಅಮೆಂಡ್‌ಮೆಂಟ್ ಬಿಲ್ ೭೬ ಈ ತಿದ್ದುಪಡಿಯನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಅವರು ತಮ್ಮ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಇದನ್ನು ಏಕೆ ತಂದಿದ್ದು ಎನ್ನುವುದರ ಬಗ್ಗೆ ಹೇಳಿದ್ದಾರೆ. ಇಲ್ಲಿ ನಮ್ಮ ರೈತರು ಲೆವಿಯನ್ನು ಕೊಡವುದು ತಪ್ಪಿಸಿಕೊಂಡರೆ ಅವರು ಅದರ ಎರಡರಷ್ಟು ದಂಡವನ್ನು ತೆರಬೇಕಾಗುತ್ತದೆ. ಎನ್ನುವುದನ್ನು ಕೂಡ ಮುಖ್ಯವಾಗಿ ಈ ತಿದ್ದುಪಡಿಯಲ್ಲಿ ತಂದಿದ್ದಾರೆಂದು ಭಾವಿಸುತ್ತೇನೆ. ಹಾಗೆಯೇ ಪ್ರೊಕ್ಯೂರ್‌ಮೆಂಟ್ ಕಲೆಕ್ಟ್ ಮಾಡುವುದಕ್ಕೆ ಅಧಿಕಾರಿಗಳು ಯಾರು ಯಾರು ಬರುತ್ತಾರೆನ್ನುವುದನ್ನು ಕೂಡ ಇಲ್ಲಿ ನಮೂದಿಸಿದ್ದಾರೆ. ಇದಲ್ಲವೊ ಸಹ ಪ್ರೊಕ್ಯೂರ್‌ಮೆಂಟ್‌ನ್ನು ಕಲೆಕ್ಟಮಾಡಲು ಅಸಿಸ್ಟೆಂಟ್ ಕಮಿಷನರ್ ಬರುತ್ತಾರೆ, ಸ್ಪೆಷಲ್ ಡೆಪ್ಯುಟಿ ಕಮಿಷನರ್ ಬರುತ್ತಾರೆಂದು ಕೂಡ ಹೇಳಿದ್ದಾರೆ. ಈವತ್ತು ರೈತರು ದೇಶದ ಬೆನ್ನುಮೂಳೆ ಎಂದು ಹೇಳುವ ಶಬ್ದಗಳು ಒಂದುಕಡೆಯಾದರೆ, ರೈತರು ಲೆವಿಯನ್ನು ಕೊಡದೆ ಇದ್ದಪಕ್ಷದಲ್ಲಿ ಅವನಿಂದ ಮಾರ್ಕೆಟ್ ಪ್ರೈಸ್‌ಗೆ ಎರಡರಷ್ಟು ವಸೂಲು ಮಾಡತಕ್ಕ ಈ ತಿದ್ದುಪಡಿ ಎನ್ನು

ಇದೆ ಇದನ್ನು ೨೬ ಜನ ಸದಸ್ಯರು ಇಂತಹಂಥ ಈ ಮಾನ್ಯ ಸಭೆಯಲ್ಲಿ ರೈತರಬಗ್ಗೆ ಕಳಕಳಿ ಇರತಕ್ಕಂಥವರು ಸ್ವಲ್ಪ ಯೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರೆ ನನಗನಿಸುತ್ತದೆ ಮಾನ್ಯ ಆಹಾರ ಸಚಿವರು ಕೂಡ ಚಿಕ್ಕಮಗಳೂರಿನಲ್ಲಿ ಗದ್ದೆ ಇದೆ, ತೋಟವನ್ನು ಇಟ್ಟಿದ್ದೇನೆ, ಕಾಫಿಪ್ಲಾಂಟೇಶನ್ ಕೂಡ ಇದೆಎಂದು ಹೇಳುತ್ತಾರೆ ನನಗೆ ರೈತರ ಕಷ್ಟವೇನೆಂಬುದು ಚೆನ್ನಾಗಿ ಗೊತ್ತು ಎಂದು ಹೇಳುತ್ತಾರೆ. ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳು ಕೂಡ ಅನೇಕ ಸಾರಿ ಹೇಳಿದ್ದಾರೆ. ಆದರೆ ಸದ್ಯ ಪ್ರೈಮಿನಿಸ್ಟರ್ ಮಾತ್ರ ಹೇಳಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ ಈವತ್ತಿನ ದಿವಸ ರೈತರನ್ನು ಉದ್ಧಾರಮಾಡತಕ್ಕಂಥ ಕಾನೂನುಬದ್ಧವಾಗಿ ಇರತಕ್ಕಂಥ ಸರ್ಕಾರ ಎಷ್ಟರಮಟ್ಟಿಗೆ ಈ ನಿರ್ಣಯವನ್ನು ತಂದು ಉದ್ಧಾರ ಮಾಡುತ್ತದೆನ್ನುವುದನ್ನು ಗಮನಿಸಬೇಕು. ಮಾನ್ಯ ಮಿತ್ರರಾದ ಶ್ರೀಮಾನ್ ಮಂಜುನಾಥ್‌ನವರು ಹೇಳಿದಂತೆ ನಮ್ಮ ಪ್ರಾಂತ್ಯದಲ್ಲಿ ಎಷ್ಟೇ ಚೆನ್ನಾಗಿ ಬೆಳೆಯುತ್ತೇವೆಂದರೂ ಕೂಡ ಒಂದು ಎಕರೆಗೆ ೮ ಕ್ವಿಂಟಾಲ್‌ಗಿಂತಲೂ ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಶ್ರೀಮಾನ್ ವೀರಪ್ಪಗೌಡರು ಹೇಳಿದಹಾಗೆ ವಿಶೇಷವಾದ ಗಮನಕೊಟ್ಟು ಬೆಳೆಸಿದರೆ ೧೦ ಕ್ವಿಂಟಾಲ್‌ನಷ್ಟು ಬೆಳೆಬಂದರೆ ಅದು ಬಹಳ ದೊಡ್ಡದು. ಎಂಟು ಕ್ವಿಂಟಾಲ್ ಅಥವಾ ಹತ್ತು ಕ್ವಿಂಟಾಲ್ ಎಂದೇ ಇಟ್ಟುಕೊಳ್ಳೋಣ. ಇವರ ರೇಟ್ ಪ್ರಕಾರ ಒಂದು ಕ್ವಿಂಟಾಲ್‌ಗೆ ೬೦ ರೂಪಾಯಿಗಳನ್ನು ನಿಗದಿಮಾಡಿರುತ್ತಾರೆ. ಇವರಿಗೆ ವಯಸ್ಸಾದ ಹಾಗೆಲ್ಲ ರೇಟ್ ಕೂಡ ಕಡಿಮೆಯಾಗುತ್ತದೆಂದು ಕಾಣುತ್ತದೆ. ಹಿಂದೆ ಒಂದು ಕ್ವಿಂಟಾಲ್‌ಗೆ ೧೦೦ ರೂಪಾಯಿ ಬೆಲೆಯನ್ನು ಕೊಡುತ್ತಿದ್ದುದು ಹಠಾತ್ತನೆ ೪೦ ರೂಪಾಯಿಗಳನ್ನು ಕೆಳಕ್ಕೆ ಇಳಿಸುವ ಪ್ರಯತ್ನ ಮಾಡಿದ್ದಾರೇದರೆ, ಒಂದು ಎಕರೆಯಲ್ಲಿ ಬೆಳೆಯತಕ್ಕಂಥ ಬತ್ತ ೧೦ ಕ್ವಿಂಟಾಲ್ ಎಂದರೆ ೧,೦೦೦ ರೂಪಾಯಿ ಎಂದರೆ ೬೦೦ ರೂಪಾಯಿಗಳಷ್ಟಾಗುತ್ತದೆ ಈ ೧೦ ಕ್ವಿಂಟಾಲ್ ಬತ್ತವನ್ನು ಬೆಳೆಯಲು ಒಂದು ಎಕರೆಗೆ ತಗಲತಕ್ಕ ಖರ್ಚು ಸುಮಾರು ೧,೧೦೦ ರೂಪಾಯಿಗಳಷ್ಟಾಗುತ್ತದೆ ಗೊಬ್ಬರ, ಕೂಲಿ, ಸಲಕರಣೆಗಳು ಇವೆಲ್ಲಕ್ಕು ಕೂಡ ನಿಜವಾಗಿ ತಗಲತಕ್ಕ ವೆಚ್ಚವಾಗಿರುತ್ತದೆ. ಇದರಿಂದ ಒಬ್ಬ ರೈತನಿಗೆ ೨೦೦ ರೂಪಾಯಿಗಳಿಂದ ೫೦೦ ರೂಪಾಯಿಗಳವರೆಗೆ ನಷ್ಟವುಂಟಾಗುತ್ತದೆ. ಹೀಗರಬೇಕಾದರೆ ಲೆವಿಯನ್ನು ವಸೂಲು ಮಾಡುವುದಕ್ಕೆ ಇವರು ಹೋಗುತ್ತಾರೆ. ವಾಸ್ತವಿಕವಾಗಿ ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕು. ಯಾವ ಆಧಾರದಮೇಲೆ ರೇಟನ್ನು ಫಿಕ್ಸ್ ಮಾಡಿದ್ದೀರೆಂದು, ಇದಕ್ಕೆ ಉತ್ತರ ಕೊಡಿ ಎಂದು ಕೇಳಿದರೆ, ಕೇಂದ್ರ ಸರ್ಕಾರದವರು ನಿರ್ಧಾರ ಮಾಡಿದ್ದಾರೆಂದು ಹೇಳುತ್ತಾರೆ. ಬತ್ತದ ಬೆಲೆಯನ್ನು ನಿರ್ಧಾರಮಾಡಲು ಕೇಂದ್ರ ಸರ್ಕಾರದವರು ಯಾರು ಎಂದು ಕೇಳುತ್ತೇನೆ? ಅವರಿಗೆ ಮಣ್ಣಿನ ವಾಸನೆ ತಿಳಿದಿರುತ್ತದೆಯೇ. ಮಣ್ಣಿನ ಮಕ್ಕಳು ಅಧಿಕಾರದ ಗದ್ದುಗೆಯಲ್ಲಿ ಯಾರಾದರೂ ಇದ್ದಾರೆಯೇ. ರೈತರ ಕಷ್ಟಕಾರ್ಪಣ್ಯಗಳನ್ನು ತಿಳಿದಿರತಕ್ಕಂಥವರು ಯಾರಾದರೂ ಇದ್ದಾರೆಯೇ ಎಂದು ಕೇಳಬೇಕಾಗಿದೆ. ಸಿನಿಮಾಗಳಲ್ಲಿ ಟೆಲಿವಿಷನ್‌ಗಳಲ್ಲಿ ರೈತರು ಎಷ್ಟು ಮುಂದುವರಿದಿದ್ದಾರೆ, ಎಷ್ಟು ಚೆನ್ನಾಗಿ ಕೆಲಸಮಾಡುತ್ತಿದ್ದಾರೆಂದು ತೋರಿಸುವ ಕೆಲಸಮಾತ್ರ ನಡೆಯುತ್ತಿದೆ. ಮಣ್ಣಿನ ಮಕ್ಕಳು ಅವರ ಕಷ್ಟವೇನು ಅವರು ಬೆವರನ್ನು ಹೇಗೆ ಸುರಿಸುತ್ತಿದ್ದಾರೆ, ಎಷ್ಟು ಹಣ ಖರ್ಚುಮಾಡುತ್ತಿದ್ದಾರೆ, ಬರತಕ್ಕಂಥ ಉತ್ಪತ್ತಿ ಅವರಿಗೆ ಎಷ್ಟು ಇದನ್ನು ಯಾರು ಯೋಚನೆ ಮಾಡುತ್ತಿದ್ದಾರೆ ಐ.ಎ.ಎಸ್. ಆಫೀಸರ್‌ಗಳು ಕುಳಿತಿದ್ದಾರೆ, ಅವರಿಗೆ ಇಂಗ್ಲೆಂಡ್ ಅಮೇರಿಕಾಕ್ಕೆ ಹೋಗುವ ಯೋಚನೆಯಲ್ಲಿರುತ್ತಾರೆ. ಭತ್ತದ ದೂಳು ತಾಕದ ಜನ ದೆಹಲಿಯಲ್ಲಿ ಅಧಿಕಾರದ ಗದ್ದುಗೆಯಲ್ಲಿ ಕುಳಿತುಕೊಂಡಿರತಕ್ಕಂಥ ಜನ ಹಳ್ಳಿಗಳಲ್ಲಿ ರೈತರು ಬೆಳೆಯತಕ್ಕಂಥ ಬೆಳೆಯಮೇಲೆ ಬೆಲೆಗಳನ್ನು ನಿರ್ಧಾರಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಬೇರೆ ಬೇರೆ ಕಡೆಯಿಂದ ಬಂದಿರತಕ್ಕಂಥ ಅಧಿಕಾರಿಗಳು ಎಕ್ಸ್‌ಪರ್ಟ್ಸ್‌ಗಳು ಕೇಂಬ್ರಿಡ್ಜ್‌ನಲ್ಲಿ ಬಂದಿರತಕ್ಕಂಥವರು ನಮ್ಮ ದೇಶದಲ್ಲಿ ಶಾಲಾಕಾಲೇಜುಗಳು ಇರಲಿಲ್ಲವೇ ಎಂದು ಕೇಳಬೇಕಾಗಿದೆ. ಅಂಥವರಿಗೆ ನಮ್ಮ ದೇಶದ ಆದರಲ್ಲೂ ರೈತಾಪಿಗಳ ಬಗ್ಗೆ ಅವರಿಗೆ ಖಂಡಿತವಾಗಿಯೂ ಅರ್ಥವಾಗಲು ಸಾಧ್ಯವಿಲ್ಲ.

ನಮ್ಮ ಊರಿನಲ್ಲಿ ಬೆಳೆಯುತಕ್ಕ ಬೆಳೆಗೆ ಅವರು ದೆಹಲಿಯಲ್ಲಿ ಬೆಲೆ ನಿರ್ಧಾರ ಮಾಡತಕ್ಕ ಪರಿಪಾಠ ಏನಿದೆ ಅದಕ್ಕಿಂತಲೂ ಖೇದಕರವಾದ, ಖಂಡನೀಯವಾದ ನಾಚಿಕೆಗೆಟ್ಟಂಥ ನೀತಿ ಇನ್ನಾವುದೂ ಇಲ್ಲ. ರಾಜ್ಯಸರ್ಕಾರ ಯಾತಕ್ಕೆ ನಿರ್ಧಾರ ಮಾಡಬಾರದು? ಈಗ ರಾಜ್ಯಸರ್ಕಾರಗಳು ಎಲ್ಲಿವೆ. ಎಲ್ಲಾ ಮುನಿಸಿಪಾಲಿಟಿಗಳು. ಪ್ರತಿಯೊಂದಕ್ಕೂ ದೆಹಲಿಯ ಆಣತಿಯಾಗಬೇಕು; ಅದರಂತೆ ಇವರು ಕುಣಿಯಬೇಕು. ಇಷ್ಟು ಡಿಗ್ರಿ ಬಗ್ಗಿ ನಮಸ್ಕಾರ ಮಾಡಬೇಕು, ಇಷ್ಟು ಡಿಗ್ರಿಯಲ್ಲಿ ಕುಳಿತುಕೊಳ್ಳಬೇಕು. ಎಷ್ಟು ಹೊತ್ತು ಹೇಳಿರಬೇಕು, ಇದೂ ಕೂಡ ದೆಹಲಿಯಿಂದ ಬರಬೇಕು ಎಂದು ಕಾಣುತ್ತೆ. ದೆಹಲಿಯಲ್ಲಿ ಗದ್ದುಗೆಯಲ್ಲಿ, ಅಧಿಕಾರದಲ್ಲಿರತಕ್ಕ ಜನ ಯಾವುದೇ ದೃಷ್ಟಿಯಿಂದಲೂ ವಾಸ್ತವಿಕವಾಗಿ ರೈತಾಪಿ ಜನರ,

ಬಡವರ, ಹಳ್ಳಿಯ ಜನರ ಕಷ್ಟಕಾರ್ಪಣ್ಯಗಳನ್ನು ಅರಿತವರಲ್ಲ. ಅವರು ನಿರ್ಧಾರ ಮಾಡತಕ್ಕ ಬೆಲೆಯನ್ನು ನಮ್ಮ ರೈತರಿಗೆ ಅನ್ವಯಿಸಿ, ಆ ಬೆಲೆಗೆ ಕೊಡು ಎಂದು ರೈತರ ಬೆನ್ನುಮೂಳೆ ಮುರಿಯುತ್ತಾ ಇರುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ, ಇವತ್ತು ರೈತರು ಲೆವಿ ಕೊಡದೇ ಇದ್ದರೆ ಒಂದಕ್ಕೆರಡಷ್ಟು ವಸೂಲು ಮಾಡುವುದಕ್ಕೆ ತಿದ್ದುಪಡಿ ತಂದಿದ್ದಾರೆ. ನಮ್ಮ ಶಿವಮೊಗ್ಗದಲ್ಲಿ ತೀರ್ಥಹಳ್ಳಿ, ಹೊಸನಗರ, ಸಾಗರ, ಶಿಕಾರಿಪುರದಲ್ಲಿ ಲೆವಿ ತೆಗೆದುಕೊಳ್ಳಿ ಎಂದು ಕೊಟ್ಟರೂ ತೆಗೆದುಕೊಳ್ಳುತ್ತಿಲ್ಲ. ಇದು ನನಗೆ ಬಂದಂಥ ಖಚಿತವಾದ ಸುದ್ದಿ. ಅಲ್ಲಿ ಭತ್ತ ತೆಗೆದುಕೊಂಡುಹೋಗಿ ಲೆವಿ ರೇಟಿಗೆ ಭತ್ತ ತೆಗೆದುಕೊಳ್ಳಿ ಎಂದು ಹೇಳಿದರೂ ತೆಗೆದುಕೊಳ್ಳುತ್ತಿಲ್ಲ. ರೈತರು ಲೆವಿ ಕೊಡದಿದ್ದರೆ ಅವರ ಹತ್ತಿರ ಡಬ್ಬಲ್ ವಸೂಲಿ ಮಾಡುತ್ತೀರಿ, ಅವರಿಗೆ ಪೆನಾಲ್ಟಿ ಹಾಕುತ್ತೀರಿ. ಆದರೆ ಲೆವಿ ಕೊಡುತ್ತೇವೆ ಎಂದರೂ ತಗೆದುಕೊಳ್ಳದೇ ಇರುವ ಸರ್ಕಾರಕ್ಕೆ ಎಷ್ಟು ಪೆನಾಲ್ಟಿ ಹಾಕಬೇಕು? ಇವತ್ತು ಮಳೆಗಾಲ ಬರುತ್ತಿದೆ. ಬೇಸಾಯ ಪ್ರಾರಂಭ ಮಾಡಬೇಕು. ರೈತರ ಹತ್ತಿರ ದುಡ್ಡಿಲ್ಲ. ಕಣ್ಣೀರಿಡುತ್ತಿದ್ದಾರೆ. ಕೊಳ್ಳಿರಿ ಎಂದರೆ ದುಡ್ಡಿಲ್ಲ. ಇವರು ಇಲ್ಲಿಂದ ದೊಡ್ಡ ಸ್ಟೇಟ್‌ಮೆಂಟ್ ಕೊಡುತ್ತಾರೆ. ಆದರೆ ಜಿಲ್ಲಾಧಿಕಾರಿಗಳು ತಮ್ಮ ಅಸಹಾಯಕತೆಯನ್ನು ಹೇಳುತ್ತಾರೆ. ಬ್ಯಾಂಕಿಗೆ ಹೋದರೆ ದುಡ್ಡಿಲ್ಲ. ಒಂದೂವರೆ ತಿಂಗಳಿಂದ ಭತ್ತ ಹಾಕಿದರೂ ಇವತ್ತಿನವರೆಗೂ ದುಡ್ಡು ಸಿಗದೇ ಇರುವಂಥ ಜಾಗಗಳು ಬೇಕಾದಷ್ಟು ಇವೆ. ಸೊಸೈಟಿಗಳಲ್ಲೂ ದುಡ್ಡಿಲ್ಲ; ಬೇಡ ಎಂದು ಹೇಳುತ್ತಾರೆ. ಇದು ಪ್ರತಿ ಹಳ್ಳಿ ಹಳ್ಳಿಯಲ್ಲಿಯೂ ನೋಡುತ್ತಿರತಕ್ಕ ನಿಜವಾದ ಚಿತ್ರ. ಒಂದು ಪ್ರಶ್ನೆ ಮಾನ್ಯ ಸರ್ಕಾರದವರು ಕೇಳಬಹುದು. ನೀವು ಯಾತಕ್ಕೆ ಬೆಳೆದಿರಿ ಎಂದು? ರೈತರಿಗೂ ಬುದ್ಧಿ ಕಡಿಮೆ. ಒಂದು ವರ್ಷ ಎರಡು ವರ್ಷ ಎಲ್ಲರೂ ಈ ವರ್ಷ ಬೆಳೆ ಬೆಳೆಯುವುದಿಲ್ಲ ಎಂದು ಒಂದು ಸಾರಿ ನಿರ್ಧಾರ ಮಾಡಿದರೆ ಆಗ ತಕ್ಕ ಉತ್ತರ ದೊರಕುತ್ತದೆ. ಈಗ ರೈತರು ಬೆಳೆದಿದ್ದೇ ತಪ್ಪಾಗಿದೆ. ಗ್ರೋ ಮೋರ್ ಫುಡ್ ಎಂದು ಜಾಹಿರಾತು ತೋರಿಸಿ, ಸಿನಿಮಾ ತೋರಿಸಿ ಮಾಯಾಬಜಾರ್ ಮಾಡುವುದು ಇವರೇ, ಬೆಳೆದಂತಹ ಆಹಾರಧಾನ್ಯಗಳನ್ನು ಕೊಂಡುಕೊಳ್ಳತಕ್ಕ ಯೋಗ್ಯತೆ ಇಲ್ಲದೇ ಇರುವವರೂ ಇವರೇ. ೧೫ ದಿವಸದ ಹಿಂದೆ ಎಲ್ಲಾ ಪತ್ರಿಕೆಗಳಲ್ಲಿ ಒಂದು ವಿಷಯ ಬಂತು. ಈಗ ಪತ್ರಿಕೆಗಳೆಲ್ಲಾ ಸರ್ಕಾರೀ ಗೆಜೆಟ್ ಆಗಿವೆ. ಆ ಸರ್ಕಾರಿ ಗೆಜೆಟ್ಟಿನಲ್ಲಿ ಒಂದು ವಿಷಯ ಬಂದಿತ್ತು. ಅಮೆರಿಕಾದಿಂದ ಗೋಧಿ ಭತ್ತ ಕೊಳ್ಳುವ ಒಪ್ಪಂದಕ್ಕೆ ಸಹಿ ಹಾಕಲಾಯಿತು ಎಂದು. ನನಗೆ ಗೊತ್ತಿರುವ ಪ್ರಕಾರ ಒಂದು ಕ್ವಿಂಟಾಲ್ ಭತ್ತಕ್ಕೆ ೧೨೦ ರೂಪಾಯಿ ಕೊಟ್ಟು ಅಮೆರಿಕಾ ಸರ್ಕಾರದಿಂದ ನಮ್ಮ ಸರ್ಕಾರ ಕೊಳ್ಳುತ್ತದೆ ಎಂದು ಬಂದಿತು. ಇದು ಸತ್ಯ. ಇಲ್ಲಿರುವ ರೈತನಿಗೆ ೮೦ ರೂಪಾಯಿ ಕೊಡುವುದಕ್ಕೆ ಹಿಂದುಮುಂದು ನೋಡುತ್ತಿದ್ದೀರಿ, ಕೊಳ್ಳುವುದಿಲ್ಲ. ನಾವು ಇಲ್ಲಿ ಬೆಳೆದಿದ್ದನ್ನು ಕೊಂಡುಕೊಳ್ಳುವುದಕ್ಕೆ ಏನು ಅಭ್ಯಂತರ. ಅಮೆರಿಕಾದಿಂದ ಯಾತಕ್ಕೆ ಕೊಳ್ಳಬೇಕಾಗಿದೆ. ಇಂಡಿಯಾ ದೇಶದಲ್ಲಿ ಗೋಧಿ ಮತ್ತು ಭತ್ತದ ಬೆಳೆ ಅಪಾರವಾಗಿ, ಅಧಿಕವಾಗಿ ಹಿಂದಿಗಿಂತಲೂ ದ್ವಿಗುಣವಾಗಿ ಬೆಳೆ ಬಂದಿದೆ. ಇದನ್ನು ಕೊಳ್ಳುವುದಕ್ಕೆ ತಯಾರಿಲ್ಲ. ಅಮೆರಿಕಾದಿಂದ ೧೨೦ ರೂಪಾಯಿ ಕೊಟ್ಟು ತರುತ್ತೀರಿ. ಯಾರು ತಿನ್ನುವುದಕ್ಕೆ? ನಮ್ಮ ದೇಶದಲ್ಲಿ ಕೆಲವು ಜನ ಈ ದೇಶದಲ್ಲಿ ಬೆಳೆದಿದ್ದನ್ನು ಉಪಯೋಗಿಸುವುದಿಲ್ಲ. ಆ ಪರದೇಶಿಗಳಿಗೆ ಇಂಗ್ಲೇಂಡ್, ಅಮೆರಿಕಾ, ರಷ್ಯಾ ದೇಶದಿಂದ ಬಂದಿದ್ದನ್ನು ಉಪಯೋಗಿಸಿದರೆ ಮಾತ್ರ ಅವರಿಗೆ ಆರೋಗ್ಯಕರ. ಆದ್ದರಿಂದ ಇವತ್ತು ಕೇಂದ್ರ ಸರ್ಕಾರದವರು ಅಮೆರಿಕಾದಿಂದ ಯಾತಕ್ಕೆ ಕೊಳ್ಳಬೇಕು ಎಂಬ ಬಗ್ಗೆ ಸರ್ಕಾರ ವಿವರಣೆ ಕೊಡಬೇಕು. ಎಷ್ಟು ಕೊಳ್ಳುತ್ತಾರೆ, ಯಾರಿಗಾಗಿ ಕೊಳ್ಳುತಾರೆ. ನಾವೇ ಹೊರದೇಶಗಳಿಗೆ ಕೊಡುವ ಸ್ಥಿತಿಯಲ್ಲಿರುವಾಗ ಅಮೆರಿಕಾದಿಂದ ಕೊಂಡುಕೊಳ್ಳುವ ಅಗತ್ಯತೆ ಏನು? ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ಹೆಚ್ಚಾಗಿ ಗೋಧಿ ಬೆಳೆದು ಗೋಧಿ ಕೊಳ್ಳುವವರು ದಿಕ್ಕಿಲ್ಲದೆ ಒದ್ದಾಡುತ್ತಿದ್ದಾರೆಂಬುದು ಪತ್ರಿಕೆಗಳಲ್ಲಿ ಬಂದಿದೆ. ನಮ್ಮ ದೇಶದಲ್ಲಿ ಇವತ್ತು ಆಹಾರಧಾನ್ಯಗಳಿಗೆ ಕೊರತೆ ಇಲ್ಲ. ಹಾಗಿದ್ದರೂ ಕೂಡ ೧೨೦ ರೂಪಾಯಿ ಕೊಟ್ಟು ಅಮೆರಿಕಾದಿಂದ ತರಿಸುತ್ತಿದ್ದಾರೆ. ನಮ್ಮ ರೈತರ ಹತ್ತಿರ ೮೦ ರೂಪಾಯಿ ಕೊಟ್ಟು ತೆಗೆದುಕೊಳ್ಳುವವರು ಬೇರೆ ದೇಶದಿಂದ ೧೨೦ ರೂಪಾಯಿ ಕೊಟ್ಟು ಯಾತಕ್ಕೆ ತರಿಸುತ್ತಿದ್ದೀರಿ ಎಂಬ ಬಗ್ಗೆ ವಿವರಣೆ ಕೊಡಬೇಕು. ಇನ್ನು ಎಸೆನ್‌ಷಿಯಲ್ ಕಮಾಡಿಟೀಸ್ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಸೀಮೆಎಣ್ಣೆ, ಸಕ್ಕರೆ, ಹಾಲಿನಪುಡಿ, ಹೆಗ್ಗಣ, ಇಲಿ, ಇವೆಲ್ಲಾ ಇವರ ಇಲಾಖೆಗೆ ಸೇರಿದ್ದು. ನನಗೆ ತಿಳಿದಿರುವ ಪ್ರಕಾರ ಹಿಂದೆ ಓದಿದ ಪ್ರಕಾರ ೩೦-೩೫ ಕೋಟಿ ಇಲಿಗಳು ನಮ್ಮ ದೇಶದಲ್ಲಿವೆಯೆಂದು ಒಂದು ಸಾರಿ ಲೆಕ್ಕ ಕಂಡುಹಿಡಿದಿದ್ದರು. ಒಂದು ಇಲಿ ಒಂದು ದಿವಸಕ್ಕೆ ಒಂದು ಚಾವಿನಷ್ಟು ಆಹಾರಧಾನ್ಯ ತಿಂದರೂ ೩ ತಿಂಗಳಿಗೆ ೧ ನೂರು ಟನ್ ಆಹಾರಧಾನ್ಯವಾಗುತ್ತದೆ. ಅದನ್ನು ಲೆಕ್ಕಹಾಕುವ ತಜ್ಞರಿದ್ದಾರೆ. ಇಲಿಗಳ ನಾಶ ಮಾಡುವುದರಿಂದ ಬೇಕಾದಷ್ಟು ಆಹಾರಧಾನ್ಯವನ್ನು

ಉಳಿಸುವುದಕ್ಕೆ ಸಾಧ್ಯ ಎಂದು ವೈಜ್ಞಾನಿಕವಾಗಿ ಲೆಕ್ಕ ಹಾಕಲಾಗಿದೆ. ಆದರೆ ನಮ್ಮ ರಾಜ್ಯಸರ್ಕಾರಕ್ಕೇ ಆಗಲಿ, ಕೇಂದ್ರ ಸರ್ಕಾರಕ್ಕೇ ಆಗಲಿ, ಇಲಿ ಹಿಡಿಯುವುದಕ್ಕೆ ಯೋಗ್ಯತೆ ಇಲ್ಲ. ಇಂಥ ಸರ್ಕಾರವನ್ನು ಇಟ್ಟುಕೊಂಡು ನಮ್ಮ ಜನರು ಇಲಿ ಹಿಡಿಯುವುದಕ್ಕೆ ಆಗದೇ ಇರುವ ಜನಕ್ಕೆ ಬೆಂಬಲ ಕೊಡುತ್ತಾರೆ. ಸೊಸೈಟಿ ಇಲಿಗಳು ಸರ್ಕಾರಿ ಹೆಗ್ಗಣಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಬಗ್ಗೆ ಪ್ರಸ್ತಾಪಿಸುವುದಕ್ಕೆ ಅವಕಾಶ ಇಲ್ಲ.

ಶ್ರೀ ಹಂಜಿ ಶಿವಣ್ಣ.—ಹುಲಿ ಹಿಡಿದಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ನಿಮಗೆ ಕಾಣುತ್ತಾ ಇರುವುದು ಹುಲಿ. ಅದರ ಒಳಗಡೆ ಇರುವುದು ಕತ್ತೆ.

ಶ್ರೀಮತಿ ಇ. ಇ. ವಾಜ್.—ಸದನದ ಇಲಿಗಳು ಎಂದು ಹೇಳಿ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಇದರಲ್ಲಿ ಹಿರಿಯ ಪಾತ್ರ ವಹಿಸತಕ್ಕವರು. ಕುವೆಂಪು ಅವರು ಬೊಮ್ಮನಹಳ್ಳಿಯ ಕಿಂದರಜೋಗಿ ಎಂಬ ಪದ್ಯದಲ್ಲಿ, ಅಕ್ಕಿಲೆ, ಅವ್ವಿಲೆ, ತಂಗಿಲೆ, ತಮ್ಮಿಲೆ, ಅಣ್ಣಿಲೆ ಎಂದು ಹೇಳಿದ್ದಾರೆ. ಹಾಗೆ ನೀವು ಈ ಸದನದ ಅಕ್ಕಿಲೆ. ನಾವೆಲ್ಲಾ ತಮ್ಮಿಲೆಗಳು. ಇವತ್ತು ಹುಲಿ ಹಿಡಿಯುತ್ತೇವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅವರು ಯಾವುದನ್ನು ಹುಲಿ ಎಂದು ತಿಳಿದುಕೊಂಡಿದ್ದಾರೆಯೋ ಅದು ಹುಲಿಯಲ್ಲ, ಮೇಲುಗಡೆ ಹುಲಿ ಚರ್ಮ ಇದೆ. ಮೇಲುಗಡೆ ಇರುವ ಹೊರೆ ತೆಗೆದರೆ ಕತ್ತೆ ಎಂಬುದು ಗೊತ್ತಾಗುತ್ತದೆ. ಸ್ವಲ್ಪ ಕಾಲ ಕಾದು ನೋಡಿ. ಈ ತಿದ್ದುಪಡಿ ಪ್ರಕಾರ ರೈತನಿಗೆ ಯಾವ ರೀತಿಯ ಸ್ವಾತಂತ್ರ್ಯವೂ ಉಳಿವಲ್ಲ. ಕ್ಲಾಸ್ 3 'ಎಫ್'ನಲ್ಲಿ "for requiring any person holding in stock or likely to hold in stock or engaged in the manufacture or production or processing of or in the business of buying or selling any essential commodity" ಇತ್ಯಾದಿ ಎಂದು ಹೇಳಿದ್ದೀರಿ ಬೀಜ ಬಿತ್ತಿದ ಕೂಡಲೇ ಲೆವಿ ವಿಗದಿ ಮಾಡುವುದು. ಇದು ಹೊಸ ವಿಷಯ. ಇದು 20 ಪಾಯಿಂಟ್ ಪ್ರೋಗ್ರಾಂ ಒಳಗೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ದೇಶದಲ್ಲಿ ಮುಂದೆ ಯಾರೂ ಯಾವ ಕಾಲದಲ್ಲಿಯೂ ಕನಸು ನನಸಿನಲ್ಲಿಯೂ ಕಲ್ಪನೆ ಮಾಡಲಿಕ್ಕೆ ಸಾಧ್ಯವಿಲ್ಲದಂಥ ಕಾಯಿದೆಯನ್ನು ತರುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಾಮಾಣಿಕವಾದ ತಮ್ಮ ಅಭಿಪ್ರಾಯವನ್ನು ಕೊಡಬೇಕು ಎಂದು ನಾನು ಕೇಳುತ್ತೇನೆ. ಯಾರೋ ಒಬ್ಬರಿಗೆ ಇದರ ಬಗ್ಗೆ ಸಮ್ಮತಿ ಇದ್ದರೂ ಸಹ ಹೇಳಿ ನಾನು ಒಪ್ಪಿಕೊಳ್ಳುತ್ತೇನೆ. ಖಂಡಿತವಾಗಿಯೂ ಯಾರಿಗೂ ಇದರ ಬಗ್ಗೆ ಸಮ್ಮತಿ ಇಲ್ಲ. ಆದ್ದರಿಂದ ಇಂಥ ಒಂದು ತಿದ್ದುಪಡಿಯನ್ನು ತರುವುದು ಯೋಗ್ಯವೇ ಎನ್ನುವುದನ್ನು ನಾನು ಕೇಳುತ್ತೇನೆ. ಇವತ್ತು ನಮ್ಮ ಜಿಲ್ಲೆಯಲ್ಲಿ, ಇದರ ಒಂದು ಕಾನೂನು ಬಂದಮೇಲೆ ರೈತರು ಭತ್ತ ಬೆಳೆದು ಕಷ್ಟ ಅನುಭವಿಸುತ್ತಿದ್ದಾರೆ. ಇವತ್ತು ಹೆಚ್ಚು ಬೆಳೆಯನ್ನು ಬೆಳೆಯುತಕ್ಕ ರೈತರು ಬೇಕಾದಷ್ಟು 20-30 ಚೀಲ ಭತ್ತವನ್ನು ಬೆಳೆದುಕೊಂಡು ಕಾಲ ಕಳೆಯುತ್ತಿದ್ದಾರೆ. ಏಕೆಂದರೆ ಹೆಚ್ಚು ಬೆಳೆದವರ ಕೊಂಡುಕೊಳ್ಳುವವರು ದಿಕ್ಕು ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕು. ಉತ್ತರ ಕೊಡದಿದ್ದರೆ ಬೆಳೆದಂಥ ಭತ್ತವನ್ನು ತೆಗೆದುಕೊಳ್ಳತಕ್ಕ ಏರ್ಪಾಡನ್ನು ಮಾಡಬೇಕು. ಮಾನ್ಯ ಸರ್ಕಾರದ ಪರವಾಗಿಯಿಂದ ಸರಿಯಾದ ಉತ್ತರವನ್ನು ಕೊಡಬೇಕು ಇಷ್ಟು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಳ್ಳಿಯ ಜನಗಳ ಒಂದು ಕಳಕಳಿಯ ವ್ಯಾಧಿಯನ್ನು ತಮ್ಮದೇ ಆದ ಶೈಲಿಯಲ್ಲಿ ಮಾನ್ಯ ಲಿಂಗಪ್ಪನವರು ಹೇಳಿದ್ದಾರೆ. ತಮ್ಮ ಗಮನಕ್ಕೆ ಸಾಕಷ್ಟು ವಿಷಯಗಳನ್ನು ತಂದಿದ್ದಾರೆ. ನಾನಾದರೂ ಮೂಲಭೂತವಾಗಿ ಪ್ರಶ್ನೆ ಮಾಡತಕ್ಕದ್ದು, ಇಷ್ಟೇ ಈ ಲೆವಿ ಪದ್ಧತಿ ಬೇಕೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕಾದಂಥ ಕಾಲ ಬಂದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ದೈವವಶಾತ್, ಸಕಾಲಕ್ಕೆ ಸರಿಯಾಗಿ ಮಳೆ ಬಂದು ಎರಡು ವರ್ಷ ಬಂದಿದ್ದರಿಂದ ಹೆಚ್ಚಿನ ತಲೆನೋವು ಕಡಿಮೆ ಆಯಿತು. ಆದ್ದರಿಂದ ನಾನು ಮಾನ್ಯ ಆಹಾರ ಸಚಿವರಿಗೆ ನಮ್ಮ ಶುಭಾಶಯಗಳನ್ನು ಕೊಡಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಲೆವಿ ಯಾರಿಗೋಸ್ಕರ ಬೇಕು. ಇದರಿಂದ ಯಾರಿಗೆ ಪ್ರಯೋಜನವಾಗಿದೆ ಎನ್ನುವುದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾದಂಥ ಪರಿಸ್ಥಿತಿ ಬಂದಿದೆ. ಅನೇಕ ಫೇರ್ ಪ್ರೈಸ್ ಡಿಪೋಗಳಲ್ಲಿ ಅಕ್ಕಿಯನ್ನು ಒದಗಿಸಿಕೊಟ್ಟಿದ್ದಾರೆ ಒದಗಿಸಿಕೊಟ್ಟಿರತಕ್ಕ ಅಕ್ಕಿಯಲ್ಲಿ ಎಷ್ಟು ಅಕ್ಕಿಯನ್ನು ಜನರು ಡ್ರಾ ಮಾಡಿದ್ದಾರೆ, ಎಷ್ಟು ಮಾಡಿದ್ದಾರೆ ಎಷ್ಟು ಜನ ಸಕ್ಕರೆ ಅಲ್ಲದೇ ಬೇರೆ ಸಾಮಾನುಗಳನ್ನು ರೇಷನ್ ಡಿಪೋಗಳಿಂದ ತೆಗೆದುಕೊಂಡು ಹೋಗಿದ್ದಾರೆ,

ಎಷ್ಟು ಎನ್ನುವುದನ್ನು ತಾವು ನೋಡಬೇಕು. ಬೆಂಗಳೂರು ನಗರದಲ್ಲಿ ಹೇಳಬೇಕಾದರೆ, ಶೇಕಡ ೮೦ ರಷ್ಟು ಜನ ಅಕ್ಕಿಯನ್ನು ತೆಗೆದುಕೊಳ್ಳುತ್ತಿಲ್ಲ. ಸಕ್ಕರೆಗೋಸ್ಕರ ಮಾತ್ರ ರೇಷನ್ ಕಾರ್ಡುಗಳನ್ನು ಇಟ್ಟುಕೊಂಡಿದ್ದಾರೆ. ಹೆಚ್ಚಾಗಿ ರೇಷನ್ ಕಾರ್ಡುಗಳನ್ನು ಇಟ್ಟುಕೊಂಡಿರುವವರು ಸ್ಲಂಗಳಲ್ಲಿರತಕ್ಕವರು. ಇವರಲ್ಲಿರತಕ್ಕ ಸಕ್ಕರೆ ಎಲ್ಲಾ ಬ್ಲಾಕ್ ಮಾರ್ಕೆಟ್‌ಗೆ ಹೋಗುತ್ತದೆ. ಕೆಲವರು ಬಡವರು ಅಕ್ಕಿಯನ್ನು ತೆಗೆದುಕೊಳ್ಳುತ್ತಾರೆಯೇ ಹೊರತು ಬೇರೆ ಯಾರೂ ಕೂಡ ಅಕ್ಕಿಯನ್ನು ತೆಗೆದುಕೊಳ್ಳುತ್ತಿಲ್ಲ. ಹೀಗಿರತಕ್ಕ ಪರಿಸ್ಥಿತಿಯಲ್ಲಿ ರೈತರನ್ನು ಏಕೆ ಶೋಷಣೆ ಮಾಡಬೇಕು ಎನ್ನತಕ್ಕ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಹಾಕಬೇಕಾಗುತ್ತದೆ. ಒಂದು ಕಾಲದಲ್ಲಿ ಸಾಕಾದಷ್ಟು ಅಕ್ಕಿ ಸಿಕ್ಕುತ್ತಿರಲಿಲ್ಲ. ಬೆಂಗಳೂರು, ಕೆ.ಜಿ.ಎಫ್. ಮುಂತಾದ ಕಡೆ ಕೈಗಾರಿಕೆ ಕೇಂದ್ರಗಳಲ್ಲಿ ಬೆಳೆ ಇಲ್ಲದಿರತಕ್ಕ ಕೇಂದ್ರಗಳಲ್ಲಿ ಅಕ್ಕಿಯನ್ನು ತೆಗೆದುಕೊಳ್ಳುತ್ತಿದ್ದರು. ಈ ಪರಿಸ್ಥಿತಿ ಈಗ ಬದಲಾವಣೆಯಾಗಿದೆ. ನಾನು ರೈತ ಅಲ್ಲದಿದ್ದರೂ, ರೈತರಿಗಿರತಕ್ಕ ತೊಂದರೆಗಳನ್ನು ಕೇಳಿದ್ದೇನೆ. ರೈತರು ಇನ್ನು ಮೇಲೆ ನಮಗೆ ಎಷ್ಟು ಧಾನ್ಯ ಬೇಕೋ ಅಷ್ಟನ್ನು ಬೆಳೆದುಕೊಂಡು ಹೋಗುತ್ತಾರೆ. ವಾಟರ್ ರೇಟ್ ಜಾಸ್ತಿ ಮಾಡಿದ್ದಾರೆ, ಪಂಪ್‌ಸೆಟ್ಟುಗಳ ಹಣ ಕೊಡಬೇಕು. ಈ ಎಲ್ಲಾ ಚಾರ್ಜುಗಳನ್ನು ಲೆಕ್ಕ ಹಾಕಿಕೊಂಡು ಹೋದರೆ, ಈಗಿನ ಪರಿಸ್ಥಿತಿಯಲ್ಲಿ ಅವರು ಜೀವನ ಮಾಡುವುದೇ ಕಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಲೆವಿ ಕೊಡುವ ಭತ್ತವೂ ಸರಿಯಾಗಿರುವುದಿಲ್ಲ. ಅಂಗಡಿಗಳಿಗೆ ಬರತಕ್ಕ ಅಕ್ಕಿಯನ್ನು ನೋಡಿದರೆ, ಅದನ್ನು ಮನುಷ್ಯ ತಿನ್ನುವುದಕ್ಕೆ ಸಾಧ್ಯವೇ ಇಲ್ಲ. ಲೆವಿ ಅಕ್ಕಿಯನ್ನು ಅಂಗಡಿಯಿಂದ ತಂದು ಶುದ್ಧ ಮಾಡಿಸಿ, ಪಾಲಿಷ್ ಮಾಡಿ ತಿನ್ನಬೇಕಾದರೆ ಪಡಬೇಕಾದ ಶ್ರಮ, ಖರ್ಚು ಎಲ್ಲಾ ಲೆಕ್ಕ ಹಾಕಿದರೆ, ಅಕ್ಕಿಯ ಬೆಲೆ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಎಷ್ಟೋ ಕಡೆ ಲೆವಿಗೋಸ್ಕರ ಇಟ್ಟುಕೊಂಡ ಭತ್ತ ಎಂದು ಹೇಳುತ್ತಾರೆ. ಈಗ ಕೊಡತಕ್ಕ ಅಕ್ಕಿಯಲ್ಲಿ ವಿಪರೀತ ಭತ್ತ ಇರುತ್ತದೆ. ಪಾಲಿಷ್ ಮಾಡಿದ ಹೊರತು ಅದನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಅಲ್ಲದೆ ಇಳುವರಿಯೂ ಸಹ ವಿಪರೀತವಾಗಿ ಕಡಿಮೆಯಾಗುತ್ತದೆ. ಖಂಡಿತವಾಗಿಯೂ ಹೇಳಬೇಕಾದರೆ, ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಒಂದಾನೊಂದು ಕಾಲದಲ್ಲಿ ಇದರಿಂದ ಪ್ರಯೋಜನವಾಗುತ್ತಿತ್ತು ಎಂದು ಅನ್ನಿಸುತ್ತಿತ್ತು. ಆದರೆ ಲೆವಿ ಭತ್ತವನ್ನು ತೆಗೆದುಕೊಂಡು ರೇಷನ್ ಡಿಪೋಗಳಿಗೆ ಕೊಟ್ಟರೆ ಇದರಿಂದ ಯಾವ ವಿಧವಾದಂಥ ಪ್ರಯೋಜನವೂ ಆಗುವುದಿಲ್ಲ. ದಯಮಾಡಿ ಈ ಎಲ್ಲಾ ಅನಾನುಕೂಲಗಳನ್ನು ತರಿಸಿ ನೋಡಿ.

3-60 P. M.

ಯಾವ ರೇಷನ್ ಷಾಪುಗಳಲ್ಲಿ ಪೂರ್ತಿ ಯಾರೂ ರೇಷನ್ ಡ್ರಾ ಮಾಡಿಲ್ಲ. ಇದರಲ್ಲಿ ಹೆಚ್ಚು ಭಾಗ ರೇಷನ್ ಡ್ರಾ ಮಾಡಿರುವವರು ಹೋಟೇಲುಗಳವರು, ಮತ್ತು ಬೀದಿಯಲ್ಲಿ ಇಡ್ಲಿ ಮಾರುವವರು. ಇಂಥವರು ಮಾತ್ರ ಪೂರ್ತಿ ರೇಷನ್ ತೆಗೆದುಕೊಂಡು ಹೋಗಿ ಉಪಯೋಗಿಸುತ್ತಾರೆಯೇ ಹೊರತು, ಇದರಿಂದ ಹೆಚ್ಚು ಪ್ರಯೋಜನ ಆಗದೇ ಇರುವ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಇದರಿಂದ ರೈತರಿಗೆ ಮತ್ತು ಬಳಕೆದಾರರಿಗೆ ಇರುವ ತೊಂದರೆಯನ್ನು ನೋಡಿದರೆ ಇದರಿಂದ ಏನು ಪ್ರಯೋಜನವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಲೆವಿ ಬಗ್ಗೆ ರೈತರಿಗೆ ಎಷ್ಟು ತೊಂದರೆ ಇದೆ ಎಂಬುದು ಗ್ರಾಮಾಂತರದಿಂದ ಬಂದಂತಹ ಮಾನ್ಯ ಸದಸ್ಯರು ಸಾಕಷ್ಟು ದೂರನ್ನು ನಮ್ಮ ಮುಂದೆ ಹೇಳುತ್ತಿದ್ದಾರೆ. ಪಟ್ಟಣದಲ್ಲಿ ಇರುವ ತೊಂದರೆ ಪಟ್ಟಣದಲ್ಲಿ ವಾಸ ಮಾಡತಕ್ಕ ನಮಗೆ ಗೊತ್ತಿದೆ. ಈ ದೃಷ್ಟಿಯಿಂದ ಬಳಕೆದಾರನಿಗೂ ಪ್ರಯೋಜನ ಇಲ್ಲ, ರೈತನಿಗೂ ಕಿರುಕುಳ ಇರುವಾಗ ಈ ಲೆವಿ ಪದ್ಧತಿ ಏತಕ್ಕೆ ಇರಬೇಕು ಎಂಬುದನ್ನು ನೋಡಬೇಕು. ಒಂದು ವೇಳೆ ದೇಶದಲ್ಲಿ ಬರಗಾಲ ಇದ್ದರೆ ಬೆಳೆ ಸರಿಯಾಗಿ ಆಗದೆ ಇದ್ದರೆ ಪಟ್ಟಣಗಳಲ್ಲಿರುವ ಜನಗಳಿಗೆ ರೇಷನ್ ಒದಗಿಸಲು ಹಳ್ಳಿಗಳಿಂದ ಲೆವಿ ತೆಗೆದುಕೊಂಡು ಬರಬಹುದು. ಒಟ್ಟಿನಲ್ಲಿ ರೈತನಿಗೆ 20 ಪರ್ಸೆಂಟ್ ಅಥವಾ 30 ಪರ್ಸೆಂಟ್ ಬೆಲೆಯನ್ನು ಖೋತಾ ಮಾಡಿ ಬೆಲೆಯನ್ನು ಕಡಿಮೆ ಮಾಡಿ ಪಟ್ಟಣದಲ್ಲಿರುವವರಿಗೆ ಏತಕ್ಕೆ ರೇಷನ್ ಕೊಡಬೇಕು ? ನ್ಯಾಯವಾದ ಬೆಲೆಗೆ ರೇಷನ್ ಕೊಡಬೇಕು. ಈಗ ಈ ಫುಡ್ ಡಿಪಾರ್ಟ್‌ಮೆಂಟಿಗೆ ಬೇಕಾದಷ್ಟು ಸಿಬ್ಬಂದಿವರ್ಗ, ಪೋಲೀಸ್ ಸಿಬ್ಬಂದಿಗೆ ಮಾಮೂಲು, ಬಳಕೆದಾರನಿಗೆ ಕಲಬೆರಿಸುವ ಅವ್ಯವಹಾರ ಇದೆಲ್ಲಾ ಏತಕ್ಕೆ ಬೇಕು ? ಈಗ ಹೇಗೂ ಸರ್ಕಾರದವರು ಫುಡ್ ಕಾರ್ಪೊರೇಷನ್ ಮಾಡಿದ್ದಾರೆ. ಆದ್ದರಿಂದ ನ್ಯಾಯವಾದ ಬೆಲೆಗೆ ಭತ್ತವನ್ನು ರೈತರಿಂದ ಕೊಂಡು ಕನ್ಸ್ಯೂಮರುಗಳಿಗೆ ನ್ಯಾಯವಾದ ಬೆಲೆಗೆ ಮಾಡಿ ಲೆವಿ ಪದ್ಧತಿಯನ್ನು ಕಿತ್ತು ಹಾಕುವುದು ಒಳ್ಳೆಯದು. ಸರ್ಕಾರದವರು ಆಲ್

ಇಂಡಿಯಾ ಪಾಲಿಸಿಗೆ ವ್ಯತಿರಿಕ್ತವಾಗಿ ಹೋಗುವುದಿಲ್ಲ ಎಂದು ಹೇಳುವುದಾದರೆ ಫುಡ್ ಮಿನಿಸ್ಟರ್ ಕಾನ್‌ಫರೆನ್ಸ್‌ಗಳಿಗೆ ಹೋದಾಗ ಕನ್‌ಸ್ಯೂಮರ್ ಮತ್ತು ರೈತರಿಗೆ ಉಪಯೋಗ ಮಾಡುವ ದೃಷ್ಟಿಯಿಂದ ಇದನ್ನು ಸಡಿಲಗೊಳಿಸುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ? ಕಳೆದ ಒಂದೂವರೆ ವರ್ಷದಿಂದ ಕನ್‌ಸ್ಯೂಮರ್ಸ್ ಮತ್ತು ಪ್ರೊಡ್ಯೂಸರ್ಸ್ ಇಬ್ಬರಿಗೂ ಯಾವ ವಿಧವಾದ ಅನುಕೂಲವೂ ಆಗಿಲ್ಲ ಎಂಬುದನ್ನು ಯೋಚನೆ ಮಾಡಬೇಕು. ಇಷ್ಟಾದರೂ ಕೂಡ ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದರು ಬತ್ತವನ್ನು ಕೊಳ್ಳುವವರೇ ಇಲ್ಲ ಎಂದು. ಈಗ ತಮಿಳುನಾಡಿನಲ್ಲಿ ಬೆಲೆ ಕಡಿಮೆಯಾಗಿದೆ. ಆಂಧ್ರದಲ್ಲಿ ಯಾವ ಕೊರತೆಯೂ ಇಲ್ಲ. ಕೇರಳದಲ್ಲಿ ಹೆಚ್ಚಿನ ಅಭಾವ ಇಲ್ಲ. ಗೋವಾದಲ್ಲಿ ಅಂಥಾ ತೊಂದರೆ ಇಲ್ಲ. ಮಹಾರಾಷ್ಟ್ರದಲ್ಲಿಯೂ ತೊಂದರೆ ಇಲ್ಲ. ಹೀಗಿರುವಾಗ ಬಾರ್ಡರ್‌ನಲ್ಲಿ ಸೀಲ್ ಮಾಡಿ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಕಂಟ್ರೋಲ್ ತೆಗೆಯುವುದಕ್ಕೆ ಏತಕ್ಕೆ ಯೋಚನೆ ಮಾಡಬಾರದು ? ಈಗ ಅನೇಕ ಕಡೆ ಬತ್ತ ಬೇಕಾದಷ್ಟು ಇದೆ. ಅದನ್ನು ಕೊಳ್ಳುವವರೇ ಇಲ್ಲ. ಆದ್ದರಿಂದ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಕಂಟ್ರೋಲನ್ನು ತೆಗೆದು ಮಧ್ಯಸ್ಥಗಾರರನ್ನು ಆದಷ್ಟು ಕಡಿಮೆ ಮಾಡಿ ರೈತ ನೇರವಾಗಿ ಬತ್ತವನ್ನು ಗೋಡೌನಿಗೆ ತರುವುದಕ್ಕೆ ಅವಕಾಶ ಮಾಡಿದರೆ ಅವನು ಹೆಚ್ಚಿನ ಲಾಭವನ್ನು ಪಡೆಯುವ ಹಾಗೆ ಮಾಡಲಿ, ರೈತನಿಗೂ ಮತ್ತು ಕನ್‌ಸ್ಯೂಮರಿಗೂ ನ್ಯಾಯವಾದ ಬೆಲೆ ಸಿಕ್ಕುವಂತೆ ಮಾಡುವ ದೃಷ್ಟಿಯಿಂದ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಕಂಟ್ರೋಲ್ ಅನ್ನು ತೆಗೆಯುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು, ಮತ್ತು ರೈತ ಬತ್ತವನ್ನು ನೇರವಾಗಿ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ತಂದು ಮಾರುವುದಕ್ಕೆ ಅವಕಾಶ ಇದೆಯೋ ಎಂಬುದನ್ನು ಯೋಚನೆ ಮಾಡಬೇಕು ಬೆಂಗಳೂರು ನಗರದಲ್ಲಿ ಒಂದು ಕಡೆ ಚಂಗಲರಾಜು ಎನ್ನುವವರು ಇದ್ದಾರೆ. ಅವರು ಜಯನಗರದ ಕೊನೆಯಲ್ಲಿ ಒಂದು ದೊಡ್ಡ ತೋಟವನ್ನು ಮಾಡಿಕೊಂಡಿದ್ದಾರೆ, ಹೊಲವನ್ನು ಮಾಡಿಕೊಂಡಿದ್ದಾರೆ ಅವರು ಮೊನ್ನೆ ನನ್ನನ್ನು ಅವರ ಹೊಲಕ್ಕೆ ಕರೆದುಕೊಂಡು ಹೋಗಿ ತೋರಿಸಿದರು. ತಾವು ನಂಬುವುದಾದರೆ ನಂಬಿ ಬಿಟ್ಟರೆ ಬಿಡಬಹುದು. ಅವರು ತಮ್ಮ ಹೊಲದಲ್ಲಿ ರಾಗಿ ಪೈರನ್ನು ಬೆಳೆದಿದ್ದಾರೆ ಮನುಷ್ಯ ಎತ್ತರಕ್ಕೂ ಸಮನಾಗಿ ಬಹಳ ಉದ್ದವಾಗಿ ಬಹಳ ಉತ್ಕೃಷ್ಟವಾಗಿ ರಾಗಿ ಬೆಳೆಯನ್ನು ಬೆಳೆದಿದ್ದಾರೆ ಅಭಿವೃದ್ಧಿ ಅದಂತಹ ಒಳ್ಳೆಯ ಬೆಳೆಯನ್ನು ಅವರು ಬೆಳೆದರೂ ಕೂಡ ಅಂಥಾ ಜಮೀನನ್ನು ಸರ್ಕಾರದವರು ಕಿತ್ತುಕೊಂಡರೆ ನಾನೇನು ಮಾಡಲಿ ವ್ಯವಸಾಯವಲ್ಲದೆ ನಾನು ಬೇರೆ ಏನೂ ಮಾಡುವುದಿಲ್ಲ ಎಂದು ಅವರು ಹೇಳುತ್ತಾರೆ. ವ್ಯವಸಾಯ ಮಾಡತಕ್ಕವರಿಗೆ ಪ್ರೋತ್ಸಾಹ ಮಾಡದಿದ್ದರೆ ಖಂಡಿತವಾಗಿಯೂ ವ್ಯವಸಾಯಗಾರರು ವ್ಯವಸಾಯ ಮಾಡುವುದನ್ನು ಬಿಟ್ಟು ಬೇರೆ ವೃತ್ತಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅವರು ವ್ಯವಸಾಯ ಮಾಡುವುದಕ್ಕೆ ಹೋಗದೆ ಹೆಚ್ಚು ಲಾಭದಾಯಕವಾದ ಕಮರ್ಷಿಯಲ್ ಕ್ರಾಪ್ಸ್ ಬೆಳೆಯತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ವ್ಯವಸಾಯದ ದೃಷ್ಟಿಯಿಂದ ಖಂಡಿತವಾಗಿ ವ್ಯವಸಾಯಗಾರನಿಗೆ ಇರತಕ್ಕ ತೊಂದರೆಯನ್ನು ತಪ್ಪಿಸಬೇಕಾದ್ದು ಅತ್ಯಗತ್ಯ. ಈಗ ಸರ್ಕಾರದವರು ವಾಟರ್ ರೇಟ್ ಹೆಚ್ಚು ಮಾಡಿದ್ದಾರೆ. ಜೊತೆಗೆ 1-5 ವರ್ಷಗಳ ಅರಿಯರ್ ಕಲೆಕ್ಟ್ ಮಾಡುವ ರೀತಿಯಲ್ಲಿ ರೈತರಿಗೆ ಬೇಕಾದಷ್ಟು ಕಿರುಕುಳಗಳಾಗುತ್ತವೆ. ಇದರಿಂದಾಗಿ ರೈತರು ತಮ್ಮ ಮನೆಯಲ್ಲಿ ಎತ್ತು ಕರುಗಳನ್ನು ಪಾತ್ರೆ ಪಡಗಗಳನ್ನು ತೆಗೆದುಕೊಂಡು ಹೋಗಿ ಮಾರಿ ಅರಿಯರ್ಸ್ ಕೊಡುವಂತಹ ಪರಿಸ್ಥಿತಿ ಬಂದಿದೆ. ಜನಗಳಿಗೆ ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಆಹಾರ ಇಲಾಖೆಯವರು. ಪೋಲೀಸ್ ಇಲಾಖೆಯವರು. ಮತ್ತು ವ್ಯವಸಾಯ ಇಲಾಖೆಯವರು, ರೆವಿನ್ಯೂ ಇಲಾಖೆಯವರು ಸಮಗ್ರವಾಗಿ ಕ್ಯಾಬಿನೆಟ್ ಕಮಿಟಿ ಮಾಡಿಕೊಂಡು ಇದರ ಬಗ್ಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ಗ್ರಾಮಾಂತರ ಪ್ರದೇಶದ ಜನಗಳು ಉದ್ಧಾರವಾಗುವುದಿಲ್ಲ. ಬೆಳೆಯು ಉತ್ಪನ್ನವೂ ಆಗುವುದಿಲ್ಲ, ಆಹಾರದ ಅಭಾವ ಎಲ್ಲೋ ಒಂದೊಂದು ಕಾಲದಲ್ಲಿ ಬರುತ್ತದೆ. ಅಂಥಾ ಕಷ್ಟಕಾಲ ಬಂದಾಗ ಬೇಕಾದರೆ ಯಾವುದಾದರೂ ಒಂದು ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು. ಅದು ನಿನ್ನ ವಿಭಾಗ; ಅದು ನನ್ನ ವಿಭಾಗ ಎಂದು ಹೇಳುವುದಕ್ಕೆ ಬದಲಾಗಿ, ಆಹಾರ ಮಂತ್ರಿಗಳು, ವ್ಯವಸಾಯ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು, ಪೋಲೀಸ್. ಮಂತ್ರಿಗಳು ಎಲ್ಲರೂ ಸೇರಿಕೊಂಡು ಇದರ ಬಗ್ಗೆ ಸಮಗ್ರವಾಗಿ ಕ್ಯಾಬಿನೆಟ್ ಹೈಪವರ್ ಕಮಿಟಿ ಮಾಡಿಕೊಂಡು ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಿ ರೈತ ಮತ್ತು ಕನ್‌ಸ್ಯೂಮರ್ಸ್ ಇಬ್ಬರೂ ಉಳಿದುಕೊಳ್ಳುವ ಪ್ರಯತ್ನ ಮಾಡಬೇಕು ಇಲ್ಲದೆ ಹೋದರೆ ಇಬ್ಬರಿಗೂ ಕಷ್ಟವಾಗುತ್ತದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ಬಡವ

ರಿಂದ ಲೆವಿ ತೆಗೆದುಕೊಂಡು ಬಂದು ಅದರಿಂದ ಪಟ್ಟಣದಲ್ಲಿರತಕ್ಕ ಬಳಕೆದಾರರಿಗೂ ಯಾವ ಪ್ರಯೋಜನವಾಗುತ್ತಿಲ್ಲ. ರೇಷನ್ ಅಕ್ಕಿ ಚನ್ನಾಗಿಲ್ಲ. ವರ್ಸ್ಟ್ ರೈಸ್. ಈಗ ಬಜಾರ್‌ನಲ್ಲಿ ಬೇಕಾದಷ್ಟು ಒಳ್ಳೆಯ ಅಕ್ಕಿಯು ಸಿಕ್ಕುತ್ತದೆ, ಮತ್ತು ರೈತರಿಗೆ ಆಗತಕ್ಕ ಕಿರುಕುಳವನ್ನು ತಪ್ಪಿಸುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಯೋಚನೆ ಮಾಡಬೇಕು. ಒಂದುವೇಳೆ ರೈತ ಲೆವಿಯನ್ನು ಕೊಡದೆ ಹೋದರೆ ಅವರಿಂದ ಅದರ ಡಬಲ್ ವ್ಯಾಲ್ಯೂ ವಸೂಲು ಮಾಡಬೇಕೆಂದು ಹೇಳಿದ್ದಾರೆ. ಲೆವಿ ಕೊಡದೆ ಹೋದರೆ ಹೆಚ್ಚಿಗೆ ಹಾಕುವುದು ಹೇಗೆ ? ಇದು ಸರಿಯೇ ಪಟ್ಟಣದವರಿಗೆ ಅನುಕೂಲ ಮಾಡುವುದಕ್ಕಾಗಿ ಬೆಳೆಯುವವನಿಗೆ ಕಿರುಕುಳ ಆಗದೆ. ಇರುವ ಹಾಗೆ, ಮತ್ತು ಕನ್‌ಸ್ಯೂಮರಿಗೆ ತೊಂದರೆಯಾಗದೆ ಇರುವ ಹಾಗೆ ಒಂದು ಸ್ಕೇಲನ್ನು ಹಾಕಿ ಅವರನ್ನು ತಕ್ಕಡಿಯಲ್ಲಿ ತೂಗಿ, ಇಬ್ಬರಿಗೂ ಅನುಕೂಲವಾಗುವ ಹಾಗೆ ನೋಡಿಕೊಳ್ಳಬೇಕು. ಒಬ್ಬರ ಹೊಟ್ಟೆಯನ್ನು ಹೊಡೆದು ಇನ್ನೊಬ್ಬರ ಹೊಟ್ಟೆಯನ್ನು ತುಂಬುವುದಕ್ಕೆ ಹೋಗುವುದು ಸರಿಯಲ್ಲ. ಲೆವಿ ರೇಟಿಗೂ ಮಾರತಕ್ಕ ರೇಟಿಗೂ ಓವರ್ ಹೆಡ್ ಚಾರ್ಜಸ್ ಎಷ್ಟಾಗಿವೆ ಎಂಬುದನ್ನು ಲೆಕ್ಕ ಹಾಕಿ ನೋಡಿದರೆ ತುಂಬ ಭಾರವಾಗಿದೆ. ಇದು ಹೆಚ್ಚು ಕನ್ ಸ್ಯೂಮರ್ ಮೇಲೆ ಬೀಳುತ್ತದೆ. ಕಿರುಕುಳ ಆಗತಕ್ಕಂಥಾದ್ದು ಓವರ್ ಹೆಡ್ ಚಾರ್ಜ್‌ನಿಂದ ಓವರ್ ಹೆಡ್ ಚಾರ್ಜನ್ನು ಕಡಿಮೆ ಮಾಡದಿದ್ದರೆ ಖಂಡಿತವಾಗಿಯೂ ನ್ಯಾಯವಾದ ಬೆಲೆಗೆ ಮಾರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಓವರ್ ಚಾರ್ಜ್ ಬಗ್ಗೆ ಸಾಕಷ್ಟು ಪರಿಶೀಲನೆ ಮಾಡಬೇಕು. ಮತ್ತು ಬತ್ತವನ್ನು ಮಿಲ್ ಮಾಡುವಾಗ ದ್ರೋಹ ಮಾಡುತ್ತಾರೆ. ಜೊತೆಗೆ ಲೆವಿ ಕೊಡುವಾಗ ಅವಸರ ಅವಸರವಾಗಿ ವಸೂಲು ಮಾಡುವುದರಿಂದ ಹಸಿ ಬತ್ತವನ್ನು ತೆಗೆದುಕೊಂಡು ಹಾಕುತ್ತಾರೆ ಇದರಿಂದ ಸರಕಾರಕ್ಕೆ ನಷ್ಟವಾಗುತ್ತದೆ. ಆದ್ದರಿಂದ ಬತ್ತವನ್ನು ತೆಗೆದುಕೊಳ್ಳುವಾಗ ಕ್ವಾಲಿಟಿ ನೋಡಿ ಅದರ ಪ್ರಕಾರ ರೇಟನ್ನು ನಿಗದಿ ಮಾಡಬೇಕು. ಹಸಿ ಬತ್ತವನ್ನು ಗೋಡೌನ್‌ನಲ್ಲಿ ತುಂಬಿ ಒಂದು ಮೂಟೆಯ ಮೇಲೆ ಮತ್ತೊಂದು ಮೂಟೆಯನ್ನು ಹೇರಿಸಿದರೆ ಅದು ಬೂಸ್ಟು ಹಿಡಿದು ಕೆಟ್ಟು ಹೋಗುತ್ತದೆ. ಆದ್ದರಿಂದ ಸ್ಟೋರ್ ಮಾಡುವಾಗ ಬತ್ತ ಒಣಗಿದೆಯೋ ಇಲ್ಲವೇ ಎಂಬುದನ್ನು ನೋಡಬೇಕು. ಜೊತೆಗೆ ಬತ್ತಕ್ಕೆ ರೇಟನ್ನು ನಿಗದಿ ಮಾಡುವಾಗ ಕ್ವಾಲಿಟಿಯನ್ನು ನೋಡಿ ರೇಟನ್ನು ನಿಗದಿ ಮಾಡದೆ ಹೋದರೆ ಖಂಡಿತವಾಗಿಯೂ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಕೆ ಪ್ರಭಾಕರ್.—ಈ ಪ್ರಶ್ನೆ ನಮ್ಮ ಮುಂದೆಯೂ ಇದೆ, ಸರ್ಕಾರದ ಮುಂದೆಯೂ ಇದೆ. ತಾವು ಒಂದು ಪರಿಹಾರ ಸೂಚಿಸಿ, ಪ್ರೊಡ್ಯೂಸರ್‌ಗೆ ಯಾವ ಮಟ್ಟದಲ್ಲಿ ರೇಟ್ ಕೊಡಬೇಕು, ಮತ್ತು ಕನ್‌ಸ್ಯೂಮರ್‌ಗೆ ಯಾವ ಮಟ್ಟದಲ್ಲಿ ರೇಟ್ ಕೊಡಬೇಕು ಎಂದು ಸಲಹೆ ಕೊಡಿ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಓವರ್ ಹೆಡ್ ಚಾರ್ಜ್ ವಿಪರೀತವಾಗಿದೆ. ಅದನ್ನು ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು ನಾನು ಲೆಕ್ಕ ಹಾಕಿರುವ ಪ್ರಕಾರ ಓವರ್ ಹೆಡ್ ಚಾರ್ಜ್ ವಿಪರೀತ ಜಾಸ್ತಿ ಇದೆಯೆಂದು ಸ್ಪಷ್ಟವಾಗಿ ಹೇಳಬಲ್ಲೆ. ಆದುದರಿಂದ ಅದಷ್ಟು ಈ ಹ್ಯಾಂಡ್ಲಿಂಗ್ ಚಾರ್ಜನ್ನು ಕಡಿಮೆ ಮಾಡಬೇಕು. ಇದು ಒಂದು. ಎರಡನೆಯದು; ಕ್ವಾಲಿಟಿ, ರೇಟ್ ಫಿಕ್ಸ್ ಮಾಡಿ. ೫ ಪೈಸೆ ಜಾಸ್ತಿ ಮಾಡಿ ಒಳ್ಳೆಯ ಕ್ವಾಲಿಟಿ ಕೊಟ್ಟರೆ ಕನ್‌ಸ್ಯೂಮರ್ ೫ ಪೈಸೆ ಹೆಚ್ಚಾಗಿ ಕೊಡುವುದಕ್ಕೆ ಹಿಂದೆ ಬೀಳುವುದಿಲ್ಲ; ಆ ೫ ಪೈಸೆ ಇಳಿಸಿ ಬೆಳೆಯತಕ್ಕವನಿಗೆ ಕೊಡಿ. ಕ್ವಾಲಿಟಿ ಕೆಡಿಸಿಬಿಟ್ಟು ಕಡಿಮೆ ಬೆಲೆಗೆ ಕೊಡುತ್ತೇವೆ ಎಂದರೆ ಅದರಿಂದ ಪ್ರಯೋಜನವಿರುವುದಿಲ್ಲ. ಆದುದರಿಂದ ಕನ್‌ಸ್ಯೂಮರ್ ಮತ್ತು ರೈತರ ಶೋಷಣೆ ಆಗದ ಹಾಗೆ ಮಿಲ್‌ನವರು, ಟ್ರಾನ್ಸ್‌ಪೋರ್ಟ್ ಏಜೆಸಿಯವರು ಹೊಡೆಯುವುದನ್ನು ಕಡಿಮೆ ಮಾಡಬೇಕು. ತಾವು ಎಕ್ಸಾಮಿನ್ ಮಾಡಿ ಇಷ್ಟಕ್ಕೇ ಕೊಡಬೇಕು ಎಂದು ಮಾಡಬೇಕು ಮಾಡದೇ ಹೋದ ಪಕ್ಷದಲ್ಲಿ ಅಲ್ಲಿವರೆಗೆ ಇದೇರೀತಿ ನಡೆದುಕೊಂಡು ಹೋಗುತ್ತದೆ ಕ್ವಾಲಿಟಿ ಕೆಡಿಸಿ, ಕಡಿಮೆ ಬೆಲೆಗೆ ಕೊಡುತ್ತೇವೆ ಎಂದು ಹೇಳುವುದಕ್ಕಿಂತ, ೧೦–೧೫ ಪೈಸೆ ಜಾಸ್ತಿ ಮಾಡಿ ಒಳ್ಳೆಯ ಕ್ವಾಲಿಟಿ ಕೊಡಿ. ೧೦–೧೫ ಪೈಸೆ ಹೆಚ್ಚಾಗಿ ಕೊಟ್ಟರೂ ಕೂಡ ಕನ್‌ಸ್ಯೂಮರ್ ವ್ಯಥೆ ಪಡುವುದಿಲ್ಲ. ಕನ್‌ಸ್ಯೂಮರ್ ಇಂಟರೆಸ್ಟ್ ಮತ್ತು ಪ್ರೊಡ್ಯೂಸರ್ ಇಂಟರೆಸ್ಟ್—ಎರಡನ್ನೂ ನೋಡಿ ಎಲ್ಲಾ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ಬರೀ ಫುಡ್ ಡಿಪಾರ್ಟ್‌ಮೆಂಟ್ ಒಂದೇ ಅಲ್ಲ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್, ರೆವಿನ್ಯೂ ಡಿಪಾರ್ಟ್‌ಮೆಂಟ್—ಎಲ್ಲರೂ ಸೇರಿ ಮಾಡಬೇಕಾದಂಥ ಪರಿಸ್ಥಿತಿ. ಇದಕ್ಕೆ ಒಂದು ಹೈ ಪವರ್ ಕ್ಯಾಬಿನೆಟ್ ಕಮಿಟಿ ಮಾಡಿ ಎಂದು ನಾನಾಗಲೇ ಸಲಹೆ ಕೊಟ್ಟಿದ್ದೇನೆ. A stage has come now to decide whether agriculturists have to survive or not. It is very

necessary that his interests should be considered. It is not a matter which concerns only consumers. The interests of the ryot who is the backbone of the country should be safe guarded even if it be a slight burden on the consumer.

ಶ್ರೀ ಕೆ ಪ್ರಭಾಕರ್ —ಕನ್ಸ್ಯೂಮರ್‌ಗೆ ಸಬ್ಸಿಡಿ ಕೊಡುವುದಕ್ಕೆ ಬದಲು ಪ್ರೊಡ್ಯೂಸರ್‌ಗೆ ಸಬ್ಸಿಡಿ ಕೊಡುವುದು ಒಳ್ಳೆಯದಲ್ಲವೇ ?

SRI T R. SHAMANNA.—Let him sell it at a lower rate so that it may have an indirect effect on the consumer. You give all facilities to the producer so that he can sell at a beneficial rate to the consumer.

ಶ್ರೀ ಕೆ. ಪ್ರಭಾಕರ್.—ಫರ್ಟಿಲೈಸರ್ ಬೆಲೆ ಕಡಿಮೆಮಾಡಬೇಕು.

ಶ್ರೀ ಟಿ. ಆರ್. ಶಾಮಣ್ಣ —ರೀಸನಬಲ್ ರೇಟ್ ಕನ್‌ಸ್ಯೂಮರ್‌ಗೆ ಕೊಟ್ಟು ತೃಪ್ತಿಪಡಿಸುವುದಕ್ಕೆ ಸಾಧ್ಯವಿಲ್ಲ. ಪ್ರೊಡ್ಯೂಸರ್‌ಗೆ ಎಲ್ಲಾ ವಿಧವಾದ ಎನ್‌ಕರೇಜ್‌ಮೆಂಟ್ ಕೊಡಬೇಕು ಮೊದಲು. ಎಷ್ಟು ಕೊಂಡಿದ್ದೀರಿ ಎಷ್ಟು ವೇಸ್ಟಾಗಿದೆ ಎನ್ನುವುದನ್ನು ನೋಡಬೇಕು. ಇವತ್ತು ಲಕ್ಷಾಂತರ ಮೂಟೆಗಳು ಗೋಡೌನ್‌ನಲ್ಲಿ ಕೊಳೆತು ಹೋಗಿವೆ. ಸ್ಟೋರಿಂಗ್ ಸರಿಯಾಗಿ ಮಾಡದೇ ಲಕ್ಷಾಂತರ ಮೂಟೆಗಳು ನಾಶವಾಗಿವೆ ಅದು ಲೆಕ್ಕಕ್ಕೆ ಬಂದಿಲ್ಲ. ಆದುದರಿಂದ ಇದನ್ನು ಆಡಿಟ್ ಮಾಡಿ ನೋಡಿದರೆ ಎಷ್ಟು ಅನ್ಯಾಯವಾಗಿದೆ, ಎಷ್ಟು ಕ್ರಮವಾಗಿದೆ ಎನ್ನುವುದು ಗೊತ್ತಾಗುತ್ತದೆ ಇವತ್ತು ಈ ಡಿಪಾರ್ಟ್‌ಮೆಂಟ್ ಮಾಡಿದೆ ಎಂದು ನಾನು ಹೇಳುತ್ತಾ ಇಲ್ಲ ಇದು ಅನೂಚಾನವಾಗಿ ಬಂದಿದೆ. ಹಣ್ಣುಪುಟ್ಟು ಇಲ್ಲಿ ಹೆಗ್ಗಣಗಳು ತಿನ್ನುವುದರ ಜೊತೆಗೆ ಬೇಕಾದಷ್ಟು ವೇಸ್ಟ್ ಆಗಿ, ಸ್ಟೋರ್ ಮಾಡುವುದರಲ್ಲಿ ಅವ್ಯವಸ್ಥೆಯಾಗಿ ಕೊಳೆತು ಹೋಗಿದೆ ಕೆ ವ ಸೊಸೈಟಿಗಳಿಂದ ಅಕ್ಕಿ ಬರುತ್ತದೆ ಅವೆಲ್ಲಾ ಕೊಳೆತು ಹೋಗಿರುತ್ತದೆ ಅವನ್ನು ಬೆಂಗಳೂರು ಮಿಲ್ಲಿಗೆ ಪಾಲಿಷ್ ಮಾಡುವುದಕ್ಕೆ ತೆಗೆದುಕೊಂಡು ಬರುತ್ತಾರೆ. ಅದು ಗಬ್ಬುನಾತ ಹೊಡೆಯುತ್ತದೆ. ಸ್ಟೋರ್‌ನಿಂದ ಮತ್ತು ವೇಸ್ಟೇಜ್‌ನಿಂದ ಈ ರೀತಿ ನಾಶವಾಗುತ್ತಾ ಇದೆ. ಅದನ್ನು ಜನಗಳ ಮೇಲೆ ಹೇರುವುದು ಸರಿಯಲ್ಲ. A thorough study is very necessary to safeguard the interest of consumer and agriculturists Therefore, an amendment like this will not solve the problem. A deep study is important and for that purpose persons who have only book information will not be able to give remedy. Persons who are practically in the field have to sit and their advice will have to be taken with the assistance of experts and a decision taken in the matter ಇದನ್ನು ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಖಂಡಿತವಾಗಿಯೂ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ, ಜನಗಳಿಗೆ ಯಾವುದೂ ಹಿತ ಆಗುವುದಿಲ್ಲ. ನಾನು ಎಮರ್ಜೆನ್ಸಿಯನ್ನು ವಿರೋಧಿಸಿದರೂ ಕೂಡ, ಎಮರ್ಜನ್ಸಿಯಿಂದಲೇ ಆಯಿತು ಎಂದು ಹೇಳುವುದಿಲ್ಲ. ಅದಕ್ಕೆ ಬೇರೆ ಕಾರಣಗಳು ಇರಬಹುದು. ಆದರೂ ಅಭಾವದ ಪ್ರಭಾವ ಸ್ವಲ್ಪ ಕಡಿಮೆಯಾಗಿದೆ.

ಶ್ರೀ ಕೊಣಂದೂರು ಲಿಂಗಪ್ಪ —ಎಮರ್ಜೆನ್ಸಿ ಬಂದಮೇಲೆ ಮಳೆ ಬಂತೇನು?

ಶ್ರೀ ಟಿ ಆರ್. ಶಾಮಣ್ಣ.—ಇರಬಹುದು.

ಶ್ರೀ ಕೊಣಂದೂರು ಲಿಂಗಪ್ಪ.—ಇದು ಇಂದ್ರನ ಕರುಣೆಯೋ ?

ಶ್ರೀ ಟಿ ಆರ್. ಶಾಮಣ್ಣ —ಇಂದ್ರನ ಕರುಣೆ ಇಂದ್ರಮ್ಮನ ಮೇಲೆ ಬಿದ್ದಿತೋ ಏನೋ ನೋಡೋಣ ಒಟ್ಟಿನಲ್ಲಿ ಜನಗಳಿಗೆ ಒಳ್ಳೆಯದಾಯಿತು. ನನಗೆ ಇವರನ್ನು ಅವರನ್ನು ದೂರಬೇಕು ಎಂದು ಇಲ್ಲ ಒಟ್ಟಿನಲ್ಲಿ ಜನಗಳಿಗೆ ಒಳ್ಳೆಯದಾಗಬೇಕು, ಎಂದು ಆಶಿಸುತ್ತೇನೆ. ಮುಗ್ಗಿ ಹೋಗುತ್ತಾ ಇರತಕ್ಕ, ಹಾಳಾಗಿ ಹೋಗುತ್ತಾ ಇರತಕ್ಕ ಅಕ್ಕಿಯನ್ನು ಪರಿಶೀಲನೆಮಾಡಿ ನೋಡಬೇಕು. ಈಗ ತಮಗೆ ಬಿಡುವು ಇದೆ. ಅಭಾವ ಪರಿಸ್ಥಿತಿ ಇಲ್ಲದೇ ಇರುವುದರಿಂದ ಸಮಗ್ರವಾಗಿ ಸಾಧ್ಯವಾದಷ್ಟು ಪರಿಶೀಲನೆ ಮಾಡಬೇಕು ಎಂದು ವಿನಯ ಪೂರ್ವಕವಾಗಿ ಕೇಳಿಕೊಂಡು ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯುಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಆಹಾರ ಮಂತ್ರಿಗಳು ತಂದಿರತಕ್ಕ ಕರ್ನಾಟಕ ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಅಮೆಂಡ್‌ಮೆಂಟ್ ಬಿಲ್ ೧೯೭೬ ಏನಿದೆ ಅದನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕು ಎಂದು ಇದ್ದೇನೆ. ಅಧ್ಯಕ್ಷಿಣಿಯವರೇ, ಈ ಬಿಲ್ಲು ೧೯೫೫ನೇ ಇಸವಿಯ ಹಳೆಯ ಬಿಲ್ಲು; ಅದರಲ್ಲಿರತಕ್ಕ ಲೋಪದೋಷಗಳು ಏನಿವೆ? ಈಗ ತಾಪತ್ರಯ ಏನಿದೆ? ತೊಂದರೆಯೇನಿದೆ ಅದಕ್ಕೆ ಈ ಅಮೆಂಡ್‌ಮೆಂಟನ್ನು ತಂದಿದ್ದಾರೆ. ಇವರಲ್ಲಿ "ಕಲೆಕ್ಟರ್'' ಎನ್ನುವ ಪದ ಹಿಂದೆ ಏನಿತ್ತು ಅದಕ್ಕೆ ಕ್ಲಿಯರ್ ಆಗಿ ಡೆಫನೇಷನ್ ಆಗಿರಲಿಲ್ಲ. ಆದುದರಿಂದ ಅವರ ಬದಲಾಗಿ ಡೆಪ್ಯುಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್ಸ್ ಏನಿದ್ದಾರೆ; ಪ್ರೊಕ್ಯೂರ್ ಮಾಡತಕ್ಕ ಆಫೀಸರ್ಸ್ ಏನಿದ್ದಾರೆ ಅವರಿಗೆ ಸ್ವಲ್ಪ ಅಧಿಕಾರ ಮೊದಲು ಇತ್ತು. ಜನ ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಪಾಯಿಂಟ್ ಆಫ್ ವ್ಯೂ (from administrative point of view) ನಿಂದ ಈ ಒಂದು ಒಳ್ಳೆಯ ಅಮೆಂಡ್‌ಮೆಂಟನ್ನು ತಂದಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಇದರಲ್ಲಿ ಪ್ರೊಕ್ಯೂರ್ ಮೆಷರ್ಸ್. ಅಪರೇಷನ್ಸ್‌ನಲ್ಲಿ ಕೆಲವು ಕಡೆ ಲೋಪದೋಷಗಳು ಹಿಂದೆ ಇತ್ತು. ಮಾನ್ಯ ಮಿತ್ರರು ಹೇಳಿದಹಾಗೆ, ರೈತರ ಬಗ್ಗೆ ಅನುಕಂಪ ಇದೆ ನನಗೂ ಸಹ ಅವರ ಬಗ್ಗೆ ವಿಶೇಷವಾದಂಥ ಅನುಕಂಪವಿದೆ. ರೈತ ದೇಶದ ಬೆನ್ನುಮೂಳೆ ಅನ್ನದಾತ ನೇಗಿಲಯೋಗಿ ಎಂದು ನಮಗೆ ಚೆನ್ನಾಗಿ ಜ್ಞಾಪಕವಿದೆ. ಈಗಿನ ಪರಿಸ್ಥಿತಿಯಲ್ಲಿ ಏನಾಗಿದೆಯೆಂದರೆ ಬೆಳೆಯುವವರಿಗೂ, ತಿನ್ನುವವರಿಗೂ ಸರಿಯಾದ ಸಂಪರ್ಕವಿಲ್ಲದಂತೆ ಆಗಿದೆ. ಏಜೆಂಟ್ಸ್ ಮೂಲಕ ವ್ಯವಹಾರ ನಡೆಯುವುದು ಹಿಂದಿನ ಮತ್ತು ಈಗಿನ ಕಾಲದಲ್ಲೂ ಇದ್ದೇ ಇದೆ. ವರ್ತಕವೃಂದ ಏನಿದೆ ಅದು ವ್ಯಾಪಾರ ಮಾಡುತ್ತಾ ಇತ್ತು. ಈಗ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಆ ಕೆಲಸ ಮಾಡುತ್ತಾ ಇದೆ. ತಮಗೆ ಗೊತ್ತಿರುವ ಹಾಗೆ ಲೀನ್ ಮಂತ್ಸ್ (Leer Months) ಏನಿದೆ, August and S ptemb r ಕಳೆದ ತಕ್ಷಣ ಬಿತ್ತನೆ ಮಾಡತಕ್ಕ ಕಾಲದಲ್ಲಿ ಜನರಿಗೆ ಹಾಹಾಕಾರ ಆಗುತ್ತಾ ಇರುತ್ತದೆ ಆಗಲೇ ಪದಾರ್ಥಗಳ ಬೆಲೆ ಏರುವುದು ಆ ಸಂದರ್ಭದಲ್ಲಿ ಏನು ಮಾಡಬೇಕು? ರೈತ ಅನ್ನದಾತ ಎಂದು ಇಟ್ಟುಕೊಳ್ಳಿ ಆ ಸಂದರ್ಭದಲ್ಲಿ ಅವನಿಗೆ "ಸಪೋರ್ಟಿಂಗ್ ಪ್ರೈಸ್'' (Su por-ting P ice) ಕೊಡಬೇಕು. ಹೋದವರ್ಷ ಮಳೆ, ಬೆಳೆ, ಚೆನ್ನಾಗಿ ಆಗಿರುವುದರಿಂದ ಸುಭಿಕ್ಷವಾಗಿ ಇದ್ದಹಾಗೆ ಕಾಣಿಸುತ್ತಾ ಇದೆ. ಬಫರ್ ಸ್ಟಾಕ್ (Buffer Stock) ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. Levy ಇಂದ ವಸೂಲಾದ ದಿನಸಿಯನ್ನು ಇಡಲು ಸ್ಥಳವಿಲ್ಲದೆ; ಸ್ಕೂಲು ದೇವಸ್ಥಾನ ಛತ್ರಗಳಲ್ಲಿ ದಾಸ್ತಾನು ಮಾಡುತ್ತಾ ಇರುತ್ತಾರೆ. ಈಗತಾನೇ ಸಪೋರ್ಟಿಂಗ್ ಪ್ರೈಸನ್ನು ಸರ್ಕಾರ ಕೊಡುತ್ತಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಈ ವರ್ಷ ಆಹಾರದ ಪರಿಸ್ಥಿತಿ ಸುಧಾರಿಸಿದೆ ಎಂದು ಕೇಳಿಬಂದಿದೆ. ಮತ್ತು ಅನುಭವದಲ್ಲಿ ತಿಳಿದುಬಂದಿದೆ. ಈಗ ನಮಗೆ ಏನಾಗಿದೆ ಎಂದರೆ ಸಪೋರ್ಟಿಂಗ್ ಪ್ರೈಸನ್ಸ್‌ನ್ನೂ ಕೊಡುತ್ತಿದ್ದರೂ ಸಹ ಇನ್ನೂ ಸಾಲದಾಗಿದೆ ಬೆಲೆ ಇಳಿಮುಖವಾಗುತ್ತಾ ಬಂದಿರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಪೋರ್ಟಿಂಗ್ ಪ್ರೈಸಸ್ ಎಂದರೆ ಏನು?

ಶ್ರೀ ಕೆ ಆರ್. ಎಸ್ ನಾಯ್ಡು.—ಅಂದರೆ ಧಾರಣೆ ಕೆಳಗೆ ಬೀಳದ ಹಾಗೆ ನೋಡಿಕೊಳ್ಳುವುದು ನೀವು ಭತ್ತ ರಾಗಿಯ ಬೆಲೆ ೪೦ ರೂಪಾಯಿ ೬೦ ರೂಪಾಯಿಗೆ ಇಳಿದಿದೆ ಎಂದು ಹೇಳಿದರೂ ನಮ್ಮ ಸರ್ಕಾರದವರು ಎಷ್ಟು ದಿನಸಿ ಇದ್ದರೂ ಕೂಡಿ ೭೫-೮೦ ರೂಪಾಯಿಗಳಿಗೆ ತೆಗೆದುಕೊಳ್ಳುತ್ತೇವೆಂದು ಹೇಳುವುದೇ ಸಪೋರ್ಟಿಂಗ್ ಪ್ರೈಸ್

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಭತ್ತದ ಬೆಲೆ ಕ್ವಿಂಟಾಲ್‌ಗೆ ೭೫ ರೂಪಾಯಿ ಆಗಿದೆ.

ಶ್ರೀ ಕೆ ಆರ್. ಎಸ್. ನಾಯ್ಡು.—ಅದನ್ನು ಮುನಗಂಡೇ ೭೫ ರೂಪಾಯಿ ಕೊಡುತ್ತಿರುವುದು. ರೈತನ ಮೇಲೆ ನಮಗೂ ಹೆಚ್ಚು ಅನುಕಂಪ ಇದೆ, ಅವನನ್ನು ಬಿಟ್ಟು ಬಾಳುವುದಕ್ಕೆ ಆಗುವುದಿಲ್ಲ. ಪಟ್ಟಣಕ್ಕೆ ವಲಸೆ ಬಂದಿರತಕ್ಕ ಜನ ಏಕೆ ಬಂದರು ? ಹೇಗೆ ಬಾಳುತ್ತಿದ್ದಾರೆಂದರೆ ಅವರು ಉದ್ಯೋಗ ಕ್ಕೋಸ್ಕರ ಹಳ್ಳಿಯನ್ನು ಬಿಟ್ಟು ಬಂದಿದ್ದಾರೆ ಲ್ಯಾಂಡ ರಿಫಾರಮ್ಸ್ ಆಕ್ಟು ಬಂದವೇಲೆ ಸಬ್ ಡಿವಿಜನ್ ಅಂಡ್ ಫ್ರಾಗ್‌ಮೆಂಟೇಶನ್ ಆಫ್ ಹೋಲ್ಡಿಂಗ್ಸ್ (Sub-Divi ion and Fragmentation of Hol ings) ಬಗ್ಗೆ ಸ್ವಲ್ಪ ತಾಪತ್ರಯ ಇದೆ. ರೈತನಿಗೆ ಬೇಕಾದಂತಹ ಮೆಟೀರಿಯಲ್ಸ್ ಅಂದರೆ ಫರ್ಟಿ ಲೈಸರ್ಸ್ ಬೆಲೆ ಮಾರ್ಕೆಟ್ಟಿನಲ್ಲಿ ಜಾಸ್ತಿ. ಎತ್ತುಗಳ ಬೆಲೆ ಜಾಸ್ತಿ ಆದಾಗ ಅವನು ಅವನಿಗೆ ಎಷ್ಟು ದಿನಸಿ ಬೇಕೋ ಅಷ್ಟನ್ನೇ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. ಒಟ್ಟಿನಲ್ಲಿ ಅವನು ಹೆಚ್ಚು ಬೆಳೆ ಬೆಳೆಯು

ವುದಕ್ಕೆ ಸಪೋರ್ಟಿಂಗ್ ಪ್ರೈಸಸ್‌ನ್ನು ಕೊಡಬೇಕೆಂಬುದು ಮೊದಲನೆಯ ವಾದ. ಆದರೆ, ಇಂದಿನ ಪರಿಸ್ಥಿತಿಯಲ್ಲಿ ಆ ರೇಟನ್ನು ಕೊಡುವುದಕ್ಕೆ ಹೋದರೆ ಬಹಳ ನಷ್ಟವಾಗುತ್ತದೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೊಡನೆ ಸಮಾಲೋಚನೆ ಮಾಡಿ ಒಂದು ರೇಟನ್ನು ಫಿಕ್ಸ್ ಮಾಡೋಣ. ಹಿಂದಿನ ಕಾಲದಲ್ಲಿ ದಳ್ಳಾಳಿಗಳು ಏಜೆಂಟುಗಳು ಬಹಳ ಮೋಸ ಮಾಡುತ್ತಿದ್ದರು. ಈಗ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಶನ್ ಬಂದಮೇಲೆ ಎಸ್ಟಾಬ್ಲಿಷ್‌ಮೆಂಟ್ ಕಡಿಮೆ ಇರಬಹುದು.

ಶ್ರೀ ಸಿ. ಬೈರೇಗೌಡ.—ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಶನ್ನಿನವರು ಅಕ್ಕಿ ಮಾರಾಟ ಮಾಡುತ್ತಾರೆಯೇ?

ಶ್ರೀಮತಿ ಇ. ಇ. ವಾಜ್.—ಇಲ್ಲ ಕರ್ನಾಟಕ ಫುಡ್ ಕಾರ್ಪೊರೇಶನ್ನಿನವರು ಮಾಡುತ್ತಾರೆ.

ಶ್ರೀ ಕೆ. ಆರ್. ಎಸ್. ನಾಯ್ಡು.—ಪ್ರೊಕ್ಯೂರ್‌ಮೆಂಟಿನಲ್ಲೂ ಸಹ ನೀತಿನಿಯಮಗಳನ್ನು ಅನುಸರಿಸುತ್ತಿದ್ದೇವೆ; ಸ್ಲಾಬ್ ಸಿಸ್ಟಂ ಮಾಡುತ್ತೇವೆ. ಸ್ಲಾಬ್ ಸಿಸ್ಟಂ ಮಾಡಿದಮೇಲೆ ಎಷ್ಟು ಲೆವಿ ಕೊಡಬೇಕೋ ಅಷ್ಟನ್ನು ಕೊಟ್ಟರೆ ಮಿಕ್ಕಿದ್ದನ್ನು ಮಾರಿಕೊಳ್ಳಬಹುದು ಇವತ್ತಿನ ದಿವಸ ಮಿಲ್ಲುಗಳಲ್ಲಿ ಬಹಳ ಮಿಸ್ಚೀಫ್ (Mischief) ನಡೆಯುತ್ತಿದೆ ಎಂಬುದು ಅಕ್ಷರಶಃ ನಿಜ ಆದರೆ ಅದು ಹೇಗೆ ನಡೆಯುತ್ತದೆಂಬುದು ನಮಗೆ ಅರ್ಥವಾಗುವುದಿಲ್ಲ. ರೈತರು ತೂಕ ಸಿಗುತ್ತದೆಂದು ಹಸಿ ಭತ್ತ ಜೊಳ್ಳು ಭತ್ತ ಕೊಡುತ್ತಾರೆಂದು ಮಿಲ್ಲಿನವರು ಪರ್ಸಂಟೇಜನ್ನು ಸರಿಯಾಗಿ ಕೊಡುವುದಿಲ್ಲ. ಹೀಗಾಗಿ ಒಂದು ತಾಲ್ಲೂಕಿನಲ್ಲಿ ಒಂದು ರೀತಿ ಇಳುವರಿ ಬರುತ್ತದೆ, ಇನ್ನೊಂದು ತಾಲ್ಲೂಕಿನಲ್ಲಿ ಇನ್ನೊಂದು ರೀತಿ ಇಳುವರಿ ಬರುತ್ತದೆ. ಇದಕ್ಕೆ ನ್ಯಾಶನಲ್ ಕ್ಯಾರಕ್ಟರ್ ಇಲ್ಲದೆ ಇರುವುದೇ ಕಾರಣ. ಆದುದರಿಂದ ಅದನ್ನು ಆಚರಣೆಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನ್ಯಾಶನಲ್ ಕ್ಯಾರೆಕ್ಟರನ್ನು ಸರಿಯಾಗಿ ಅನುಸರಿಸುವವರು ಯಾರು?

ಶ್ರೀ ಕೆ. ಆರ್. ಎಸ್. ನಾಯ್ಡು.—ನಾವು ಆಧುನಿಕ ಯುಗದಲ್ಲಿರುವುದರಿಂದ ಅದನ್ನು ನಾವು ನೀವೇ ಕಲಿಯಬೇಕೆಂದು ಸಲಹೆ ಮಾಡುತ್ತೇನೆ. ಈಗ ತಾನೇ ಮಾನ್ಯ ಶಾಮಣ್ಣನವರು ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟಿನ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಹೇಳುತ್ತಿದ್ದರು. ಆದರೆ ಅದನ್ನು ತೆಗೆಯದೆ ಇರುವುದರಿಂದ ಇವತ್ತಿನ ದಿವಸ ಸುಭದ್ರವಾದ ಆಹಾರದ ನೀತಿ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಹಿಂದೆ ಇವರ ಒತ್ತಡಕ್ಕೆ ಒಳಗಾಗಿ ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟಿನ ನಿರ್ಬಂಧವನ್ನು ತೆಗೆದು ಹಾಕಿದ್ದರು. ಆಗ ನಮ್ಮ ಪಾಡು ಏನಾಗುತ್ತಿತ್ತು? ನಮ್ಮ ನೆರೆ ರಾಜ್ಯಗಳಾದ ಕೇರಳ, ಮಹಾರಾಷ್ಟ್ರ, ಆಂಧ್ರ ಮತ್ತು ಮದ್ರಾಸ್‌ಗಳ ಪ್ರದೇಶಗಳಲ್ಲಿ ಹೆಚ್ಚು ಆಹಾರವನ್ನು ಬೆಳೆಯುತ್ತಾರೆ. ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ಬೆಳೆದ ಆಹಾರ ಪದಾರ್ಥಗಳು ಹೊರಗಡೆ ಹೋಗುತ್ತಿವೆ. ನಮ್ಮ ಕೇರಳ ರಾಜ್ಯದಲ್ಲಿ ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟಿನ ನಿರ್ಬಂಧ ಇರುವುದರಿಂದ ಸ್ವಲ್ಪ ಆಹಾರದ ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು ಈಗ ಪ್ರೊಕ್ಯೂರ್‌ಮೆಂಟ್ ಪಾಲಿಸಿ ಸರಿಯಾಗಿಲ್ಲವೆಂದೂ ಅದರಿಂದ ಬಹಳ ತೊಂದರೆಯಾಗುತ್ತಿದೆ ಎಂದು ಹೇಳಿದರು. ಅದನ್ನು ಮಾನಗಂಡೇ ಕೋರ್ಸ್ ಗ್ರೈನ್‌ಗಳಾದ ರಾಗಿ ಜೋಳ, ಜವಾರ್‌ಗಳನ್ನು ಲಿಬರಲೈಸ್ ಮಾಡಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳಬೇಕು. ಅದನ್ನು ಒಪ್ಪದೆ ಆಹಾರದ ಬೆಲೆ ಬಿದ್ದು ಹೋಯಿತೆಂದು ಹೇಳಬಾರದು. ಈಗ ಸ್ಮಗ್ಲರ್ಸ್ ಬ್ಲಾಕ್ ಮಾರ್ಕೆಟೀರ್ಸ್. ಮುಂತಾದವರ ಕಾಟ ಕಡಿಮೆಯಾಗಿದೆ. ಹಿಂದಿನ ಚತುರ್ಮಾಣಕ್ಕೆ ಬದಲಾಗಿ 1947ರಿಂದ ಈಚೆಗೆ ಬಂದಂತಹ ಸ್ಮಗ್ಲರ್ಸ್, ಹೋರ್ಡರ್ಸ್, ಸ್ಪೆಕ್ಯುಲೇಟರ್ಸ್. ಮತ್ತು ಬ್ಲಾಕ್ ಮಾರ್ಕೆಟೀರ್ಸ್‌ಗಳನ್ನು ಕಡಿಮೆ ಮಾಡುವುದಕೋಸ್ಕರ ಈ ಒಂದು ನೀತಿಯನ್ನು ಅನುಸರಣೆ ಮಾಡಿದ್ದೇವೆ. ಕೋರ್ಸ್ ಗ್ರೈನ್‌ಗಳನ್ನು ಲಿಬರಲೈಸ್ ಮಾಡಿ ಕಂಟ್ರೋಲ್ ಪಾಲಿಸಿಯನ್ನು ತೆಗೆದುಹಾಕಬೇಕೆಂದು ಕಲವು ಮಿತ್ರರು ಹೇಳಿದ್ದಾರೆ. ಆದರೆ ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ನಿರ್ಬಂಧ ಇರುವ ಜಿಲ್ಲೆಗಳಲ್ಲಿ ದಿನಸಿ ಉಳಿದಿದೆ ಮತ್ತು ಅಲ್ಲಿ ಏತಕ್ಕೆ ಬೆಲೆ ಕಮ್ಮಿ ಆಗಲಿಲ್ಲ? ಎಂಬುದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಂಗಳೂರು, ಮಂಗಳೂರಿನಂತಹ ಪ್ರದೇಶಗಳಲ್ಲಿ ಜನ ವಲಸೆ ಬಂದಿರುವುದರಿಂದ ಅಂತಹ ಕಡೆ ಬೆಲೆ ಜಾಸ್ತಿ ಇದೆಯೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಭತ್ತ ಬೆಳೆಯುತಕ್ಕಂತಹ ಶಿವಮೊಗ್ಗ ಮಂಡ್ಯದ ಕಡೆ ಏಕೆ ಬೆಲೆ

ಕಡಿಮೆ ಆಗಲಿಲ್ಲವೆಂದು? ಕೇಳುತ್ತೇನೆ? ಎಲ್ಲಿ ಮಳೆ-ಬೆಳೆ ಚೆನ್ನಾಗಿ ಆಗುತ್ತದೆ ಅಂಥ ಕಡೆಗಳಲ್ಲಿ ಏಕೆ ಬೆಲೆ ಕಡಿಮೆ ಆಗಿಲ್ಲವೆಂದು ಕೇಳಬಯಸುತ್ತೇನೆ. ಅಕ್ಕಿಯ ಬೆಲೆ ಕೇಜಿ ಒಂದಕ್ಕೆ ಮಂಡ್ಯಕ್ಕೂ ಬೆಂಗಳೂರಿಗೂ 5-10 ಪೈಸೆ ಹೆಚ್ಚು ಕಡಿಮೆ ಇರಬಹುದು. ಆದರೆ ಉತ್ತರ ಕರ್ನಾಟಕದಲ್ಲಿ ಏಕೆ ಅಕ್ಕಿಯ ಬೆಲೆ ಕಡಿಮೆಯಾಗಿಲ್ಲ? ಇದಕ್ಕೆ ನಾವು ಅನುಸರಿಸತಕ್ಕ ಪ್ರೊಕ್ಯೂರ್‌ಮೆಂಟ್ ನೀತಿನಿಯಮಗಳಿಂದಲೇ ತೊಂದರೆಯಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಈಗ ನಾನು ಒಂದು ಸಂತೋಷದ ಸಮಾಚಾರವನ್ನು ಕೇಳಿರುವುದು ಮತ್ತು ಪತ್ರಿಕೆಯ ಮುಖಾಂತರ ತಿಳಿದಿರುವುದೇನೆಂದರೆ ಶಾಲೆಗಳಲ್ಲಾಗಲಿ, ದೇವಸ್ಥಾನಗಳಲ್ಲಾಗಲಿ, ಅಥವಾ ಓಪನ್ ಪ್ಲೇಸ್ ಎಲ್ಲೆಲ್ಲಿಗೆ ಅಲ್ಲೆಲ್ಲ ಧಾನ್ಯಗಳನ್ನು ಶೇಖರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರ ಜೊತೆಗೆ ಅಧಿಕಾರವರ್ಗದಲ್ಲಿರತಕ್ಕವರಿಗೆ ಅಂದರೆ ಫ್ಯಾಕ್ಟರಿಗಳಲ್ಲಿ ಕಛೇರಿಗಳಲ್ಲಿ ಯಾರು ಕೆಲಸ ಮಾಡುತ್ತಿದ್ದಾರೋ ಅವರಿಗೆ 6 ತಿಂಗಳಿಗಾಗುವಷ್ಟು ರೇಶನ್ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೆಂದು ಕೇಳಿದ್ದೇನೆ. ಈ ರೀತಿ ಅಡ್ವಾನ್ಸ್ ಆಗಿ ರೇಷನ್ ಕೊಟ್ಟು ಕಂತಿನ ಮೂಲಕ ಆ ಹಣವನ್ನು ವಾಪಸ್ಸು ತೆಗೆದುಕೊಳ್ಳುವುದಾಗಿ ಮಾಡಿರುವ ವಿಚಾರ ಬಹಳ ಒಳ್ಳೆಯದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. factory workersಗೂ ಈ ನೀತಿಯಿಂದ ಬಹಳ ಸಹಾಯವಾಗುತ್ತೆ ಸರ್ಕಾರಿ ಅಧಿಕಾರಿಗಳಿಗೂ ಈ ಸವಲತ್ತು ಕೊಟ್ಟರೆ ಚೆನ್ನಾಗಿ ಇರುತ್ತದೆಯೆಂದು ಹೇಳುತ್ತೇನೆ ಹೀಗಿರುವಾಗ, ಈ ಅಧಿಕಾರವರ್ಗದವರು ಏನಿದ್ದಾರೆ ಇವರಿಂದಲೇ ಅನೇಕ ಅಡಚಣೆಗಳು ಬರುತ್ತವೆ. ಇವರಿಗೆ ಕನ್‌ವೇಯನ್ಸ್ ಫೆಸಿಲಿಟೀಸ್, ಇರಬೇಕು, ಇಮ್ಮಿಡಿಯಟ್ ಆಗಿ ಸೀಸ್ಟ್ ಆರ್ಟಿಕಲ್ಸ್ ಡಿಸ್‌ಪೋಸ್ ಆಗಬೇಕು. ಈ ಪ್ರೊಕ್ಯೂರ್‌ಮೆಂಟ್ ಆಫೀಸರ್ಸ್ ಏನಿದ್ದಾರೆ ಇವರಿಗೇ ಅಧಿಕಾರವಿದ್ದರೆ ಇವರು ಅದನ್ನು ಡಿಸ್‌ಪೋಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಕ್ಕಿ, ರಾಗಿ ಜೊತೆಗೆ ಎಡಿಬಲ್ ಆಯಿಲ್ ಕೂಡ ಇದೆ. ಇದು ಫ್ಲಕ್ಚುಯೇಷನ್ ಇನ್ ಬಜಾರ್ ಕೆಲವು ಸಂದರ್ಭಗಳಲ್ಲಿ ರೇಟ್ಸ್ ರೈಸ್ ಆಗುತ್ತದೆಂದು ಸ್ಟಾಕ್ ಮಾಡುತ್ತಾರೆ. ಈ ರೀತಿ ಸ್ಟಾಕ್ ಮಾಡುವುದರಲ್ಲಿ ಎರಡು ರೀತಿ ಇದೆ. ಗೋಧಿ, ಭತ್ತ ಮುಂತಾದುವುಗಳನ್ನು ಸ್ಟಾಕ್ ಮಾಡಿದಾಗ, ಅದರಲ್ಲಿ ಡ್ರೈಯೇಜ್ ಬರುತ್ತದೆ, ತೂಕ ಕಡಿಮೆ ಬರುತ್ತದೆ. ಆಗ ಇದನ್ನು ಯಾವ ರೀತಿ ಬರೆಯಬೇಕೆಂದು ಬರೆಯುತ್ತಾರೆ. ಇದನ್ನು ಕೆಲವು ಸಂದರ್ಭಗಳಲ್ಲಿ ರೇಷನ್ ಅಂಗಡಿಗಳಲ್ಲಿ ನೋಡಬಹುದು. ಆದುದರಿಂದ ಈ ಎಸೆನ್‌ಷಿಯಲ್ ಕಮಾಡಿಟೀಸ್ ಮೇಲೆ ಕಂಟ್ರೋಲ್ ಇಟ್ಟುಕೊಳ್ಳುವುದು ಸಹಜ. ಈಗ ತಂದಿರುವ ಆಕ್ಟ್ ಸೂಕ್ತವಾದದು ಎಂದು ಮನಗಂಡು ಇದನ್ನು ಸ್ವಾಗತ ಮಾಡಿ ನನಗೆ ಕೆಲವು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

3-30 P. M.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷರೇ ಈ ದಿನ ನಮ್ಮ ರಾಜ್ಯದ ಮಾನ್ಯ ಆಹಾರ ಸಚಿವರು ಈ ಒಂದು ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್‌ಗೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ತಂದಿದ್ದಾರೆ. ಇದನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ಈ ಒಂದು ತಿದ್ದುಪಡಿ ಮತ್ತು ಈ ಕಾಯಿದೆಯ ವಿಷಯದಲ್ಲಿ ಹೇಳುವುದಾದರೆ ಇದೊಂದು ಕರಾಳ ಶಾಸನವಾಗಿದೆಯೇ ಹೊರತು ಬೇರೆ ಇನ್ನೇನೂ ಅಲ್ಲವೆಂದು ಹೇಳಬೇಕಾಗಿದೆ. ಇದು ನಮ್ಮ ರಾಜ್ಯದ ರೈತರಿಗೆ ಮಾತ್ರವಲ್ಲ ಇಡೀ ಭಾರತದ ರೈತರೆಲ್ಲರಿಗೂ ಕೂಡ ಒಂದು ಮಾರಕವಾದ ಶಾಸನವಾಗಿದೆ. ಇವತ್ತಿನ ದಿವಸ ಇದನ್ನು ಇನ್ನೂ ಸರಳಗೊಳಿಸಿ ಇದನ್ನು ಕ್ರಮಬದ್ಧವಾಗಿ ಮಾಡಿ, ಇನ್ನೂ ರೈತರ ಕುತ್ತಿಗೆಯನ್ನು ಹಿಸುಕುವ ಕೆಲಸವನ್ನು ಮಾಡಬೇಕೆಂದು ನಮ್ಮ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತ ಹೋಗುತ್ತಿದ್ದಾರೆ. ಇವತ್ತು [illegible] ನೋಡುವುದಾದರೆ ಈ ಒಂದು ತಿದ್ದುಪಡಿ [illegible] ಯನ್ನು ಯಾವ ಕಾರಣದಿಂದ [illegible] ಬೇಕು ಎನ್ನುವ ವಿವರ ಇಲ್ಲ. ಇದರಲ್ಲಿ [illegible] ನೀವು ನಿಮ್ಮ ಬೆವರನ್ನು ಸುರಿಸಿ ಬೆಳೆಯುವ ಕಡೆ ನಿಮ್ಮ ರಕ್ತವನ್ನು ಸುರಿಸಿ ಬೆಳೆದಿದ್ದೀರಿ ಆದುದರಿಂದ ಈ

ಲೆವಿಯನ್ನು ಕೊಡಿ ಎಂದು ಹೇಳಿದ್ದಾರೆ ಅಷ್ಟೇ ವಿನಃ ಶಾಸ್ತ್ರೀಯ ಆಧಾರದ ಮೇಲೆ ಆಗಲಿ ಅಥವಾ ನ್ಯಾಯದ ಆಧಾರದ ಮೇಲೆ ಆಗಲಿ ಅಥವಾ ತರ್ಕಬದ್ಧ ಆಧಾರದ ಮೇಲಾಗಲಿ ಏನನ್ನೂ ಮಾಡಿಲ್ಲ. ಇವತ್ತು ಕಾನೂನು ಮಾಡತಕ್ಕ ಅಧಿಕಾರ ಸರ್ಕಾರಕ್ಕಿದೆ, ಸರ್ಕಾರ ನಡೆಸುವ ಅಧಿಕಾರ ವರ್ಗಕ್ಕೆ ಕೈಯನ್ನು ಎತ್ತುವ ಒಂದು ಅಧಿಕಾರ ನಮಗೆ ಇದೆ, ಆದುದರಿಂದ ನೀವು ಈ ಲೆವಿಯನ್ನು ಕೊಡಲೇಬೇಕು ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಹಿಂದೆ ಮಾತನಾಡಿದ ಮಾನ್ಯ ಸದಸ್ಯರು ಏನಿದ್ದಾರೆ ಅವರು ಮಾತನಾಡಿದ ಬಗ್ಗೆ ನಾನು ಮಾತನಾಡುವುದು ಸರಿಯಲ್ಲ ಏಕೆಂದರೆ ಅವರ ವಯಸ್ಸಿಗಾದರೂ ನಾನು ಬೆಲೆಯನ್ನು ಕೊಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ರೈತರಿಗೆ ಕೊಟ್ಟಿರತಕ್ಕ ಕೆಲವು ಸೌಲಭ್ಯಗಳ ಬಗ್ಗೆ ನಾನು ಆಗಲೆ ಮಾತನಾಡುತ್ತಿದ್ದೆ. ಈಗ ಅದಕ್ಕಿಂತಲೂ ಮೊದಲನೆಯದಾಗಿ ಹೇಳಬೇಕೆಂದರೆ ಕಳೆದ 3-4 ವರ್ಷಗಳ ಹಿಂದೆ ಕೇಂದ್ರ ಸರ್ಕಾರದವರು ಏನು ಹೇಳುತ್ತಿದ್ದರು ಎಂದರೆ, ನಾವು ಹೋಲ್ ಸೇಲ್ ಟ್ರೇಡ್ ಇನ್ ಫುಡ್‌ಗ್ರೈನ್ಸ್ ಅಂದರೆ ಆಹಾರದ ಸಗಟು ವ್ಯಾಪಾರವನ್ನು ನಾವೇ ವಹಿಸಿಕೊಂಡು ರೈತ ಬೆಳೆದ ಮಾಲಿಗೆ ಸರಿಯಾದ ಬೆಲೆಯನ್ನು ಆಹಾರ ತೆಗೆದುಕೊಂಡು ಗ್ರಾಹಕನಿಗೂ ಕೂಡ ಸರಿಯಾದ ಬೆಲೆಗೆ ಧಾನ್ಯಗಳು ಸಿಕ್ಕುವಂತೆ ಮಾಡುತ್ತೇವೆಂದು ಹೇಳಿದ್ದರು. ಅದು ನಮಗೂ ಕೂಡ ಬಹಳ ಸಂತೋಷವಾಗಿತ್ತು. ಈ ರೀತಿ ಬೆಳೆದವರಿಗೆ ಸರಿಯಾದ ಬೆಲೆಯನ್ನು ಕೊಟ್ಟು ಆಹಾರಪದಾರ್ಥಗಳನ್ನು ಗ್ರಾಹಕರಿಗೂ ಕೂಡ ನ್ಯಾಯವಾದ ಬೆಲೆಯಲ್ಲಿ ಸರಬರಾಜು ಮಾಡುವ ವಿಷಯವನ್ನು ನಾವು ಹಿಂದೆ ಸ್ವಾಗತ ಮಾಡಿದ್ದೆವು. ನನ್ನ ಮಟ್ಟಿಗೆ ಹೇಳುವುದಾದರೆ ಈ ಮಧ್ಯಸ್ಥಗಾರರನ್ನು ಕಡಿಮೆ ಮಾಡುವುದೇನು ಅವರು ಇಲ್ಲದಂತೆಯೇ ಮಾಡಿದರೂ ಕೂಡ ನಮಗೆ ಬಹಳ ಸಂತೋಷ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದವರು ಷುಗರ್ ಲಾಬಿಯಿಂಗ್, ಕಾಟನ್ ಲಾಬಿಯಿಂಗ್ ಎಂದು ಮಾಡಿದರು. ಅನಂತರ ಕೊನೆಯದಾಗಿ ಗೋಧಿಯನ್ನು ಮಾಡಿದರು. ಇವರು ಕೈಹಾಕಿದ ಮೂರೇ ತಿಂಗಳಲ್ಲಿ ನಡೆಯಬಾರದಂಥ ಅನಾಹುತ ನಡೆಯಿತು. ಅದಕ್ಕೆ ಕಾರಣ ಏನೆಂದರೆ ಒಂದು ಕಡೆ ಒಂದು ತತ್ವಕ್ಕೆ ಕಟ್ಟುಬಿದ್ದು ಇದನ್ನು ಕಾರ್ಯಗತ ಮಾಡುತ್ತೇವೆಂದು ಹೇಳಿದರು. ಆದರೆ ಇವತ್ತು ಅದು ಸರ್ಕಾರಕ್ಕೆ ಬೇಕಾಗಿಲ್ಲ ಎಲ್ಲೋ ಒಂದೊಂದು ಸಾರಿ ಒಳ್ಳೆಯ ಬುದ್ಧಿ ಬಂದಾಗ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡುತ್ತದೆ ಎಂದು ಹೇಳಬಯಸುತ್ತೇನೆ. ಆದರೆ ವಾಸ್ತವವಾಗಿ ಸರ್ಕಾರಕ್ಕೆ ಇದು ಯಾವುದೂ ಬೇಕಾಗಿಲ್ಲ. ಇಂಥ ಒಳ್ಳೆಯ ಕಲಸವನ್ನು ಯಾವ ರೀತಿ ಮುರಿಯಬೇಕೆಂದು ಹೊಂಚು ಹಾಕಿ ಗೋಧಿಯ ಸಗಟು ವ್ಯಾಪಾರವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಸರ್ಕಾರದವರೇ ತಮ್ಮ ಮನಸ್ಸನ್ನು ಪೂರ್ತಿಯಾಗಿ ಮುರಿದಿದ್ದಾರೆ. ಆದರೆ ಇದಕ್ಕೆ ಕಾರಣ ಜನತೆಯಲ್ಲಿ ಇದಕ್ಕೆ ಯಾರು ಹೊಣೆಗಾರರು, ಯಾರು ಇವರ ಹಿಂದೆ ಇದ್ದಾರೆ, ಯಾರು ದೊಡ್ಡ ದೊಡ್ಡ ವ್ಯಕ್ತಿಗಳು ಎಂದು ಇದ್ದಾರೆ ಅವರ ಒಂದು ಪ್ರಭಾವಕ್ಕೆ ಇವರು ಮಣಿದು ಅದನ್ನು ಕೈಬಿಟ್ಟರು. ಅದರ ಒಂದು ಪ್ರತಿಫಲವನ್ನು ನಾವು ಇಂದು ಅನುಭವಿಸುತ್ತಿದ್ದೇವೆ.

ರೈತರ ವಿಷಯದಲ್ಲಿ ಮಾನ್ಯ ನಾಯ್ಡುರವರು ಹೇಳಿದರು ಬಹುಶಃ ಅವರಿಗೆ ಗದ್ದೆ ಹೊಲ ಇಲ್ಲ ಎಂದು ಕಾಣುತ್ತೆ ನಾವು ಅವರನ್ನು ಯಾವಾಗ ನೋಡಿದರೂ ಕೂಡ ಬೆಂಗಳೂರಿನಲ್ಲಿಯೇ ಇರುತ್ತಾರೆ. ಕಳೆದ ಮೂರು ನಾಲ್ಕು ವರ್ಷದ ಲೆವಿ ಬೆಲೆ ನೋಡಿದರೆ 5-6 ರೂಪಾಯಿ ಜಾಸ್ತಿಯಾಗಿದೆ. ಆದರೆ ಮೂರು ನಾಲ್ಕು ವರ್ಷದಿಂದ ಈಚೆಗೆ ರೈತನ ಮೇಲೆ ಏರಿತಕ್ಕ ಕರವನ್ನು ನೋಡಿದರೆ ಗೊತ್ತಾಗುತ್ತದೆ. 500 ರೂಪಾಯಿ ಇದ್ದುದು ಬೆಟರ್‌ಮೆಂಟ್ ಲೆವಿ 1,500 ರೂಪಾಯಿ ಆಗಿದೆ ವಿದ್ಯುಚ್ಛಕ್ತಿ ಒಂದು ಯೂನಿಟ್‌ಗೆ 7-8 ಪೈಸೆ ಇದ್ದುದು 15 ಪೈಸೆಯಾಗಿದೆ. ಡಿಮ್ಯಾಂಡ್ ಚಾರ್ಜಸ್ ಎಂದು ಹಾಕುತ್ತಿದ್ದಾರೆ ಅದಕ್ಕೆ ಅರ್ಥ ಗೊತ್ತಿಲ್ಲ. ವಾಟರ್ ರೇಟಿನಲ್ಲಿ 100ಕ್ಕೆ 100 ರಷ್ಟು ಜಾಸ್ತಿ ಆಗಿದೆ ಆದರೆ ರೈತನಿಗೆ ಕೊಡಬೇಕಾದ ಲೆವಿ ಬೆಲೆಯಲ್ಲಿ ಕೇವಲ 7-8 ರೂಪಾಯಿ ಮಾತ್ರ ಹೆಚ್ಚು ಮಾಡಿದ್ದಾರೆ. ಇದಕ್ಕೆ ಯಾವ ಆಧಾರ ಇದೆ? ಮೂರು ನಾಲ್ಕು ವರ್ಷಗಳಿಂದ ಗೊಬ್ಬರದ ಬೆಲೆಯನ್ನು ಲೆಕ್ಕ ತೆಗೆದುಕೊಂಡರೆ 100 ಕ್ಕೆ 100 ಭಾಗ ಜಾಸ್ತಿಯಾಗಿದೆ ಮಿನಿಮಮ್ ಅಗ್ರಿಕಲ್ಚರ್ ಲೇಬರ್ ವೇಜಸ್ ಜಾರಿಗೆ ತಂದಿದ್ದಾರೆ. ಬಸ್ ಪ್ರಯಾಣದ ದರ ಜಾಸ್ತಿ ಮಾಡಿದ್ದಾರೆ; ಸಾಗಣಿಕೆ ಪದಾರ್ಥಗಳ ಬೆಲೆ ಗಗನಕ್ಕೆ ಮುಟ್ಟಿದೆ ಆದರೆ ರೈತ ಕೊಡಬೇಕಾದ ಲೆವಿಗೆ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ನಿಮಗೆ ಯಾವ ನೈತಿಕ ಆಧಾರ ಇದೆ? ಲೆವಿ ಕೊಡದೇ ಇರುವ ರೈತ ಎರಡರಷ್ಟು ಬೆಲೆ ಕೊಡಬೇಕೆಂದು ಮಾಡಿದ್ದಾರೆ ಒಂದು ಮಾತನ್ನು ಮಾನ್ಯ ಮಂತ್ರಿ

ಗಳಿಗೆ ಕೇಳುತ್ತೇನೆ. ಲೆವಿ ವಸೂಲಿಯಲ್ಲಿ ಈಗಾಗಲೇ ಅನೇಕ ಕಡೆ ದುರುಪಯೋಗವಾಗಿರತಕ್ಕ ನಿದರ್ಶನಗಳು ಅನೇಕ ಇವೆ. ಸಹಕಾರ ಸಂಘಗಳಲ್ಲಿ ಸ್ಟೋರ್ ಮಾಡಿದ್ದಾರೆ ಗೋಡೌನುಗಳಲ್ಲಿ ಸ್ಟೋರ್ ಮಾಡಿದ್ದಾರೆ ಅಲ್ಲಿ ಎರಡು ಕಾಲಿನ ಮತ್ತು ನಾಲ್ಕು ಕಾಲಿನ ಹೆಗ್ಗಣಗಳು ಇವೆ. ಇಂಥ ನಷ್ಟವಾದರೆ ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ? ಅಂಥವರಿಂದ ಒಂದಕ್ಕೆ ಎರಡು ಬೆಲೆಯಂತೆ ಎಷ್ಟು ವಸೂಲು ಮಾಡಿದ್ದೀರಿ? ಅವರ ಮೇಲೆ ಕೇಸ್ ಹಾಕುತ್ತೇವೆ ಅದು ಕೋರ್ಟಿನಲ್ಲಿ ತೀರ್ಮಾನವಾಗುತ್ತವೆಂದು ಹೇಳುತ್ತೀರಿ. ಆದರೆ ಬಡ ರೈತ ಲೆವಿ ಕೊಡದೇ ಹೋದರೆ ಎರಡರಷ್ಟು ದುಡ್ಡು ಕೊಡಬೇಕು. ಅಕ್ರಮ ರೀತಿಯಲ್ಲಿ ಸಂಪಾದನೆ ಮಾಡುವವರು.

ಅದನ್ನೇ ಜೀವನದ ರೀತಿ ನೀತಿಯನ್ನಾಗಿಟ್ಟುಕೊಂಡಿರುವವರಿಗೆ ಏನು ಮಾಡಿದ್ದೀರಿ? ಫುಡ್ ಕಾರ್ಪೊರೇಷನ್ನಿನ ಮೇಲೆ ಹಾಗೂ ನಿಮ್ಮ ಇಲಾಖೆಯು ಯಾರ ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಧೈರ್ಯ ಇಲ್ಲ, ಅದು ನಿಮಗೆ ಬೇಕಾಗಿಯೂ ಇಲ್ಲ, ಅಂಥ ಒಂದು ಶಕ್ತಿ ನಿಮಗೆ ಇಲ್ಲವೂ ಇಲ್ಲ. ಆದರೆ ಇವತ್ತು ಹಗಲು ರಾತ್ರಿ ದುಡಿಯುವಂತ ರೈತನ ಮೇಲೆ ಅವನು ಲೆವಿ ಕೊಡದೆ ಹೋದರೆ ಎರಡರಷ್ಟು ಕೊಡಬೇಕೆಂದು ಕಾನೂನು ಮಾಡುವುದಕ್ಕೆ ಹೊರಟಿದ್ದೀರಿ. ತಮಗೆ ಯಾವ ರೀತಿಯ ಅಧಿಕಾರ ಇದೆ ಎನ್ನುವುದು ಗೊತ್ತಿಲ್ಲ, ದೇಶದಲ್ಲಿ ಬರೀ ರೈತರೇ ಇಲ್ಲ. ಕಾರ್ಮಿಕರೂ ಇದ್ದಾರೆ ಅವರೂ ಕೂಡ ದೇಶಕ್ಕಾಗಿ ದುಡಿಯುತ್ತಿದ್ದಾರೆ, ಅವರಿಗೆ ಕಡಿಮೆ ಬೆಲೆಯಲ್ಲಿ ಆಹಾರ ಒದಗಿಸಿಕೊಡತಕ್ಕದ್ದು ಸರ್ಕಾರದ ಕರ್ತವ್ಯ. ನಾನು ಕೂಡ ಅದನ್ನು ಒಪ್ಪುತ್ತೇನೆ, ಆದರೆ ಇವತ್ತು ಕಾರ್ಮಿಕರಂಗದಲ್ಲಿ ನೋಡುವುದಾದರೆ, ವೇಜಸ್ ಇದೆ, ಕಾಸ್ಟ್ ಆಫ್ ಲಿವಿಂಗ್‌ಗೆ ತಕ್ಕಂತೆ ಡಿ. ಎ. ಜಾಸ್ತಿ ಮಾಡಬೇಕು ಎನ್ನುವ ಕಾಯಿದೆ ಇದೆ. ಸರ್ಕಾರಿ ನೌಕರರಿಗೂ ಅತ್ಯಾವಶ್ಯಕವಾದ ಪದಾರ್ಥಗಳ ಬೆಲೆ ಜಾಸ್ತಿಯಾದಾಗಲೆಲ್ಲಾ ಡಿ.ಎ ರೈಸ್ ಮಾಡುತ್ತಾರೆ. ಸಂಬಳ ಕೂಡ ಜಾಸ್ತಿ ಕೊಡುತ್ತಿದ್ದಾರೆ. ಆದರೆ ರೈತರಿಗೆ ಏನು ಕೊಡುತ್ತಿದ್ದೀರಿ? ಕಡಿಮೆ ಬೆಲೆ ರೈತರಿಗೆ ಏಕೆ ಕೊಡಬೇಕು? ಮನಸ್ವೇಚ್ಛೆ ಸಂಬಳ ಜಾಸ್ತಿ ಮಾಡಿಕೊಳ್ಳುವುದಕ್ಕೆ ಕಾರಣ ಅವರ ಬಾಯಿ ನಡೆಯುತ್ತದೆ. ಯಾರು ಸರ್ಕಾರದ ಮೇಲೆ ಕ್ರಮ ಬೀರುತ್ತಾರೆ ಅವರಿಗೆ ಮಾತ್ರ ಕೊಡುವುದಕ್ಕೆ ಸರ್ಕಾರ ಇದೆ. ಆದರೆ ರೈತ ಬೆಳೆದಂತ ಬೆಳೆಗೆ ಯೋಗ್ಯವಾದ, ನ್ಯಾಯವಾದ ಬೆಲೆಯನ್ನು ನಿರ್ಧಾರ ಮಾಡತಕ್ಕವರು ತಪ್ಪು, ಆದರೆ ಇವತ್ತಿನ ದಿವಸ ರೈತರಲ್ಲಿ ಒಗಟ್ಟು ಇಲ್ಲದೇ ಅವರ ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅದೇರೀತಿ ಸರ್ಕಾರಿ ನೌಕರರ ಮೇಲಾಗಲೀ, ಕಾರ್ಮಿಕರ ಮೇಲಾಗಲೀ ಕಾನೂನು ಏನಿದ್ದರೆ ಅವರು ನಿಮ್ಮನ್ನು ಬದುಕುವುದಕ್ಕೆ ಬಿಡುತ್ತಿರಲಿಲ್ಲ, ಜೀವಸಹಿತ ಓಡಾಡುವುದಕ್ಕೆ ಬಿಡುತ್ತಾ ಇರಲಿಲ್ಲ. ರೈತರನ್ನು ದುರುಪಯೋಗಪಡಿಸಿಕೊಂಡು ಸರ್ಕಾರ ದೋಚುವುದಕ್ಕೆ ಹೊರಟಿದೆ, ಇದು ದರೋಡೆ ಅಲ್ಲದೆ ಮತ್ತೇನು? ನಿಮ್ಮ ದರೋಡೆಯನ್ನು ಕಂಡು ಒಂದು ದಿವಸ ರೈತರು ಎಚ್ಚೆತ್ತುಕೊಳ್ಳುತ್ತಾರೆ. ನಾನು ಕೂಡ ಅಂತ ಪರಿಸ್ಥಿತಿ ಬರಲಿ ಎಂದು ಆಶಿಸುತ್ತೇನೆ. ಉತ್ಪಾದನಾ ವಸ್ತುಗಳಾದ ಬಟ್ಟೆ ಜನತಾ ಕಂಟ್ರೋಲ್ ಕ್ಲಾತ್ ಎಷ್ಟು ತರಿಸಿದ್ದರೂ ಎಷ್ಟು ಮಾರಾಟ ಮಾಡಿದ್ದಾರೆ. ಅದರ ಗುಣಮಟ್ಟ ಇಳಿದಿರತಕ್ಕಂಥಾದ್ದು ನಿಜವಲ್ಲವೇ ಎಂದು ಕೇಳಿದಾಗ, ಇದೇ ಸದನದಲ್ಲಿ ಸರ್ಕಾರ ಒಪ್ಪಿಕೊಂಡಿದೆ, ಕಂಟ್ರೋಲ್ ಬಟ್ಟೆಯ ಗುಣಮಟ್ಟ ಇಳಿದಿದೆ ಎಂದು. ಆದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಅದೇ ಬಟ್ಟೆಯನ್ನು ರೈತರಿಗೆ ಮತ್ತು ಕೂಲಿಕಾರರಿಗೆ ಒದಗಿಸುತ್ತಿದ್ದೀರಿ. ಆ ಬಟ್ಟೆ ಶ್ರವ ಸಂಸ್ಕಾರಕ್ಕೂ ಕೂಡ ಯೋಗ್ಯವಾಗಿಲ್ಲ, ಕನ್ಸ್ಯೂಮರ್ಸ್ ಫೆಡರೇಷನ್‌ನಲ್ಲಿ ಲಕ್ಷಾಂತರ ರೂಪಾಯಿ ಬಟ್ಟೆ ಬಿದ್ದಿದೆ. ಅದನ್ನು ಹೇಳುವವರು ಇಲ್ಲ. ಕೇಳುವವರೂ ಇಲ್ಲ. ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ, ಅವರಿಂದ ಲೆವಿ ವಸೂಲು ಮಾಡಿದ್ದೀರಾ? ರೈತನಿಗೆ ಹಸಿ ಬತ್ತ ಕೊಟ್ಟಿದ್ದಾರೆಂದು ಹೇಳುತ್ತಿದ್ದೀರಿ, ಬಟ್ಟೆಗೆ ಕೇಂದ್ರ ಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದಾರೆ, ರೈತರಿಗೆ ಯಾವುದೂ ಇಲ್ಲ. ಅಹಮದಾಬಾದ್ ಮತ್ತು ಬಾಂಬೆಯವರು ಮಿಲ್ಲಿನ ಮಾಲೀಕರಿಗೆ ಇವತ್ತು ಮೀಟರಿಗೆ ೫೦-೬೦ ಪೈಸೆ ಹಾಗೂ ಒಂದು ರೂಪಾಯಿಯಂತೆ ಸಬ್ಸಿಡಿ ಕೊಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಕೊಡುತ್ತಿದ್ದೀರಿ. ಅವರ ಮೇಲೆ ಯಾವ ಕಾನೂನನ್ನು ಮಾಡುವುದಕ್ಕೂ ತಾವು ತಯಾರಿಲ್ಲ, ಹಾಗೂ ಬಟ್ಟೆ ಬೆಲೆ ಕಡಿಮೆ ಮಾಡುವುದಕ್ಕೂ ತಾವು ತಯಾರಿಲ್ಲ. ತಾವು ಹೇಳಬಹುದು ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆ ಎಂದು. ತಾವು ಅದಕ್ಕೆ ಅಮೆಂಡ್‌ಮೆಂಟನ್ನು ತಂದರೆ ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಯಾವ ಗೊಬ್ಬರದ ಮೇಲೆ ಯಾವ ಗೊಬ್ಬರದ ಕಾರ್ಖಾನೆಯ ಮೇಲೆ ಲೆವಿಯನ್ನು ಹಾಕಿದ್ದೀರಿ. ಬ್ಲಾಕ್ ಮಾರ್ಕೆಟ್ ತಡೆಯುವುದಕ್ಕೆ ಎಷ್ಟರಮಟ್ಟಿಗೆ ಪ್ರಯತ್ನ ಪಟ್ಟಿದ್ದೀರಿ ತಾವು ಲೆಕ್ಕ ಕೊಡಿ. ೫೦-೫೫ ರೂಪಾಯಿ ಇದ್ದಂಥ ಯೂರಿಯಾ ೧೦೫ ರೂಪಾಯಿಗಳಷ್ಟು ಬೆಲೆಗೆ ಏರಿಸಿದ್ದು.

ಒಂದು ಸಲ ೫೦ ರೂಪಾಯಿಗಳಷ್ಟು ಒಂದು ಮೂಟೆಗೆ ಜಾಸ್ತಿ ಮಾಡಿದಿರಿ. ನಿಮ್ಮನ್ನು ಕೇಳಿದರೆ ನಾವಲ್ಲ ನಿಗದಿಮಾಡಿದ್ದು ಕೇಂದ್ರ ಸರ್ಕಾರದವರೆಂದು ಹೇಳುತ್ತೀರಿ. ರೈತರನ್ನು ಲೆವಿಯನ್ನು ಕೊಡಿಯೆಂದು ಕೇಳುವವರು, ಗೊಬ್ಬರದ ಕಾರ್ಖಾನೆಯವರ ಮೇಲೂ ಲೆವಿಯನ್ನು ಹಾಕಿ ಗೊಬ್ಬರದ ಬೆಲೆಯನ್ನು ನಿಗದಿ ಮಾಡಿ ಮಾರಾಟಮಾಡಬೇಕೆಂದು ಹೇಳಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ತಯಾರು ಮಾಡತಕ್ಕ ಇರುವ ಗೊಬ್ಬರದ ಬೆಲೆಯನ್ನು ನಿಗದಿ ಮಾಡತಕ್ಕವರು ಇರುವವರು ಈ ಗೊಬ್ಬರದ ಕಾರ್ಖಾನೆಯ ಮ್ಯಾನೇಜ್‌ಮೆಂಟ್‌ನವರು. ಆದರೆ ರೈತ ಕಷ್ಟಪಟ್ಟು ಬೆಳೆವಂಥ ಧಾನ್ಯಗಳಿಗೆ ಬೆಲೆಯನ್ನು ನಿಗದಿ ಮಾಡುವುದು ರೈತನಿಗೆ ಕೊಟ್ಟಿಲ್ಲ. ನೀವು ಹೇಳುತ್ತೀರಿ ಬೆಲೆಯನ್ನು ನಿಗದಿ ಮಾಡುವುದು ಕೇಂದ್ರ ಸರ್ಕಾರವೆಂದು. ಕೇಂದ್ರ ಸರ್ಕಾರದವರು ಹೇಳುತ್ತಾರೆ ನೀವು ಕೇಳುತ್ತೀರಿ, ಅದರಂತೆ ರೈತನಿಗೆ ಬೆಲೆಯನ್ನು ಕೊಡುತ್ತೇವೆಂದರೆ ಇದು ಯಾವ ನ್ಯಾಯವೆಂದು ಕೇಳಬೇಕಾಗಿದೆ. ಈವತ್ತಿನ ದಿವಸ ಸರ್ಕಾರದ ರಂಗದಲ್ಲಿಯೇ ತಯಾರಾಗುತ್ತಿರುವ ಕಬ್ಬಿಣ ಬೇಕು ಎಂದರೆ, ಅತನಿಗೆ ಕಂಟ್ರೋಲ್ ರೇಟಿನಲ್ಲಿ ಸಿಕ್ಕುತ್ತಿಲ್ಲ. ಕರ್ನಾಟಕದಲ್ಲಿ ಹಾಸನದಲ್ಲಿ ತಯಾರು ಮಾಡುತ್ತಿರುವ ಉಪಕರಣಗಳನ್ನು ರೈತರಿಗೆ ಕಡಿಮೆ ಬೆಲೆಯಲ್ಲಿ ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾವುದನ್ನು ಕೇಳಿದರೂ ಲೆಕ್ಕ ಕೊಡುವುದಕ್ಕೆ ಈವತ್ತಿನ ದಿವಸ ಸರ್ಕಾರ ತಯಾರಾಗಿಲ್ಲ. ಅದಕ್ಕೆ ಬದಲಾಗಿ ಸರ್ಕಾರದವರು ವಿದ್ಯುಚ್ಛಕ್ತಿಯ ಮೇಲೆ ದರಗಳನ್ನು ಜಾಸ್ತಿ ಮಾಡಿದ್ದಾರೆ. ಬೆಟರ್‌ಮೆಂಟ್ ಲೆವಿಯನ್ನು ಜಾಸ್ತಿ ಮಾಡಿದ್ದಾರೆ ವಾಟರ್ ರೇಟನ್ನು ಜಾಸ್ತಿಮಾಡಿದ್ದಾರೆ. ರೈತರಿಗೆ ಅತಿಮುಖ್ಯವಾಗಿ ತನ್ನ ಬೇಸಾಯಕ್ಕೆ ಏನು ಬೇಕೋ ಅವುಗಳ ಮೇಲೆಲ್ಲ ಟ್ಯಾಕ್ಸಿನ ಹೊರೆಯ ರೂಪದಲ್ಲಿ ಹೇರಲಿಕ್ಕೆ ಹೊರಟಿದ್ದೀರಿ. ರೈತನು ಮಾಡಿದಂಥ ಪಾಪವಾದರೂ ಏನು ಎಂದು ಕೇಳಬೇಕಾಗಿದೆ. ಅವನು ಮಾಡಿದಂಥ ಪಾಪವನ್ನು ಅಳೆಯಲು ಒಂದು ಸ್ಕೇಲನ್ನು ತಯಾರು ಮಾಡಿದರೆ ಅದರಿಂದಲೂ ಕೂಡ ಸರಿಯಾದ ಅಳತೆ ಸಿಗುತ್ತದೋ ಇಲ್ಲವೋ ತಿಳಿಯುವುದಿಲ್ಲ. ಇಷ್ಟಾದರೂ ಸಹ ನಾಚಿಕೆಯಿಲ್ಲದೆ ರೈತ ಲೆವಿಯನ್ನು ಕೊಡದಿದ್ದರೆ ಎರಡರಷ್ಟು ಬೆಲೆಯನ್ನು ವಸೂಲು ಮಾಡುವುದಕ್ಕೆ ಹೊರಟಿರುತ್ತೀರಿ. ಏನು ದುರ್ಗತಿ ಸರ್ಕಾರಕ್ಕೆ ಬಂದಿತೋ ಗೊತ್ತಿಲ್ಲ. ಸಹಕಾರಿ ಸಂಘಗಳಲ್ಲಿ ದುರುಪಯೋಗ ಮಾಡಿದವರನ್ನು ಬಿಟ್ಟಿರುತ್ತೀರಿ, ಸರ್ಕಾರದಲ್ಲಿ ಲೂಟಿ ಮಾಡಿದಂಥವರನ್ನು ಬಿಟ್ಟಿರುತ್ತೀರಿ, ದೇಶದಲ್ಲಿ ಆಹಾರದ ಕೊರತೆಯಿರುವಾಗ, ಹೆಚ್ಚಿನ ಆಹಾರವನ್ನು ಉತ್ಪಾದನೆ ಮಾಡಬೇಕೆಂದು ಹೇಳುತ್ತಿರುವ ಸಂದರ್ಭದಲ್ಲಿ ಕ್ವಾಲಿಟಿ ಆಫ್ ಫುಡ್ ಉತ್ಪಾದನೆ ಮಾಡಬೇಕೆಂದು ಹೇಳತಕ್ಕಂಥ ಸಂದರ್ಭದಲ್ಲಿ ರೈತನಿಗೆ ಬೇಕಾದಂತ ಉತ್ತೇಜನವನ್ನು ಕೊಡದೆ, ರೈತನನ್ನು ಬಗ್ಗು ಬಡಿಯುವಂಥ ಕೆಲಸವನ್ನು ಸರ್ಕಾರದವರು ಏತಕ್ಕೆ ಮಾಡುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ಇದೇ ಸದನದಲ್ಲಿ ಮಾನ್ಯ ಪ್ರಭಾಕರ್‌ರವರು ಒಂದು ಪ್ರಶ್ನೆಯನ್ನು ಕೇಳಿದರು. ತಮಿಳುನಾಡಿನಿಂದ ಎಷ್ಟು ಅಕ್ಕಿ ಮತ್ತು ಭತ್ತವನ್ನು ತರಿಸುತ್ತಿದ್ದೀರೆಂದು, ಅದನ್ನು ಎಲ್ಲೆಲ್ಲಿ ವಿತರಣೆ ಮಾಡಿದ್ದೀರಿ, ಯಾರಿಗೆ ಕೊಟ್ಟಿದ್ದೀರೆಂದು ಪ್ರಶ್ನೆ ಕೇಳಿರುತ್ತಾರೆ. ಮಾನ್ಯ ಸದಸ್ಯರು ಈಗ ಇಲ್ಲಿಲ್ಲ. ಅವರ ಪ್ರಶ್ನೆಗೆ ಉತ್ತರ ಬರಲಿಲ್ಲ. ಆದರೂ ಕೂಡ ಈವತ್ತಿನ ದಿವಸ ಉತ್ತರ ಅಚ್ಚಾಗಿದೆ. ಕಳೆದ ನಾಲ್ಕು ವರ್ಷದಿಂದ ತಮಿಳುನಾಡಿನಿಂದ ಸುಮಾರು ೯೯೪೦ ಕ್ವಿಂಟಾಲ್‌ಗಳಷ್ಟು......

SRI S. B. SAYANAK.—I think there is no quorum.

MR. DEPUTY SPEAKER.—It is very unfortunate that the work has to be stopped for want of quorum. After all, every one has to take his job a little more seriously and the dignity and decorum of the House has to be maintained at all costs. I feel that we should put an end to all this, because, frequent occurrence pains me very much.

ಶ್ರೀ ಸಿ. ಬೈರೇಗೌಡ.—ಮಾನ್ಯ ಉಪಸಭಾಧ್ಯಕ್ಷರೆ, ೯೯೪೦ ಹಾಗೂ ೧೨೫೫೧ ಕ್ವಿಂಟಾಲ್‌ಗಳಷ್ಟು ಭತ್ತ ಇದನ್ನು ೧೯೭೩-೭೪ನೇ ಸಾಲಿನಲ್ಲಿ ಒಂದು ಸಾರಿ ತರಿಸಿಕೊಂಡಿದ್ದೇವೆಂದು ಹೇಳಿದಿರಿ. ಆದರೆ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದು ಏನು ಎಂದರೆ ಭತ್ತಕ್ಕೆ ಬದಲಾಗಿ ವಿದ್ಯುತ್ತನ್ನು ಕೊಟ್ಟು ಅದರ ಆಧಾರದ ಮೇಲೆ ತಂದಿದ್ದೇವೆಂದು. ಆದರೆ ಇದಕ್ಕೆ ವಾಪಸ್ ಕೊಟ್ಟಿದ್ದು ಏನು ಎಂದರೆ ಏನು ಇರುವುದಿಲ್ಲ. ಈವತ್ತಿನ ದಿವಸ ಏನೂ ಕೊಟ್ಟಿಲ್ಲವೆನ್ನುವುದು ಅಚ್ಚಾಗಿರತಕ್ಕಂಥ ಉತ್ತರದಿಂದ ಗೊತ್ತಾಗುತ್ತಾ ಇದೆ. ಆದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಒಂದು ಕ್ವಿಂಟಾಲ್‌ನಷ್ಟು ಭತ್ತ ಕೂಡ ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದಿಲ್ಲ. ಇದು ಎಲ್ಲಿ ಹೋಯಿತು ಎಂದರೆ ಅವರಿಗೆ ಬೇಕಾದಂಥ ಏಜೆಂಟರಿಗೆ

ಲೈಸೆನ್ಸ್ ಕೊಟ್ಟು ಮಂಡಿಯಲ್ಲಿರತಕ್ಕಂಥ ಏಜೆಂಟರ ಮೂಲಕ ತಮಿಳುನಾಡಿನಿಂದ ಕೇರಳಕ್ಕೆ ರವಾನೆಯಾಗಿ ಲಕ್ಷಾಂತರ ರೂಪಾಯಿಗಳಷ್ಟು ಲಾಭವನ್ನು ಮಾಡಿದ್ದಾರೆ. ಅಂಥವರಿಂದ ಯಾವ ಲೆವಿಯನ್ನು, ಯಾವ ಬೆಟರ್‌ಮೆಂಟ್‌ನ್ನು ಮಾಡಿಸುತ್ತೀರಿ. ಸರಕು ಎಲ್ಲಿ ಹೋಯಿತು ಎಂದು ಕೇಳಿದರೆ ಅದಕ್ಕೆ ಉತ್ತರ ಸೊಸೈಟಿಗಳಿಗೆ ಹಂಚಿದ್ದೇವೆ ಎಂದು ಹೇಳುತ್ತೀರಿ. ಎಲ್ಲಿಂದ ಬಂತು? ಯಾವ ಯಾವ ದರದಲ್ಲಿ ಹಂಚಿದಿರಿ, ಯಾವ ಯಾವ ಜಿಲ್ಲೆಗೆ ಹಂಚಿದ್ದೀರೆಂದು ಹೇಳುವುದಕ್ಕೆ ಲೆಕ್ಕ ಕೊಡಿ ಎಂದು ಕೇಳುತ್ತಿದ್ದೇನೆ? ಈವತ್ತಿನ ದಿವಸ ರೈತರ ಮೇಲೆ ಒಂದಕ್ಕೆ ಎರಡರಷ್ಟು ದಂಡವನ್ನು ಹಾಕುವುದಕ್ಕೆ ಹೊರಟಿರುತ್ತೀರಿ. ನೀವು ಮಾಡುತ್ತಿರುವ ಅನಾಚಾರಕ್ಕೆ ಭ್ರಷ್ಟಾಚಾರಕ್ಕೆ ಮಿತಿ ಇಲ್ಲದಂತಾಗಿದೆ. ಸುಲಭವಾಗಿ ಹೇಳಿ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೀರಿ. ದಯವಿಟ್ಟು ಲೆಕ್ಕವನ್ನು ಕೊಡಿ ಎಮರ್ಜೆನ್ಸಿ ಎಂದು ಹೇಳಿ ನಮ್ಮ ಬಾಯನ್ನು ಮುಚ್ಚಿಸಿ ನಿಮ್ಮ ಕೆಲಸವನ್ನು ಮಾಡಿಕೊಳ್ಳುವುದು ಬಹಳ ದಿವಸಗಳು ನಡೆಯುವುದಿಲ್ಲ ಎಮರ್ಜೆನ್ಸಿ ಇರಬಹುದು. ಜನರ ಬಾಯನ್ನು ಅದುಮಿಟ್ಟುಕೊಳ್ಳಲು ಸಾಧ್ಯವಿಲ್ಲ. ಈರೀತಿ ಅನ್ಯಾಯ ನಡೆಯುವುದಾದರೆ ನಿಮ್ಮ ಎಮರ್ಜೆನ್ಸಿಯನ್ನು ಮುರಿಯಲೇ ಬೇಕಾಗುತ್ತದೆ. ಈರೀತಿಯಾದ ಕೆಲಸವನ್ನು ಮಾಡುವುದಕ್ಕೆ ನಿಮಗೆ ಕಾನೂನು ಕಾಯಿದೆಗಳೂ ಇರುವುದಿಲ್ಲ. ಎಲ್ಲಿ ಹೋಯಿತು ಭತ್ತ ಮತ್ತು ಅಕ್ಕಿ. ಕೇರಳಕ್ಕೆ ಹೋಯಿತೆ? ಯಾರು ಯಾರಿಗೆ ಲೈಸೆನ್ಸ್‌ಗಳನ್ನು ಕೊಟ್ಟಿದ್ದೀರಿ, ಕರ್ನಾಟಕದಲ್ಲಿ ಭತ್ತವನ್ನು, ಅಕ್ಕಿಯನ್ನು ಹಂಚಿರುವುದಕ್ಕೆ ಸಂಪೂರ್ಣವಾದ ಮಾಹಿತಿಯನ್ನು ಕೊಡಬೇಕೆಂದು ಹೇಳುತ್ತೇನೆ.

ಆಹಾರಧಾನ್ಯಗಳನ್ನು ಹೊರಗಡೆಯಿಂದ ತಂದರೆ ಆಹಾರಧಾನ್ಯದ ಬೆಲೆ ಇಳಿಯುತ್ತವೆ. ಇವತ್ತು ಆದಾಗುತ್ತಿದೆ ಇವತ್ತು ಹೋರ್ಡರ್ಸ್‌ಗೆ ಅವಕಾಶ ಇಲ್ಲ ಬ್ಯಾಂಕಿನಲ್ಲೂ ಹೆಚ್ಚಿನ ಸೌಲಭ್ಯ ಇಲ್ಲ, ಆದರಿಂದ ಇವತ್ತಿನ ದಿವಸ ಬೆಲೆ ಕಡಿಮೆಯಾಗುತ್ತಿದೆ ನಾವು ದೇಶದಲ್ಲಿ ಜನರ ರಕ್ತವನ್ನು ಹೀರುತ್ತಾ. ಇರುವ ಜನರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದಾಗ ಕ್ರಮತೆಗೆದುಕೊಂಡಿದ್ದು ಕೃಷ್ಣನ್ ಅವರ ಪಾರ್ಟಿಯ ಕಾಮ್ರೇಡ್‌ಗಳ ಮೇಲೆ ಅವರ ಮೇಲೆ ಲಾಠಿ ಏಟುಗಳು ಬಿದ್ದವು. ತರಗುಪೇಟೆಯಲ್ಲಿ ಲಾಠಿ ಏಟು ಬಿತ್ತು. ಇದು ಬೆಂಗಳೂರಿನಲ್ಲಿ ನಡೆದಂಥ ವಿಷಯ ಹೇಳುತ್ತಿದ್ದೇನೆ,

4-00 P. M.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಪಾರ್ಟಿಯಿಂದ ಅಖಿಲ ಭಾರತ ಮಟ್ಟದಲ್ಲಿ ಚಳುವಳಿ ಮಾಡುವುದಕ್ಕೆ ಹೋದೆವು. ಅದೇ ರೀತಿ ಬೆಂಗಳೂರಿನಲ್ಲೂ ಮಾಡಿದೆವು. ಬೆಂಗಳೂರಿನಲ್ಲಿ ಡೀಹೋರ್ಡಿಂಗ್ ಮಾಡುವುದಕ್ಕೆ ಬಿಡಲಿಲ್ಲ ಪೋಲೀಸಿನವರಿಗೆ ಜಾಗ ತೋರಿಸುತ್ತೇವೆ ಎಂದು ಹೇಳಿದರೂ ಬಿಡಲಿಲ್ಲ. ನಮ್ಮನ್ನು ಆರೆಸ್ಟ್ ಮಾಡಿ ವಾಲಂಟಿಯರ್ಸ್‌ಗಳನ್ನು ಹಿಡಿದುಕೊಂಡು ಬಡಿದರು

ಶ್ರೀ ಸಿ. ಭೈರೇಗೌಡ —ನಿಜ ಹೇಳಿದರೆ ಲಾಠಿ ಏಟು. ಹೋರ್ಡರ್ಸ್‌ನ್ನು ಹಿಡಿದರೆ ಆಹಾರಧಾನ್ಯ ಹೊರಗೆ ಬರುತ್ತದೆ ಎಂದು ಹೇಳಿದರೆ ಅದನ್ನು ಮಾಡಲಿಲ್ಲ. ಹೋರ್ಡರ್ಸ್‌ಗೆ ಅವತ್ತಿನ ದಿವಸ ರಕ್ಷಣೆ ಕೊಟ್ಟರು ಅವತ್ತಿನ ದಿವಸ ಬೆಲೆಗಳು ಜಾಸ್ತಿಯಾಗುತ್ತಿದೆ ಎಂದಾಗ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲಾ ಕಡೆ ಬೆಲೆಗಳು ಜಾಸ್ತಿಯಾಗಿವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಆಕಾಶಪುರಾಣ ಹೇಳಿದರು. ಇವತ್ತು ರೈತ ಲೆವಿ ಕೊಡದೇ ಇದ್ದರೆ ಅದರ ಎರಡರಷ್ಟು ವಸೂಲು ಮಾಡಬೇಕು, ಅವರಿಗೆ ಪೆನಾಲ್ಟಿ ಹಾಕಬೇಕು ಎಂದು ತಿದ್ದುಪಡಿ ತಂದಿದ್ದಾರೆ. ಆದರೆ ಸರ್ಕಾರದವರು ಮಾಡುವಂಥ ಅನ್ಯಾಯಗಳಿಗೆ ಯಾರು ಪೆನಾಲ್ಟಿ ಹಾಕಬೇಕಾಗಿದೆ. ನಾವು ಬೆಲೆಗಳು ಜಾಸ್ತಿಯಾಗುತ್ತಿದೆ ಎಂದು ಹೇಳಿದರೆ ಅದು ಇಂಟರ್‌ನ್ಯಾಷನಲ್ ಫಿನಾಮಿನಾ ಆಗಿದೆ ಎಂದು ಹೇಳಿದರು. ಹಾಗಾದರೆ ಈಗ ಯಾವ ಯಾವ ದೇಶದಲ್ಲಿ ಏನೇನಾಗಿದೆ, ಇಲ್ಲಿ ಮಾತ್ರ ಯಾತಕ್ಕೆ ಬೆಲೆ ಕಡಿಮೆಯಾಗುತ್ತಿದೆ ಹೇಳಿ. ಸರಿಯಾದಂಥ ಕ್ರಮ ಜರುಗಿಸಿದ್ದರೆ ಆಗಲೂ ಕೂಡ ಬೆಲೆ ಹತೋಟಿಯಲ್ಲಿಡುವುದಕ್ಕೆ ಸಾಧ್ಯವಿತ್ತು ಆದರೆ ಆಗ ಮಾಡಲಿಲ್ಲ. ಹೋರ್ಡರ್ಸ್, ಬ್ಲಾಕ್‌ಮಾರ್ಕೆಟರ್ಸ್, ಸ್ಮಗ್ಲರ್ಸ್ ಅವರೆಲ್ಲರೂ ಸರ್ಕಾರದ ಪರವಾಗಿ ಕೆಲಸ ಮಾಡುತ್ತಿದ್ದವರು. ಆದ್ದರಿಂದ ಬೆಲೆಗಳು ಜಾಸ್ತಿಯಾಗುವುದಕ್ಕೆ ಅವಕಾಶ ವಾಯಿತು. ಅವತ್ತಿನ ದಿವಸ ನ್ಯಾಯವಾಗಿ ಕೆಲಸ ಮಾಡುವುದಕ್ಕೆ ಸರ್ಕಾರಕ್ಕೆ ಇಚ್ಛೆ ಇರಲಿಲ್ಲ. ಆ ಕಾರಣದಿಂದ ಬೆಲೆಗಳು ಜಾಸ್ತಿಯಾಗುತ್ತಿತ್ತು. ಈಗಲೂ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ರೈತನಿಗೆ ಸರಿಯಾದ ಪ್ರೋತ್ಸಾಹ, ರೈತನಿಗೆ ಬೇಕಾದಂತ ಅನುಕೂಲತೆಗಳನ್ನು ಒದಗಿಸಿಕೊಡಿ. ಕಾರ್ಖಾನೆಗಳವರು ತಾವು ತಯಾರು ಮಾಡತಕ್ಕ ಪದಾರ್ಥಗಳಿಗೆ ಬೆಲೆ ನಿಗದಿ ಮಾಡುವಂಥ ಅನುಕೂಲತೆ ಹೇಗೆ ಪಡೆದಿದ್ದಾರೆಯೋ ಅದೇ ರೀತಿ ಅನುಕೂಲತೆ ರೈತರಿಗೂ ಒದಗಿಸಿಕೊಡಿ. ಅವರು ಬೆಳೆದಂಥ ಪದಾರ್ಥಕ್ಕೆ ಅವರೇ ಬೆಲೆಯನ್ನು ನಿಗದಿ ಮಾಡಲಿ; ಆ ರೀತಿ

ಯಾತಕ್ಕೆ ಮಾಡಬಾರದು? ಆ ರೀತಿಯಾದಂಥ ಖಾನೂನು ತರುವುದಕ್ಕೆ ಸರ್ಕಾರಕ್ಕೆ ಇಷ್ಟ ಇಲ್ಲ. ನಾವು ಆ ರೀತಿಯದಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ವಿಷಯ ಮತ್ತೆ ಎತ್ತಬೇಕಾಗುತ್ತದೆ. ಇವರು ಮಾಡಿದಂಥ ಕರ್ಮಕಾಂಡ ವರದಿಯಲ್ಲಿದೆ. ಅದಕ್ಕೆ ಏನು ತಮ್ಮ ಉತ್ತರ?

ಶ್ರೀಮತಿ ಇ. ಇವಾಜ್.—ಉತ್ತರ ಕೊಡೋಣ.

ಶ್ರೀ ಸಿ. ಭೈರೇಗೌಡ.—ಡಿಸೆಂಬರ್ ೧೯೬೫ರಲ್ಲಿ ರಿಪೋರ್ಟ್ ಕೊಟ್ಟಿದೆ. ೬-೭ ತಿಂಗಳಾಯಿತು ಅದಕ್ಕೆ ಏನಿದೆ ತಮ್ಮ ಉತ್ತರ. ಯಾರೋ ಒಬ್ಬ ಏಜೆಂಟರನ್ನು ಕರೆದು ಅವರಿಗೆ ಕೊಡಬೇಕು ಎಂದು ನಿರ್ಧಾರ ಕೈಗೊಂಡಿರಿ.

ಶ್ರೀಮತಿ ಇ. ಇ ವಾಜ್.—ಎಷ್ಟು ಸಲ ಹೇಳಿದ್ದೇ ಹೇಳುವುದು?

ಶ್ರೀ ಸಿ. ಭೈರೇಗೌಡ.—ನೀವು ಮಾಡಿದ್ದೇ ಮಾಡಿದರೆ ನಾವು ಹೇಳಿದ್ದೆ ಹೇಳಬೇಕಾಗುತ್ತದೆ. ಒಂದಾದ ಮೇಲೊಂದು ಅನ್ಯಾಯ ಮಾಡುತ್ತಾ ಇದ್ದರೆ ಹೇಳಬೇಕಾಗುತ್ತದೆ. ರಿಪೋರ್ಟ್ ಕೊಟ್ಟು ಐದಾರು ತಿಂಗಳಾಯಿತು. ಏನು ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಅದನ್ನೂ ಕೂಡ ಇವತ್ತಿನ ದಿವಸ ಹೇಳಬೇಕಾಗಿದೆ. ಇವತ್ತು ತಮಗೆ ವೇಳೆಯಿಟ್ಟಿ ಇರಬಹುದು. ನಿಮ್ಮ ಪಾರ್ಟಿಯವರ ಬಾಯನ್ನು ಇಲ್ಲಿ ಮುಚ್ಚಿಸಿದ್ದೀರಿ. ಹೊರಗಡೆ ನಮ್ಮ ಬಾಯನ್ನು ಹೇಗೆ ಮುಚ್ಚಿಸಿದ್ದೀರೋ ಅದೇ ರೀತಿ ನಿಮ್ಮ ಪಾರ್ಟಿಯವರ ಬಾಯನ್ನು ಇಲ್ಲಿ ಮತ್ತು ಹೊರಗಡೆ ಎರಡು ಕಡೆ ಇಲ್ಲೂ ಮುಚ್ಚಿಸಿದ್ದೀರಿ. ನೀವು ಮಾಡಿರತಕ್ಕ ಅನ್ಯಾಯ, ಅಕ್ರಮ ಬೇಕಾದಷ್ಟು ಇವೆ. ತುರ್ತುಪರಿಸ್ಥಿತಿಯಲ್ಲಿ ನೀವು ಏನೇನು ಕೆಲಸ ಮಾಡುತ್ತಿದ್ದೀರಿ ಎಂಬುದು ಪತ್ರಿಕೆಯಲ್ಲಿ ಬರುವು ದಿಲ್ಲ ಅದ್ದರಿಂದ ಪರವಾಗಿಲ್ಲ ಎಂದು ತಿಳಿದುಕೊಂಡಿರಬಹುದು. ಅದರ ರೆಕಾರ್ಡ್ ನಲ್ಲಿರುತ್ತದೆ. ಅದ ಕೋಸ್ಕರವಾದರೂ ಸರಿಯಾಗಿ ಕೆಲಸ ಮಾಡಬೇಕಾಗಿದೆ. ತಮಿಳುನಾಡಿನಿಂದ ಬಂದಂಥ ಅಕ್ಕಿ ಎಲ್ಲಿ ಹೋಯಿತು? ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿ ಪ್ರಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ?

MR. DEPUTY SPEAKER.—The Hon'ble Member may please be within the scope and he may be rest assured that whatever he has spoken be yondthe scope will not be replied by the Hon'ble Minister also.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಹೇಳುತ್ತಿರುವುದು ಫುಡ್ ಅಂಡ್ ಸಿವಿಲ್ ಸಪ್ಲೈಸಗೆ ಸಂಬಂಧಪಟ್ಟಿದ್ದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಕೂಡ ಅದಕ್ಕೆ ಸಂಬಂಧಪಟ್ಟಿದೆ.

SMT. E. E VAZ.—I think our Hon'ble Member has not known that he has unnecessarily wasted his lungs.

SRI C. BHYREGOWDA.—I have not wasted. I have done my duty.

MR. DEPUTY SPEAKER.—Who says that the Hon'ble Member has not noe his duty. To-dap he has done his duty most spleandidly. Nobody will dispute it. All the same, I have given a little latitude.

ಶ್ರೀ ಸಿ ಬೈರೇಗೌಡ.—ಈಗ ಲೆವಿ ಕೊಡದೇ ಇದ್ದರೆ ಎರಡರಷ್ಟು ಕೊಡಬೇಕು ಎಂದು ಹೇಳಿದ್ದೀರಿ. ರೈತ ಬೆಳೆದ ತಪ್ಪಿಗೆ ಪೆನಾಲ್ಟಿ ಬೇರೆ ಕೊಡಬೇಕೆ? ನಿಮಗೆ ಅಧಿಕಾರ ಇದೆ ಎಂದು ಹೇಳುತ್ತಾ ಇರಿ, ನಿಮ್ಮ ಕಥೆ ಮುಗಿಯುವ ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿರುವುದೇನೆಂದರೆ ಕೊನೇಪಕ್ಷ ಒಂದು ತಿದ್ದುಪಡಿಯನ್ನಾದರೂ ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್ನಾಳ್ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಆಹಾರ ಸಚಿವರು ತಂದಿರುವ ಈಬಿಲ್ಲಿನಲ್ಲಿ ಅಡಕವಾಗಿರುವುದು ೨ ಅಂಶಗಳು. ಕಲೆಕ್ಟರ್ ಎನ್ನುವಂತಹ ಒಂದು ಪದಕ್ಕೆ ಅದರ ವ್ಯಾಖ್ಯೆಯನ್ನು ವಿವರವಾಗಿ ಹೇಳಿದ್ದಾರೆ, ಜೊತೆಗೆ ಕಾನಫಿಸ್ಕೇಶನ್ ಅಂದರೆ ಮುಟ್ಟುಗೋಲು ಹಾಕತಕ್ಕ ಅಧಿಕಾರ ಕೂಡ ಸರ್ಕಾರಕ್ಕೆ ಇರಬೇಕೆಂದು ಹೇಳಿದ್ದಾರೆ. ಈ ಕಲೆಕ್ಟರ್ ಎನ್ನುವ ಪದಕ್ಕೆ ಪಂಚಾಯತಿ ಆಕ್ಟಿನಲ್ಲೂ ಕೂಡ ಅಸಿಸ್ಟೆಂಟ್ ಕಮೀಶನರಿಗೆ ವಸ್ತು ಮಾಡತಕ್ಕ ಹಕ್ಕನ್ನು

ಕೊಟ್ಟಿದ್ದಾರೆ. ಈ ಒಂದು ಕಲಮಿನಲ್ಲಿ ಅದು ಇಲ್ಲಿಯವರೆಗೆ ಇರಲಿಲ್ಲ. ಆ ದೃಷ್ಟಿಯಿಂದ ಆ ಹಕ್ಕನ್ನು ಅಸಿಸ್ಟೆಂಟ್ ಕಮಿಷನರಿಗೆ ಮತ್ತು ಅಡಿಷನಲ್ ಡೆಪ್ಯೂಟಿ ಕಮೀಷನರಿಗೆ ಕೊಡತಕ್ಕದ್ದು ಸೂಕ್ತವೆಂದು ಹೇಳುತ್ತೇನೆ. ನಾನು ಸದನದ ಒಳಗೆ ಬರುವಾಗ ಮಾನ್ಯ ಲಿಂಗಪ್ಪನವರು ಬಹಳ ಉದ್ವೇಗದಿಂದ ಮಾತ ನಾಡುತ್ತಿದ್ದರು. ಮಾನ್ಯ ಲಿಂಗಪ್ಪನವರಾಗಲಿ ಅವರ ಪಕ್ಷದವರಾಗಲಿ ಹಳ್ಳಿಯಲ್ಲಿ ಲೆವಿ ಕೊಡಬೇಡಿ ಎಂದು ಹೇಳುವುದು, ಪಟ್ಟಣದಲ್ಲಿ ಅಕ್ಕಿ ರೇಟು ಬಹಳ ಜಾಸ್ತಿಯಾಯಿತೆಂದು ಚಳುವಳಿ ಮಾಡುತ್ತಾರೆ. ಅವರು ಈ ರೀತಿ ದ್ವಂದ್ವ ನೀತಿಯನ್ನು ಇಟ್ಟುಕೊಂಡಿರುವಂತಹ ಪಕ್ಷಕ್ಕೆ ಸೇರಿದ್ದಾರೆ.

ಶ್ರೀ ಕೊಣಂದೂರು ಲಿಂಗಪ್ಪ.—ನಾವು ಲೆವಿಗೆ ವಿರೋಧವಾಗಿ ಏಕೆ ಚಳುವಳಿ ಮಾಡಿದೆವು ಎನ್ನುವ ವಿಚಾರ ಅವರಿಗೆ ಗೊತ್ತಿಲ್ಲ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ನಮ್ಮಲ್ಲಿ ಒಂದು ಗಾದೆ ಇದೆ. ತೊಟ್ಟಿಲು ತೂಗುವುದು, ಮಗುವನ್ನು ಚಿವುಟುವುದು—ಅದು ಅವರ ಕೆಲಸವಾಗಿದೆ. ಲೆವಿಯನ್ನು ಏತಕ್ಕೆ ಕೊಡಬೇಕೆಂದು ಅರ್ಥವಾಗದಿದ್ದರೆ ವಿವರವಾಗಿ ಹೇಳುವುದು ಬಹಳ ಕಷ್ಟ. ಯಾರು ದವಸಧಾನ್ಯಗಳನ್ನು ಬೆಳೆಯುವುದಿಲ್ಲ, ದಿನವಹಿ ಕೂಲಿ ಮಾಡಿಕೊಂಡಿರುತ್ತಾರೆ ಅಂತಹವರಿಗೆ ಆಹಾರ ಧಾನ್ಯಗಳನ್ನು ಒದಗಿಸತಕ್ಕ ಅವಕಾಶ ಸರ್ಕಾರಕ್ಕೆ ಇರಬೇಕಾಗುತ್ತದೆ. ಸರ್ಕಾರದ ರೀತಿಯಲ್ಲಿ ಎಲ್ಲಾ ವರ್ಗದವರನ್ನು ನೋಡಿಕೊಳ್ಳುವ ದೃಷ್ಟಿ ಇರುವುದರಿಂದ ರೈತರನ್ನು, ಕೂಲಿಗಾರರನ್ನು ನೋಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಲೆವಿ ಸಂಗ್ರಹ ಆಗಲೇಬೇಕೆಂದು ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಅರ್ಥ ಮಾಡಿಕೊಳ್ಳದಿದ್ದರೆ ಅದು ದುರ್ದೈವ. ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಿದರೆ ಹೆಚ್ಚಾಗಲಾರದು. ಲೆವಿ ಕಲೆಕ್ಟ್ ಮಾಡುವುದು ಎಲ್ಲರೂ ಒಪ್ಪತಕ್ಕಂತಹದ್ದು. ಆದರೆ ರೈತ ಕರಾರಿಗೆ ಮೊದಲು ನನ್ನ ಜಮೀನಿನಲ್ಲಿ ಇಂತಿಷ್ಟು ಫಸಲಾಗಿದೆ ಅದನ್ನು ತಾವು ಬಂದು ನೋಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿರುತ್ತಾರೆ. ಆ ಅರ್ಜಿಯನ್ನು ವಿಕ್ಷೇಸದೆ ಕಠಾವು ಆಗಿ ಎಲ್ಲಾ ಫಸಲನ್ನು ಮನೆಗೆ ತೆಗೆದುಕೊಂಡು ಹೋದ ಮೇಲೆ ಇಂತಿಷ್ಟು ಲೆವಿ ಕೊಡಬೇಕೆಂದು ನೋಟೀಸು ಬರುತ್ತದೆ. ಅವನ ಜಮೀನಿನಲ್ಲಿ ನಿಜವಾಗಿ ಉತ್ತಮ ಬೆಳೆ ಆಗಿರುವುದಿಲ್ಲ, ಅವನು ಕೊಟ್ಟಂತಹ ಅರ್ಜಿ ಆಫೀಸಿನಲ್ಲಿರುತ್ತದೆ. ಹೀಗಾಗಿದ್ದರೂ ಅವನನ್ನು ಲೆವಿ ಕೊಡಬೇಕೆಂದು ಕೇಳಿದರೆ ಅವನು ಎಲ್ಲಿಂದ ತಂದು ಕೊಡಬೇಕು? ನಮ್ಮ ಜಿಲ್ಲೆಯಲ್ಲಿ ಎಷ್ಟೋ ಜನ ಕೊಂಡು ಕೊಟ್ಟಿದ್ದಾರೆ. ಈಗ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಯಾವ ಯಾವ ಪ್ರದೇಶದ ರೈತರಿಂದ ಅರ್ಜಿಗಳು ಬರುತ್ತವೆಯೋ ಅಲ್ಲಿಗೆ ಸಂಬಂಧಪಟ್ಟ ಅಧಿಕಾರಿಗಳು ಹೋಗಿ ಅಲ್ಲಿನ ರೈತರಿಗೆ ಭತ್ತ ಎಷ್ಟಾಗಿದೆ ಎಂಬ ಬಗ್ಗೆ ತಹಶೀಲ್ದಾರರಿಗೆ ರಿಪೋರ್ಟ್ ಕೊಟ್ಟ ನಂತರ ಲೆವಿ ನೋಟೀಸ್ ಬರೆಯುವ ಪದ್ಧತಿಯನ್ನು ಮಾಡಿದರೆ ಯಾವ ತೊಂದರೆಯೂ ಆಗುವುದಿಲ್ಲ. ಇಲ್ಲದಿದ್ದರೆ ಎತ್ತು ಕರು ಹಾಕಿತು ಎಂದರೆ ಕೊಟ್ಟಿಗೆಗೆ ಕಟ್ಟು ಎನ್ನುವ ಹಾಗೆ ಆಗುತ್ತದೆ. ಲೆವಿ ಕಲೆಕ್ಟ್ ಮಾಡುವುದು ಸರ್ಕಾರದ ಪದ್ಧತಿ. ರೈತರು ಕೊಟ್ಟಂತಹ ಅರ್ಜಿಗಳನ್ನು ಪರಿಗಣಿಸದೆ ಶಾನುಭೋಗ ನೋಟಿಸ್ ಕೊಡುತ್ತಾನೆ. ಅಷ್ಟರಲ್ಲಿ ರೈತನು ಭತ್ತವನ್ನು ಕಠಾವು ಮಾಡಿ ಮನೆಗೆ ತಂದಿರುತ್ತಾನೆ. ಒಂದು ವೇಳೆ ಈಗ ಫಸಲನ್ನು ನೋಡುವುದಕ್ಕೆ ಬಂದರೆ ಅದನ್ನು ತೋರಿಸುವ ಹಾಗೆ ಇಲ್ಲ. ಏನಾದರೂ ರೈತ ಲೆವಿ ಕೊಡಲಿಲ್ಲವೆಂದರೆ ಪೆನಾಲ್ಟಿ ರೂಪದಲ್ಲಿ ಒಂದಕ್ಕೆರಡರಷ್ಟು ಲೆವಿಯನ್ನು ಕೊಡಬೇಕೆಂದು ಕಾನೂನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಅವನು ಕೊಂಡಾದರೂ ಕೊಡಬೇಕಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಅವನು ಊಟ ಮಾಡುವುದು ಹೇಗೆ? ದಿನಬಳಕೆಯ ವಸ್ತುಗಳನ್ನು ಕೊಂಡುಕೊಳ್ಳುವುದು ಹೇಗೆ ಎನ್ನುವುದನ್ನು ಆಲೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ಈಗ ಆಹಾರ ಪದಾರ್ಥಗಳನ್ನು ಓಪನ್ ಮಾರ್ಕೆಟಿನಲ್ಲಿ ಪರ್ಚೇಸ್ ಮಾಡುವುದಕ್ಕೆ ಕೆಲವಾರು ಸೊಸೈಟಿಗಳಿಗೆ ಅವಕಾಶ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ, ನಮ್ಮ ತಾಲ್ಲೂಕಿನಲ್ಲಿ ನಡೆದಂತಹ ನಿದರ್ಶನವನ್ನು ಹೇಳುವುದಾದರೆ, ನಮ್ಮ ಹೊಸನಗರ ತಾಲ್ಲೂಕಿನ ಮಾರ್ಕೆಟಿಂಗ್ ಸೊಸೈಟಿ ಸೂಪರ್‌ಸೀಡ್ ಆಗಿದೆ. ಅದನ್ನು ಪುರಪಬೆಳೆ ಎಂಬ ಸೊಸೈಟಿಗೆ ವಹಿಸಿಕೊಟ್ಟಿದ್ದಾರೆ. ಅವರಿಗೆ ಇಂತಿಷ್ಟು ಏರಿಯಾದಲ್ಲಿ ಮಾತ್ರ ಪರ್ಚೇಸ್ ಮಾಡಬೇಕೆಂದು ಒಂದು ವ್ಯಾಪ್ತಿಯನ್ನು ನಿಗದಿ ಮಾಡಿದ್ದಾರೆ. ಆದರೆ ಅವರು ಏನು ಮಾಡಿದರೆಂದರೆ ಹೊಸನಗರ ತಾಲ್ಲೂಕಿನಲ್ಲಿ ಪರ್ಚೇಸ್ ಮಾಡುವುದು ಬಿಟ್ಟು ಶಿಕಾರಿಪುರ ಮತ್ತಿತರ ತಾಲ್ಲೂಕುಗಳಿಗೆ ಹೋಗಿ ಅಲ್ಲಿ ಕಡಿಮೆ ರೇಟಿನಲ್ಲಿ ಭತ್ತ ಸಿಗುತ್ತದೆಂದು ಅಲ್ಲಿಂದ ಕೊಂಡು ತಂದು ದಾಸ್ತಾನು ಮಾಡಿ ಇಟ್ಟರು. ಅದಕ್ಕೆ ಹೊಸನಗರ ತಾಲ್ಲೂಕಿನ ಕೆಲವು ರೈತರಿಂದ ಕೊಂಡ ಹಾಗೆ ಇಲ್ಲಿನ ರೇಟು ಹಾಕಿ ಅಂದರೆ ಜಾಸ್ತಿ ಹಣಕ್ಕೆ ಅವರ ಹೆಸರಿನಲ್ಲಿ ಪರ್ಚೇಸ್ ಮಾಡಿದಹಾಗೆ ರಶೀತಿ ಬರೆದರು. ಇದರಿಂದ ಅಧಿಕಾರಿಗಳಿಗೆ

ಒಂದು ಲಕ್ಷ ರೂಪಾಯಿ ಒಳ ಆದಾಯ ಬಂತು. ಇದನ್ನು ಯಾರಾದರೂ ಗಮನಿಸಿದ್ದಾರೆಯೆ? ಕೆಲವೇ ವರ್ಗದ ಜನರಿಗೆ ದುಡ್ಡು ಮಾಡಿಕೊಳ್ಳುವ ವ್ಯವಸ್ಥೆ ಆಗುವುದಾದರೆ ಫುಡ್ ಪ್ರೊಕ್ಯೂರ್‌ಮೆಂಟ್ ಪಾಲಿಸಿ ಹೇಗೆ ನಡೆಯುತ್ತದೆಂಬುದನ್ನು ಯೋಚನೆ ಮಾಡಬೇಕು. ಇನ್ನೊಂದು ಶಿವಮೊಗ್ಗದಲ್ಲಿ ನಡೆದ ಘಟನೆ ಏನೆಂದರೆ, ಅಲ್ಲಿನ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಪ್ರೊಕ್ಯೂರ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಒಂದು ದಿವಸ ಆ ಸೊಸೈಟಿಯ ಗೋಡೌನನ್ನು ಚೆಕ್ ಮಾಡಿದಾಗ ಅಲ್ಲಿದ್ದದ್ದು ಪೂರಾ ಭತ್ತದ ಹೊಟ್ಟು. ಆ ಸೊಸೈಟಿಯವರು ಪ್ರೊಕ್ಯೂರ್ ಮಾಡಿರುವುದು ಬರೀ ಬತ್ತದ ಹೊಟ್ಟು. ಅಂದರೆ ಅಕ್ಕಿ ಎಲ್ಲ ವ್ಯಾಪಾರವಾಗಿ ಬರೀ ಹೊಟ್ಟು ಮಾತ್ರ ಉಳಿದಿದೆ. ಈ ಸಂದರ್ಭದಲ್ಲಿ, ಆ ಗೋಡೌನನ್ನು ನೋಡಿಕೊಳ್ಳುತ್ತಿದ್ದಂತಹ ಕ್ಲರ್ಕ್ ಮೇಲೆ ಆಕ್ಷನ್ ತೆಗೆದುಕೊಂಡರೇ ಹೊರತು ಆ ಸೊಸೈಟಿಯ ಪ್ರೆಸಿಡೆಂಟ್ ಮೇಲಾಗಲಿ, ಸೆಕ್ರೆಟರಿಯ ಮೇಲಾಗಲಿ ತೆಗೆದುಕೊಳ್ಳಲಿಲ್ಲ. ಇಂತಹ ನ್ಯೂನತೆಗಳು ದಿನೇ ದಿನೇ ನಡೆಯುತ್ತಿರುವಾಗ ರೈತನಿಗೆ ಏನು ಅನ್ನಿಸುತ್ತದೆಂದರೆ ತಾನು ಕಷ್ಟಪಟ್ಟು ಬೆಳೆದಂತಹ ಭತ್ತಕ್ಕೆ ಸರಿಯಾದ ಬೆಲೆ ಸಿಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರೆಸಿಡೆಂಟರನ್ನು ಏತಕ್ಕೆ ಬಿಟ್ಟಿದ್ದಾರೆ ಹೇಳಿ?

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.—ಇದರಿಂದ ಏನಾಗುತ್ತದೆಂದರೆ ಯಾರೋ ಮಧ್ಯವರ್ತಿ ಜನ ಸೊಸೈಟಿಗಳ ಹೆಸರಿನಲ್ಲಿ ಸ್ವಂತ ದುಡಿಮೆಗಾಗಿ ದುಡಿದುಕೊಳ್ಳತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಳ್ಳುತ್ತಿದ್ದಾರೆಂಬ ಮನೋಭಾವನೆ ರೈತರಲ್ಲಿ ಉದ್ಭವವಾಗುತ್ತದೆ. ನಂತರ ಮಾರ್ಕೆಟಿಂಗ್ ಸೊಸೈಟಿಗಳಿಗೆ ಇಂತಿಷ್ಟೇ ರೇಟಿನಲ್ಲಿ ಪರ್ಚೇಸ್ ಮಾಡಬೇಕೆಂದು ಸರ್ಕಾರದವರು ಒಂದು ರೇಟನ್ನು ಕೊಟ್ಟಿರುತ್ತಾರೆ. ಆಮೇಲೆ ಯಾವುದೋ ಒಂದು ದಿವಸ 10 ರೂಪಾಯಿ ಕಡಿಮೆ ರೇಟಿನಲ್ಲಿ ಪರ್ಚೇಸ್ ಮಾಡಬೇಕೆಂದು ಆದೇಶ ಕಳುಹಿಸಿ ಕೊಡುತ್ತಾರೆ. ಆದರೆ ಅನೇಕ ಸೊಸೈಟಿಗಳಲ್ಲಿ ಪರ್ಚೇಸ್ ಮಾಡಿದ ಬಿಲ್ ಹಾಕಿದ ಎಷ್ಟೋ ದಿನದ ಮೇಲೆ ದುಡ್ಡು ಕೊಡುವುದಾಗಿರುವುದರಿಂದ ಹಿಂದೆ ಅಂದರೆ ಪರ್ಚೇಸ್ ಮಾಡಿದಾಗ 80 ರೂಪಾಯಿ ರೇಟು ಇದ್ದರೂ 70 ರೂಪಾಯಿಗಳಂತೆ ಕೊಂಡುಕೊಳ್ಳಬೇಕೆಂದು ಆದೇಶ ಬಂದಿದೆ ಎಂದು ಹೇಳಿ ಅಷ್ಟೇ ಹಣವನ್ನು ಕೊಟ್ಟು ಕಳುಹಿಸುತ್ತಾರೆ. ಉಳಿದ ಹತ್ತು ರೂಪಾಯಿಗಳನ್ನು ಇವರ ಜೇಬಿಗೆ ಹಾಕಿಕೊಳ್ಳುತ್ತಾರೆ. ಇದು ರೈತನಿಗೆ ಹೇಗೆ ಗೊತ್ತಾಗಬೇಕು. ಒಟ್ಟಿನಲ್ಲಿ ರೈತನು 10 ರೂಪಾಯಿಗಳನ್ನು ಲಾಸ್ಸನ್ನು ಮಾಡಿಕೊಳ್ಳುತ್ತಾನೆ. ಈ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಮತ್ತು ಇದನ್ನು ಪರಿಶೀಲನೆ ಮಾಡಿ ಸೂಕ್ತಕ್ರಮ ಕೈಗೊಳ್ಳಬೇಕೆಂದು ಹೇಳಿ ಈ ಶಾಸನಕ್ಕೆ ಬೆಂಬಲವನ್ನು ಕೊಡುತ್ತಾ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri B. B. NAYANK (Belgaum) — Mr. Deputy Speaker Sir, I rise to oppose this Bill. I am of the opinion that the agriculturists should pay the levy. But I am of the same opinion that they must get fair prices for their products. This year the Government is always saying that because of emergency we have collected the buffer stock according to our target. According to me there is good rain and the nature has come to our help with the result there is bumper crop in India.

The Central Government has fixed a target of 4.63 million tonnes of rice, 5.20 million tonnes of wheat and 1.30 million tonnes of coarse grain. According to my information it appears the Central Government has already collected the levy more than the target fixed. As they had no godown or warehouses for storing the stock, they have issued an order for requisitioning the houses and school buildings. If this is the case where is the need to bring in such an amendment. By bringing this amendment may I know from the Government whether from next year there will not be good rain and consequently there will be

a drought and that is why they have brought this legislation ? The worst thing in this Bill is that if an agriculturist does not pay the levy, the Govt. will collect the double levy. This is a worst kind of harassment to the agriculturists. The Government is keen to protect the organised labour class because they are well organised and they would fight for their rights. Since the agriculturists are disorganised and they have no unions of their own, the Government is taking undue advantage of their helplessness. The agriculturists are suffering silently. The charges of electricity are going up every year, fertiliser prices are doubled and some of the people had purchased the fertiliser in black market; betterment charges are also increasing and water tax is going to be increased year after year Besides, the agriculture labour should be paid a wage of Rs. 6 per day according to the Minimum Wages Act. If we calculate all these things, what will be the prices of these agricultural products. Government has not taken into consideration all these factors and have fixed the prices of the agricultural products. The Central Government is consulting only the State Governments but not the experts in agriculture, and they are fixing the prices of agricultural products. Now the prices of agricultural products are going down and down and the prices of industrial products are going up and up Nobody is going to check the prices of the industrial products They must take measures to bring down the prices of industrial products. But I know the industrialists are not going to yield to the Government. It is the poor agriculturists who are not well organised are subjected to harassment. The agriculturist constitute 70 per cent of the population and they are the backbones of this country. This being so you are harassing this population. This is not good on the part of the Government. On the one hand you say that you are for the poor and the down trodden and on the hand you are burdening them with many rigorous laws. This is not fair.

With these few words, I thank the Chair and conclude my speech.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಆಹಾರ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಮಸೂದೆಯ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಹೇಳಬೇಕೆಂದು ನನ್ನ ಅಭಿಲಾಷೆ ಇದೆ. ಇದರಲ್ಲಿ ಮೊದಲನೆಯದು ಈ ಮಸೂದೆಯಲ್ಲಿ ಕಲೆಕ್ಟರ್ ಎನ್ನುವ ಪದಕ್ಕೆ ವ್ಯಾಪ್ತಿಜಾಸ್ತಿಯಾಗಬೇಕು, ಕಲೆಕ್ಟರಿಗೆ ಅಸಿಸ್ಟೆಂಟ್ ಕಮಿಷನರ್ ಸ್ಟೇಟಸ್ ಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ಬಿನ್ನಾಭಿಪ್ರಾಯ ಇರುವ ಹಾಗೆ ಇಲ್ಲ ಏಕೆಂದರೆ ಈ ದಿನ ಕಲೆಕ್ಟರ್ ಅನ್ನುವ ಪದ ಸೀಮಿತಗೊಳಿಸಿದರೆ ಬೇರೆ ಅಧಿಕಾರಿಗಳಿಗೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ. ಕಾರ್ಯ ನಿರ್ವಹಣೆಯಲ್ಲಿ ಈ ತರಹ ಮುಖ್ಯವಾದ ಒಂದು ಮಸೂದೆ ಬರಬೇಕಾದರೆ ಹತೋಟಿ ತರುವ ವಿಷಯದಲ್ಲಿ ಬೇರೆ ಅಧಿಕಾರಿಗೆ ಅವಕಾಶ ಕೊಡದೆ ಒಬ್ಬರೇ ಅಧಿಕಾರಿಗೆ ಅವಕಾಶ ಕೊಟ್ಟರೆ ಅದರಿಂದಾಗಿ ಎಷ್ಟು ದೂರ ಸಮರ್ಪಕವಾಗಿ ಕಾರ್ಯ ನಿರ್ವಹಣೆ ಮಾಡಬೇಕೋ ಅವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ದಿನ ಕಲೆಕ್ಟರ್ ಎನ್ನುವ ಬಗ್ಗೆ ಅದರ ವ್ಯಾಪ್ತಿ ಜಾಸ್ತಿ ಮಾಡುವ ಬಗ್ಗೆ ಬಿನ್ನಾಭಿಪ್ರಾಯವಿಲ್ಲ.

ಇನ್ನೊಂದು ಮುಖ್ಯವಾದ ವಿಷಯ ಬರುವುದು ಏನೆಂದರೆ ೩ನೇ ಸೆಕ್ಷನ್‌ನಲ್ಲಿ ಡೆಫಿನಿಷನ್ ಪ್ರಕಾರ ಅವರ ಸ್ಕೋಪ್ ಜಾಸ್ತಿ ಮಾಡಿದ್ದಾರೆ. ಇದರಲ್ಲಿ ಮುಖ್ಯವಾಗಿ ಹಿಂದಿನ ಆಕ್ಟ್ ಏನಿದೆ ಅದನ್ನು ಓದಿದರೆ ಸ್ವಲ್ಪಮಟ್ಟಿಗೆ ಸಮಂಜಸವಾಗಿ ಕಾಣುತ್ತದೆ. ಆದರೆ ಹಲವಾರು ಶಂಕೆಗಳೂ ಬರುತ್ತವೆ. ಈಗ ಉದಾಹರಣೆಗೆ ಹೇಳುವುದಾದರೆ ಸೆಕ್ಷನ್ (೨) (ಎಫ್)ಲ್ಲಿ ಈ ರೀತಿ ಹೇಳಿದ್ದಾರೆ. (ಇಂಗ್ಲಿಷ್)

Section 3 (2) reads thus :

"Without prejudice to the generality of the powers conferred by sub-section (1), an order made thereunder may provide——

(a) * *

(f) for requiring any person holding in stock any essential commodity to sell the whole or a specified part of the stock to the Central Government or a State Government or to an officer or such Government or to such other person or class of persons and in such circumstances as may be specified in the order."

The above section is sought to be changed in the following manner—

> "(f) for requiring any person holding in stock or likely to hold in stock, or engaged in the manufacture or production or processing of, or in the business of buying or selling any essential commodity, to sell the whole or a specified part of the quantity of the essential commodity.........as specified in the order."

As far as the objection is concerned, it looks to be quite laudable in the sense that these persons who are not only just holding the stock, but also those who are engaged in manufacturing, processing and buying or selling of essential commodities come under the purview of this amendment to section 3. Our experience all along has been under the guise of hoarding, the persons who hold the stock and producing were escaping; the middlemen were also escaping. In our country it is not the persons who are producing the essential commodities that are to be blamed. It is the middlemen who are handling these commodities that are to be blamed. The peasents who are owning 3 acres of land are not to be blamed. The mechanism of operation in our country, as we know, in regard to essential commodities like the foodgrains and other edible oils, is garnered by the merchants, particularly who had enough black money with them and it is they who would purchase the whole thing at a very low rate just at the time of harvest and then store it in their godowns and sell it at a higher rate to the people during the time of scarcity, and even otherwise in order to make profits.

This is the mechanism of the merchants, traders, unscrupulous elements and the middlemen. I should say in this connection that the Government is to blame because the Government was giving quite a lot of advance through the financing institution earlier. Now of course it has changed a little. What was actually happening was that the people who were producing were not getting their due share as also the people who were consuming in the cities and the villages. That was how the middlemen, the persons who were engaged in processing and manufacturing or who were indulging in production or in the business of buying and selling were escaping the clutches of law and have become multi-millionaires at the cost of the common man so, the amendment to section 3 is a welcome feature. We would like to see such people hauled up. But unfortunately the experience has been not so good; it has been rather dismal in the sense that the Government is just tinkering with the problem. In the initial stages the Government came with a heavy hand on some of the smugglers and hoarders, arrested them and put them behind bars. Some of them were punished under the D.I.R. and MISA. however, Even today the Government has not touched the fringe of the problem. Because of that, recently the economists of our country have stated the despite the action taken under the Essential Commodities Act and various other enactments the smuggling and hoarding activities which were held under check to some extent to are again trying to raise their heads. Today, in Madras and Bombay smuggled goods are coming to the market. Openly, Hoarding has started again and the prices again show a tendency to rise and not to come down Probably you, Sir, are aware that the wholesale price index has gone up by two points and if this trend continues, prices will again go up. The economists have said that this trend, though it may look very small, it is a very dangerous trend. Under this clause I would like to know what action Government has sought to take against such tendencies which are growing again. We also know what action has been taken in Karnataka. My information is that, as far as Karnataka is concerned, not much of action has been taken. In fact, I have heard very disparaging reports about some influential persons whose commodities were confiscated by a good Collector or D.C. and proceedings were about to be taken against them, but in the meanwhile phone calls came from the Secretariat and they were released. The stocks were also released. Somebody got a good name but unfortunately the good D.C. did not get a good name This happened in Karnataka and I can tell the Hon'ble Minister about it privately. Perhaps she may be aware of it though she may not be a party to it Some persons more powerful than the Minister herself must be a party to it; we do not know who these

persons are. I must ask the Hon'ble Minister, under such circumstance what action she has taken ? If such instance have come to light, is it not her bounden duty as a Minister to take action against those hoarders and blackmarketeers, who ever they may be, and however powerful they may be. If the Government does not do that, as the economists have said, all these enactments will come to nought. I would like to warn in this connection that there is a dangerous trend and this law will not bring about the desire change unless it is implemented properly by the Government and unless people are involved in its implementation. If amendment to section 3 is to be implemented people's involvement is essential. The Hon'ble Member Sri Byregowda was quite correct when he said that the Government is very chary about people's involement; Government is afraid of it People are prepared to come forward and say who are hoarders and blackmarketeers and want Government to take immediate action I do not know why the Government should fight shy, about this. I am sorry that the Government is fighting shy. But the very same Government in the name of law and order and in the name of discipline puts down those people who want to take peaceful, nonviolent and constitutional action against the hoarders blackmarketeers. The Twenty Point Programme envisages the involvement of the people. I should say in this connection that Government must involve the people both in the rural areas as well as in the urban areas. In the urban areas the Government must take the co-operation of those forces and parties and those institutions and organisations which agree with the Government in tracing out the blackmarketeers and hoarders and bringing out the black money and hoarded stocks. The Government must also take action against anti social elements and against the rich peastants in the rural side and for this they must take the help of the kishan Sabha and agricultural workers For this purpose they must gear up their party, Apart from that, our party is there and we are prepared to co-operate. They may take the help of like minded parties, which are committed see that blackmarketing, hoarding and other anti-social activities are put an end to In that light I would say that amendment to section 3 is weak and it is not really a section which goes whole hog into the entire scheme of taking over or confiscating those stocks which are supposed to be hoarded by some people.

In this connection, I would also like to bring to the notice of the House the Explantion under clause 3,

It speaks of those commodities that are actually produced. But what happens to other Sections of the persons who are mentioned in clause (a) ? Should they also not come under the purview of clause 3

(c) ? I am afraid that some explanation is necessary because it is a little confusing It looks as if it applies only to persons who produce and not those who process or manufacture goods If it is not amended the whole clause will become ineffective and those who are powerful, the business community engaged in the processing of these essential commodities will escape.

The last point that I would like to emphasise is in regard to confiscation of essential commodities. I think this clause requires serious reconsideration by the Government because this kind of penalty is of an abnoxiuos type Today the prices of all foodgrains have almost collapse and peasants are groaning On the one side the prices of agricultural commodities have come down while on the other industrial manufactured goods have not come down at all. In certain cases they have even been rising. This only shows that in our county probably the manufacures, monopolists, have been gaining more and more at the expense of ordinary agriculturists. That I think is a very important factar to be taken into consideration by the Hon'ble Minister, You have to reconsider this clause of penalty because it will work as a hardship to our peasants and that too when prices have slumped. I am one to say that levy has to be there but penalty clause cannot be so harsh especially in the circumstances when prices or some agricultural commodities have slumped. You fix up a proper price, purchase them and sell them to the people at a resonable and fair price. Unfortunately the Government has not accepted this policy of taking over wholesale trade. You can purchase the commodites from the producers and sell them at reasonable prices. If that is done you will see that the producers will get benefit and at the same time the consumers also will be benefitted and you can eliminate the middlemen. That is the way to bringabout socialism and not the way in which it is working now merly, enriching the middlemen at the cost of both producers and consumers.

With these words I close my speech.

† ಶ್ರೀಮತಿ ಇ. ಇ. ವಾಜ್.—ಸನ್ಮಾನ್ಯ ಉಪಾಧ್ಯಕ್ಷರೇ, ನಾವು ಮುಂಡಿಸಿರತಕ್ಕ ಅಗತ್ಯ ವಸ್ತುಗಳ ಕಾಯಿದೆ ತಿದ್ದುಪಡಿ ಮೇಲೆ ಮಾನ್ಯ ಸದಸ್ಯರನೇಕರು ದೀರ್ಘವಾಗಿ ವ್ಯಾಖ್ಯಾನ ಮಾಡಿದ್ದಾರೆ. ನಾನು ಆಹಾರದ ಡಿಮ್ಯಾಂಡನ್ನು ಮಂಡಿಸಿದಾಗ ಇಷ್ಟೊಂದು ವ್ಯಾಖ್ಯಾನವನ್ನು ನಮ್ಮ ಮಾನ್ಯ ಸದಸ್ಯರು ಮಾಡಿರಲಿಲ್ಲ. ನಾನು ಇದನ್ನು ಪೂರ್ತಿ ಬೆಂಬಲ ನೀಡಿ ಪಾಸ್ ಮಾಡಿಕೊಡುತ್ತಿದ್ದರು ಎಂದು ತಿಳಿದುಕೊಂಡಿದ್ದೆ.

ಶ್ರೀ ಎಂ. ಎಸ್. ಕೃಷ್ಣನ್.—ಡಿಮ್ಯಾಂಡ್ ಮೇಲೆ ಮಾತನಾಡುವಾಗ ಟೈಂಸಿಕ್ಕಲಿಲ್ಲ. ಟೈಂ ಕೊಟ್ಟಿದ್ದರೆ ಇದಕ್ಕಿಂತ ಹತ್ತರಷ್ಟು ಮಾತನಾಡುತ್ತಿದ್ದೆವು.

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರುಗಳು ಇದರ ಸದುದ್ದೇಶವನ್ನು ತಿಳಿದುಕೊಂಡಿದ್ದರೆ, ಇಷ್ಟೊಂದು ಇದರ ಮೇಲೆ ಮಾತನಾಡುತ್ತಿರಲಿಲ್ಲ. ಮಾತನಾಡಿದಂಥ ಸದಸ್ಯರುಗಳಲ್ಲಿ ಕೆಲವರು ಕ್ರಿಯಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನೂ ಕೆಲವರು ನಾನು ಹಿಂದೆ ಉತ್ತರ ಕೊಟ್ಟಿದ್ದರಲ್ಲಿ ತಪ್ಪುಗಳನ್ನು ಹುಡುಕಿ ಅದನ್ನೆಲ್ಲಾ ತೆಗೆದುಕೊಂಡು ಅದರ ಮೇಲೂ ಭಾಷಣ ಮಾಡಿದ್ದಾರೆ. ಅವರು ಟೀಕೆ ಮಾಡ

ಬೇಕು ಎನ್ನುವ ಉದ್ದೇಶದಿಂದಲ್ಲದೆ ಒಳ್ಳೆಯ ಉದ್ದೇಶದಿಂದ ಇದನ್ನೆಲ್ಲಾ ಹೇಳಿದ್ದಾರೆ. ಎಂದು ನಾನು ಭಾವಿಸುತ್ತೇನೆ. ಮೊದಲನೆಯದಾಗಿ ಮಾನ್ಯ ಸದಸ್ಯರುಗಳು, ಸರ್ಕಾರದವರು ಆಹಾರದ ಬಗ್ಗೆ ಏನೂ ಮಾಡಿಲ್ಲ ಚೆನ್ನಾಗಿ ವಿತರಣೆಯ ವ್ಯವಸ್ಥೆಯನ್ನು ಮಾಡಿಲ್ಲ, ಒಳ್ಳೆಯ ಪದಾರ್ಥಗಳನ್ನು ಒದಗಿಸುತ್ತಿಲ್ಲ ಎಂದು ಹೇಳಿದ್ದಾರೆ. ನನಗನ್ನಿಸುತ್ತದೆ, ಮಾನ್ಯ ಸದಸ್ಯರುಗಳು ಈ ವರ್ಷ ಸಮಾಧಾನವಾಗದಿದ್ದರೆ, ಇನ್ನು ಯಾವ ವರ್ಷವೂ ಸಮಾಧಾನವಾಗಿರಲಿಕ್ಕಿಲ್ಲ ಎಂದು. ಈ ವರ್ಷ ನಾವು ಬೇಕಾದಷ್ಟು ಆಹಾರಧಾನ್ಯಗಳನ್ನು ಸಂಗ್ರಹಣೆ ಮಾಡಿದ್ದೇವೆ. ಮೂರೂವರೆ ಲಕ್ಷ ಟನ್ ಭತ್ತವನ್ನು ದಾಸ್ತಾನು ಮಾಡಿದ್ದೇವೆ. ಬೇಕಾದಷ್ಟು ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆದು ಸರಿಯಾದ ರೀತಿಯಲ್ಲಿ ಪದಾರ್ಥಗಳನ್ನು ವಿತರಣೆ ಆಗುವಂತೆ ಏರ್ಪಾಡು ಮಾಡಿದ್ದೇವೆ. ಅಂಗಡಿಗಳವರು ಸರಿಯಾದ ರೀತಿಯಲ್ಲಿ ವಸ್ತುಗಳನ್ನು ವಿತರಣೆ ಮಾಡುತ್ತಿಲ್ಲ ಎನ್ನುವುದು ಗೊತ್ತಾಗಿ ನಾವು ಕರ್ನಾಟಕ ಫುಡ್ ಕಾರ್ಪೊರೇಷನ್‌ನವರು ಕೇಂದ್ರಗಳನ್ನು ಸ್ಥಾಪಿಸಿ, ಅದರ ಮುಖಾಂತರ ಸರಿಯಾದ ರೀತಿಯಲ್ಲಿ ಕೊಡುವ ಏರ್ಪಾಡು ಮಾಡಿದ್ದೇವೆ. ಇತ್ತೀಚೆಗೆ ನಾವು ವೈಯಕ್ತಿಕ ವಾಗಿ ಯಾರಿಗೂ ಫೇರ್‌ಪ್ರೈಸ್ ಅಂಗಡಿಗಳನ್ನು ತೆರೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ಸಹಕಾರ ಸಂಘಗಳ ಮೂಲಕ ಮಾತ್ರ ಕೊಡುತ್ತೇವೆ. ಸಹಕಾರ ಸಂಘಗಳಿಲ್ಲದ ಕಡೆಗಳಲ್ಲಿ ಕರ್ನಾಟಕ ಫುಡ್ ಕಾರ್ಪೊರೇಷನ್ ಮುಖೇನ ಕೇಂದ್ರಗಳನ್ನು ತೆರೆದು ಅದರ ಮುಖಾಂತರ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೇವೆ. ಕಳ್ಳಸಾಗಾಣಿಕೆ ಮಾಡುವವರ ಮೇಲೆ, ಕಲಬೆರಕೆ ಮಾಡುವವರ ಮೇಲೆ ಕೇಸ್‌ಗಳನ್ನು ಹಾಕಲಿಲ್ಲ ಎಂದು ಟೀಕೆ ಮಾಡಿದರು. ಅದರ ಬಗ್ಗೆ ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ವಿವರಗಳನ್ನು ಪೂರ್ತಿ ಕೊಡುವುದಕ್ಕೆ ಹೆಚ್ಚಿಗೆ ಸಮಯ ಬೇಕಾಗುತ್ತದೆ. ಸ್ವಲ್ಪಮಟ್ಟಿಗೆ ತಿಳುವಳಿಕೆ ಕೊಡುತ್ತೇನೆ. ೧೯೭೫ರಲ್ಲಿ ೭,೮೭೨ ಮೊಕದ್ದಮೆಗಳನ್ನು ದಾಖಲು ಮಾಡಿದ್ದು ೧ ಕೋಟಿ ೪೭ ಸಾವಿರದ ೭೨೪ ರೂಪಾಯಿ ಬೆಲೆ ಬಾಳುವಂತಹ ಪದಾರ್ಥಗಳನ್ನು ಸೀಸ್ ಮಾಡಿದ್ದೇವೆ. ೧೯೭೬ರಲ್ಲಿ ಒಂದೇ ತಿಂಗಳಲ್ಲಿ ೧೩೪ ಕೇಸ್‌ಗಳನ್ನು ಹಾಕಿ ೨,೧೯,೨೬೦ ರೂಪಾಯಿ ಬೆಲೆ ಬಾಳುವಂತಹ ಪದಾರ್ಥಗಳನ್ನು ನಾವು ಸೀಸ್ ಮಾಡಿದ್ದೇವೆ. ಫೆಬ್ರವರಿಯಲ್ಲಿ ೧೬೨ ಮೊಕದ್ದಮೆಗಳನ್ನು ದಾಖಲು ಮಾಡಿ ೧,೮೨,೪೬೧ ರೂಪಾಯಿ ಬೆಲೆ ಬಾಳುವಂತಹ ಪದಾರ್ಥಗಳನ್ನು ಸೀಸ್ ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದರಲ್ಲಿ ಎಷ್ಟು ವಾಪಸ್ ಕೊಟ್ಟಿದ್ದೀರಿ ?

ಶ್ರೀಮತಿ ಇ. ಇ. ವಾಜ್.—ಕೆಲವು ಜನರನ್ನು ನಾವು ಒಳಕ್ಕೆ ಹಾಕಿದ್ದೇವೆ. ಅವರ ಮೇಲೆ ಉಗ್ರ ಕ್ರಮ ತೆಗೆದುಕೊಂಡಿದ್ದೇವೆ. ಅನೇಕ ನ್ಯಾಯ ಬೆಲೆ ಅಂಗಡಿಗಳ ಲೈಸೆನ್ಸ್‌ಗಳನ್ನು ರದ್ದು ಮಾಡಿ ಕ್ರಮ ತೆಗೆದುಕೊಂಡಿದ್ದೇವೆ. ಜನರಿಗೆ ಬೇಕಾಗುವಂತಹ ಆಹಾರ ಸಾಮಗ್ರಿಗಳ ಮೇಲೆ ಮತ್ತು ಇತರ ಅನೇಕ ಪದಾರ್ಥಗಳ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ನಾನು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಹೇಳಬಯಸುವುದೇನೆಂದರೆ ಎಸ್ಸೆನ್‌ಷಿಯಲ್ ಕಮೊಡಿಟೀಸ್ ಯಾವಯಾವುದು ಎಂದು ಲಿಸ್ಟ್ ಮಾಡಿದ್ದೇವೆ. ಅದರಲ್ಲಿ ೬೧ ಐಟಂಗಳಿವೆ ಬ್ಯಾಟರಿಯಿಂದ ಹಿಡಿದು, ಫರ್ಟಿಲೈಸರ್‌ನಿಂದ ಹಿಡಿದು ಎಲ್ಲಾ ಸೇರಿ ೬೧ ಐಟಂಗಳಿವೆ. ಸಪ್ಲೈ ಸರಿಯಾಗಿ ಇಲ್ಲದ ಸಮಯದಲ್ಲಿ ಬೆಲೆಗಳು ಏರುತ್ತವೆ. ಆಗ ಬೆಲೆ ಹತೋಟಿಯಲ್ಲಿಟ್ಟು ನಿಯಂತ್ರಣದ ಬೆಲೆಯಲ್ಲಿ ಪದಾರ್ಥಗಳನ್ನು ಕೊಡಲು ಏರ್ಪಾಟು ಮಾಡಿದೆ. ಬೇಬಿ ಫುಡ್ಸ್, ಹಾರ್ಲಿಕ್ಸ್, ಅಮೂಲ್, ಇವೆಲ್ಲಾ ಎಸೆನ್‌ಷಿಯಲ್ ಕಮಾಡಿಟೀಸ್ ಲಿಸ್ಟನಲ್ಲಿದ್ದು ಅದನ್ನೆಲ್ಲಾ ಕಂಟ್ರೋಲ್ ರೇಟಿಗೆ ಮಾರಬೇಕು ಎಂದು ಮಾಡಿದ್ದೆವು. ಈಗ ಇದು ಯಥೇಚ್ಛವಾಗಿ ಸಿಗುವುದರಿಂದ ನಿಯಂತ್ರಣ ಮಾಡುವ ಅವಶ್ಯಕತೆ ಇಲ್ಲ ಎಂದಾದಮೇಲೆ ಲಿಸ್ಟ್‌ನಿಂದ ತೆಗೆದಿದ್ದೇವೆ. ಮತ್ತೆ ಅವುಗಳನ್ನು ಎಸೆನ್‌ಷಿಯಲ್ ಕಮಾಡಿಟೀಸ್ ಲಿಸ್ಟಿಗೆ ಸೇರಿಸಬೇಕಾದ ಅವಶ್ಯಕತೆ ಕಂಡುಬಂದಾಗ ಮತ್ತೆ ಸೇರಿಸುತ್ತೇವೆ ಎಂದು ಮಾನ್ಯ ಮಿತ್ರರಿಗೆ ಹೇಳಬಯಸುತ್ತೇನೆ. ಆಮೇಲೆ ಲೆವಿ ದರವನ್ನು ಕೇಂದ್ರ ಸರ್ಕಾರದವರು ಅಲ್ಲಿ ಕುಳಿತುಕೊಂಡು ಫಿಕ್ಸ್ ಮಾಡುತ್ತಾರೆ ಎಂದು ಹೇಳಿದರು. ಮಾನ್ಯ ಸದಸ್ಯರಿಗೆಲ್ಲರಿಗೂ ಗೊತ್ತು ಕೇಂದ್ರದಲ್ಲಿದ್ದವರು ಕೂಡ ಬೇರೆ ಕಡೆಯಿಂದ ಹುಟ್ಟಿಬಂದವರಲ್ಲ; ನಾಲ್ಕು ಗೋಡೆಗಳನ್ನು ಬಿಟ್ಟು ಹುಟ್ಟಿ ಬದುಕಲಿಲ್ಲ ಎಂಬುದು. ವ್ಯವಹಾರಗಳು ಹೇಗೆ ನಡೆಯುತ್ತದೆ, ಎಷ್ಟು ಖರ್ಚಾಗುತ್ತದೆ ಎಂಬುದನ್ನು ಪೂರ್ತಿ ಅವರೂ ತಿಳಿದುಕೊಂಡಿದ್ದಾರೆ. ಅವರಲ್ಲಿ ಮುಕ್ಕಾಲು ಭಾಗ ಜನರು ರೈತವರ್ಗಕ್ಕೆ ಸೇರಿದವರು ಇದ್ದಾರೆ ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಅನುಭವವಿರುವವರು ಇದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಲೆವಿ ರೇಟ್ ಫಿಕ್ಸ್ ಮಾಡುವ ಸಮಿತಿ ಸದಸ್ಯರು ಯಾರು ಎಂದು ಹೇಳಿ.

ಶ್ರೀಮತಿ ಇ. ಇ. ವಾಜ್ —ಕೇಂದ್ರ ಸರ್ಕಾರದವರು ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್ ಎಂದು ಮಾಡಿದ್ದಾರೆ. ಅವರು ದರವನ್ನು ನಿಗದಿ ಮಾಡುತ್ತಾರೆ. ಅವರು ಎಲ್ಲಾ ರಾಜ್ಯಗಳಿಂದ ಪೂರ್ತಿ ಮಾಹಿತಿ ತರಿಸಿ ನಿಗದಿ ಮಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ —ಅವರು ಕಾಗದದ ಮೇಲೆ ಮಾಡಿದ್ದಾರೆ.

ಶ್ರೀಮತಿ ಇ. ಇ. ವಾಜ್.—ಎಲ್ಲಾ ರಾಜ್ಯಗಳಿಂದ ಸ್ಟಾಟಿಸ್ಟಿಕ್ಸ್ ತರಿಸಿ ನೋಡಿ ಯಾವರೀತಿ ದರ ನಿಗದಿ ಮಾಡಬೇಕು ಎಂಬುದನ್ನು ನೋಡಿ ನಿಗದಿ ಮಾಡುತ್ತಾರೆ ಅವರಿಗೆ ರೈತರ ಮೇಲೆ ದ್ವೇಷ ಇಲ್ಲ. ಎಲ್ಲ ವರ್ಗದವರ ಮೇಲೂ ಅನುಕಂಪ ಇದೆ ರೈತರಿಗೆ ನಷ್ಟ ಆಗಬಾರದು ಎಂಬ ದೃಷ್ಟಿಯಿಂದ ಎಷ್ಟು ಖರ್ಚಾಗುತ್ತದೆ ಎಂದು ನೋಡಿ ದರ ಫಿಕ್ಸ್ ಮಾಡುತ್ತಾರೆ. ಒಂದು ಕ್ವಿಂಟಾಲ್ ಭತ್ತ ಬೆಳೆಯುವುದಕ್ಕೆ ೬೪ ರೂಪಾಯಿ ಆಗುತ್ತದೆ ಎಂದು ಕಂಡುಹಿಡಿದು ಅದಕ್ಕೆ ೧೦ ರೂಪಾಯಿ ಸೇರಿಸಿ ಒಟ್ಟು ೧ ಕ್ವಿಂಟಾಲ್ ಭತ್ತಕ್ಕೆ ೭೪ ರೂಪಾಯಿ ಎಂದು ಕೇಂದ್ರಸರ್ಕಾರದವರು ನಿಗದಿ ಮಾಡಿದ್ದಾರೆ. ಕರ್ನಾಟಕ ಸರ್ಕಾರ ರೈತರಿಗೆ ಇನ್ನೂ ಹೆಚ್ಚಿನ ಆರ್ಥಿಕ ಬೆಂಬಲ ನೀಡುವುದಕ್ಕಾಗಿ ಅದಕ್ಕೆ ಇನ್ನೂ ೬ ರೂಪಾಯಿ ಸೇರಿಸಿ ೮೦ ರೂಪಾಯಿ ಮಾಡಿದ್ದೇವೆ

ಶ್ರೀ ಕೋಣಂದೂರು ಲಿಂಗಪ್ಪ.—೬೪ ರೂಪಾಯಿ ಬೀಳುತ್ತದೆ ಎಂದು ಹೇಳಿರುವವರು ಯಾವ ತರಹದ ಎಕ್ಸ್‌ಪರ್ಟ್ಸ್ ಎಂದು ಹೇಳಬೇಕು.

ಶ್ರೀಮತಿ ಇ. ಇ. ವಾಜ್.— ಹೀಗೆ ಅವರು ನಿಗದಿ ಮಾಡಿದಂಥ ೭೪ ರೂಪಾಯಿಗೆ ಇನ್ನು ೬ ರೂಪಾಯಿ ಸೇರಿಸಿ ೮ ರೂಪಾಯಿ ನಾವು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಟಿ. ಆರ್ ಶಾಮಣ್ಣನವರು ಈ ವರ್ಷ ಆಹಾರ ಸಂಗ್ರಹಣೆ ಬೇಕಾದಷ್ಟು ಆಗಿದೆ, ಆದರೂ ಅಂತರಜಿಲ್ಲಾ ನಿರ್ಬಂಧ ಯಾತಕ್ಕೆ ಹಾಕಿದ್ದೀರಿ ಎಂದು ಹೇಳಿದರು. ಈ ವರ್ಷ ಬೇಕಾದಷ್ಟು ಇದೆ ಎಂದು ನಾವು ನಿರ್ಬಂಧ ತೆಗೆದು ಆಮೇಲೆ ಪುನಃ ಹಾಕುವುದಕ್ಕೆ ಕಷ್ಟವಾಗುತ್ತದೆ ಒಂದು ಸಲ ನಿರ್ಬಂಧವಿಲ್ಲದೆ ಅಭ್ಯಾಸವಾಗಿಬಿಟ್ಟರೆ ಮತ್ತೆ ಹತೋಟಿ ಇಡುವುದಕ್ಕೆ ಕಷ್ಟವಾಗುತ್ತದೆ ಆದರೂ ರೈತರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುಲಭವಾಗಿ ಬೇರೆ ಜಿಲ್ಲೆಗೆ ತೆಗೆದುಕೊಂಡುಹೋಗುವುದಕ್ಕೆ ಅವಕಾಶ ಮಾಡಿದ್ದೇವೆ ಸರ್ಕಾರದವರು ಪರವಾನಗಿ ಕೊಡುವುದನ್ನು ಸರಳವಾದ ರೀತಿಯಲ್ಲಿ ಮಾಡಿ ಒಂದು ಡಿಸ್ಟ್ರಿಕ್ಟ್‌ನಿಂದ ಮತ್ತೊಂದು ಡಿಸ್ಟ್ರಿಕ್ಟ್‌ಗೆ ತೆಗೆದುಕೊಂಡುಹೋಗುವುದಕ್ಕೆ ಅವಕಾಶ ಮಾಡಿದ್ದೇವೆ. ಈಗ ತೆಗೆದುಕೊಂಡುಹೋಗುವುದು ಬೇಡ ಪೂರ್ತಿಯಾಗಿ ಸರ್ಕಾರವೇ ತೆಗೆದುಕೊಳ್ಳಲಿ ಎಂದು ಹೇಳುವ ಪ್ರಸಂಗಕ್ಕೆ ನಾವು ಬಂದಿದ್ದೇವೆ. ಸರ್ಕಾರಕ್ಕೆ ಯಾರಾದರೂ ಕೊಡುವುದಕ್ಕೆ ತಯಾರಿದ್ದರೆ ಅವರಿಗೆ ಸಪೋರ್ಟ್ ಪ್ರೈಸ್ ಕೊಟ್ಟು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ ಸಪೋರ್ಟ್ ಪ್ರೈಸಿಗಿಂತ ಕಡಿಮೆ ಕೊಡುವುದಕ್ಕೆ ಹೋಗುವುದಿಲ್ಲ ಎಂದು ಸ್ಪಷ್ಟಪಡಿಸಬಯಸುತ್ತೇನೆ. ರಾಗಿ ಮತ್ತು ಜೋಳಕ್ಕೂ ಕೂಡ ಸಪೋರ್ಟ್ ಪ್ರೈಸ್ ಕೊಟ್ಟು ಕೊಂಡುಕೊಳ್ಳುವುದಕೆ ತಯಾರಿದ್ದೇವೆ ಕೊಡುವಾಗ ಉತ್ತಮವಾದ ಪದಾರ್ಥಗಳನ್ನು ಕೊಡಿ ಎಂದು ಶಾಮಣ್ಣನವರು ಸಲಹೆ ಮಾಡಿದರು ನಮ್ಮ ಉದ್ದೇಶವು ಕೂಡ ಅದೇ ಆಗಿದೆ ಅದಕಾಗಿ ನಾವು ಪ್ಯಾಡಿ ಸ್ಪೆಷಲಿಸ್ಟ್ಸ್ ಮತ್ತು ಕ್ವಾಲಿಟಿ ಇನ್‌ಸ್ಪೆಕ್ಟರ್ಸ್ ಎಂದು ಜಿಲ್ಲಾವಾರು ನೇಮಿಸಿದ್ದೇವೆ. ಅವರು ನೋಡಿ ಉತ್ತಮವಾದ ಭತ್ತವನ್ನು ಕೊಂಡುಕೊಳ್ಳಬೇಕಾಗಿದೆ ನಾವು ಜನರಿಗೆ ಒಳ್ಳೆಯ ಪದಾರ್ಥ ಕೊಡಬೇಕಾಗಿರುವುದರಿಂದ ನಾವು ತೆಗೆದುಕೊಳ್ಳುವಾಗ ಟೆಸ್ಟ್ ಮಾಡಿ ಯೋಗ್ಯವಾದುದನ್ನೇ ತೆಗೆದುಕೊಳ್ಳುತ್ತಿದ್ದೇವೆ ಮಾನ್ಯ ಸದಸ್ಯರು ಶಿಕಾರಿಪುರ ಮುಂತಾದ ಕಡೆ ಲೆವಿ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಭತ್ತ ಏನಾದರೂ ಸರಿಯಾಗಿಲ್ಲದೆ ವಾಪಸ್ ಕಳಿಸಿರಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನಿನ್ನೆಯವರೆಗೆ ಭತ್ತ ಯೋಗ್ಯವಾಗಿದ್ದು, ತೆಗೆದುಕೊಳ್ಳುವುದಕ್ಕೆ ಅರ್ಹವಾಗಿದ್ದು ಇವತ್ತು ಕೊಳ್ಳುವಾಗ ಅದರ ಅರ್ಹತೆ ಹೊರಟುಹೋಯಿತೆ ? ಒಂದೇ ಕಡೆ ಬೆಳೆದಂಥ ಭತ್ತ ನಿನ್ನೆ ಒಂದು ಕ್ವಾಲಿಟಿ, ಇವತ್ತು ಒಂದು ಕ್ವಾಲಿಟಿ ಹೇಗಿರುತ್ತದೆ ?

ಶ್ರೀಮತಿ ಇ. ಇ. ವಾಜ್.—ಕೆಲವು ಸಾರಿ ಒಳ್ಳೆ ಭತ್ತ ಹಾಕಿದಮೇಲೆ ಜೊಳ್ಳು ಪೊಳ್ಳು ಇದ್ದರೆ ತರುತ್ತಾರೆ. ಅದಕ್ಕಾಗಿ ಅದನ್ನು ನೋಡಿಕೊಂಡುಕೊಳ್ಳುತ್ತಾರೆ ತಾವೇ ಹೇಳಿದರು ಒಳ್ಳೆಯ ಆಹಾರಧಾನ್ಯ ಕೊಡಿ ಎಂದು ಆದ್ದರಿಂದ ಕೆಲವು ಸಾರಿ ಉಗ್ರಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಳ್ಳೆಯದು ಎಂದು ಹೇಳಿದರೆ ಫಸ್ಟ್ ಕ್ವಾಲಿಟಿ ಮಾತ್ರವೆ ? ಸೆಕೆಂಡ್ ಮತ್ತು ಥರ್ಡ್ ಕ್ವಾಲಿಟಿ ತೆಗೆದುಕೊಳ್ಳುವುದಿಲ್ಲವೆಂತಲೆ ? ಒಂದು ಸಾರಿ ಬಂಗಾರ ಸಣ್ಣ ಮಾತ್ರ ತೆಗೆದುಕೊಳ್ಳಬೇಕೆಂದು ಆದೇಶ ಬಂದಿತ್ತು.

ಶ್ರೀಮತಿ ಇ. ಇ. ವಾಜ್.—ಮಾನ್ಯ ಅಧ್ಯಕ್ಷರೆ, ಇನ್ನು ಲೆವಿ ಸರಿಯಾಗಿ ಕೊಡದಿದ್ದರೆ ಅವರ ಎರಡರಷ್ಟು ಪೆನಾಲ್ಟಿ ಕೊಡಬೇಕಾಗುತ್ತದೆ ಎಂದು ಮಾಡಿರುವುದಕ್ಕೆ ಕೆಲವರು ವಿರೋಧ ವ್ಯಕ್ತ ಮಾಡಿದರು. ಲೆವಿ ಕೊಡದಿದ್ದರೆ ಏನಾದರೂ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಇಲ್ಲದಿದ್ದರೆ ಲೆವಿ ಕಲೆಕ್ಟ್ ಮಾಡುವುದು ಕಷ್ಟವಾಗುತ್ತದೆ. ಇದಕ್ಕೆ ಮೊದಲು ಇನ್ನೊಂದು ರೀತಿಯ ಕ್ರಮ ತೆಗೆದುಕೊಳ್ಳುತ್ತಿದ್ದೆವು. ಆದರಿಂದ ರೈತರನ್ನು ಪಾರುಮಾಡಬೇಕೆಂದು ಕೆಲವರು ಟೀಕೆ ಮಾಡಿದರು. ಲೆವಿ ಕೊಡದೇ ಇದ್ದರೆ ಡೆಪ್ಯುಟಿ ಕಮಿಷನರ್ ಕ್ರಮ ತೆಗೆದುಕೊಳ್ಳುತ್ತಿದ್ದರು. ಈಗ ಅಸಿಸ್ಟೆಂಟ್ ಕಮಿಷನರ್ ಕ್ರಮ ತೆಗೆದುಕೊಳ್ಳಬಹುದು. ಇಲ್ಲದೇಹೋದರೆ ಸ್ಪೆಷಲ್ ಡೆಪ್ಯುಟಿ ಕಮಿಷನರ್ ಕ್ರಮ ತೆಗೆದುಕೊಳ್ಳಬಹುದು. ಲೆವಿ ಕೊಡದೇ ಇದ್ದರೆ ಎರಡು ಪ್ರಮಾಣದಷ್ಟು ಬೆಲೆಯನ್ನು ರೈತರಿಂದ ವಸೂಲು ಮಾಡಿ ಅಧಿಕಾರಿಗಳು ಅಲ್ಲಿಯೇ ತೀರ್ಮಾನ ಮಾಡಬಹುದೆಂದು ಒಳ್ಳೆಯ ಉದ್ದೇಶದಿಂದ ಮಾಡಿದ್ದೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಚಿಕ್ಕಮಗಳೂರು ಜಿಲ್ಲೆಯ ರೈತರ ಎದುರಿಗೆ ಬಂದು ಈ ಮಾತು ಹೇಳುತ್ತೀರಾ ?

5–00 P. M.

ಶ್ರೀಮತಿ ಇ. ಇ. ವಾಜ್.—ಹೇಳಲೇ ಬೇಕಾಗುತ್ತದೆ, ರೈತರನ್ನು ಕಷ್ಟದಿಂದ ಪಾರು ಮಾಡುವ ಉದ್ದೇಶದಿಂದಲೇ ಇಂಥ ಕ್ರಮ ತೆಗೆದುಕೊಂಡಿದ್ದೇವೆಂದು ಮಾನ್ಯ ಲಿಂಗಪ್ಪನವರಿಗೆ ಹೇಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಬಹಳ ಜನರ ರಕ್ಷಣೆ ಮಾಡುವುದಕೋಸ್ಕರವೇ ಜೈಲಿಗೆ ಹಾಕಿದ್ದೀರಿ.

ಶ್ರೀಮತಿ ಇ. ಇ. ವಾಜ್.—ಆಹಾರಧಾನ್ಯಗಳನ್ನು ಸೀಸ್ ಮಾಡುವ ವಿಚಾರ ಹೇಳಿದರು ? ಅಲ್ಲದೆ ಉಗ್ರಾಣಗಳಲ್ಲಿ ಆಹಾರಧಾನ್ಯ ಕಾಲಕ್ಕೆ ಸರಿಯಾಗಿ ವಿತರಣೆಯಾಗದೆ ಕೊಳೆಯುತ್ತಿದೆ ಎಂದು ಹಲವು ಮಾನ್ಯ ಸದಸ್ಯರು ಹೇಳಿದರು. ಈ ಒಂದು ತಿದ್ದುಪಡಿಯ ಕಾರಣವಾದರೂ ಕೂಡ ಸೀಸ್ ಮಾಡಿದ ಆಹಾರಧಾನ್ಯವನ್ನು ತಕ್ಷಣ ಕರ್ನಾಟಕ ಫುಡ್ ಕಾರ್ಪೊರೇಷನ್ ಮುಖೇನ ಸಬ್ ಎಜನ್ಸಿಗೆ ಕೊಟ್ಟು ಅಲ್ಲಿಂದ ವಿತರಣೆ ಮಾಡಿ; ಬಂದಂತ ಹಣವನ್ನು ಡಿಪಾಸಿಟ್ ಮಾಡಿ ಸಂಬಂಧಪಟ್ಟ ಕೇಸ್ ಇತ್ಯರ್ಥ ಮಾಡುವವರೆವಿಗೂ ಹಾಗೆಯೇ ಇಟ್ಟು ನಂತರ ಹಣವನ್ನು ಸಂಬಂಧಪಟ್ಟವರಿಗೆ ವಿತರಣೆ ಮಾಡುವುದು ಸರಿಯಾಗಿರುತ್ತದೆಂದು ಅದನ್ನು ಕೂಡ ಏರ್ಪಾಡು ಮಾಡಿದ್ದೇವೆ. ಇನ್ನು ಮುಂದೆ ಯಾವುದೇ ರೀತಿ ಆಹಾರಧಾನ್ಯಗಳನ್ನು ಸೀಸ್ ಮಾಡಿದರೂ ಕೂಡಲೇ ವಿತರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಆಹಾರಧಾನ್ಯವನ್ನು ಹಾಳಾಗುವುದಕ್ಕೆ ಬಿಡುವುದಿಲ್ಲ ಎಂದು ಹೇಳುತ್ತೇನೆ. ಚಂದ್ರಶೇಖರ್‌ರವರು ಮಾತನಾಡುತ್ತಾ ಒಂದು ಉಗ್ರಾಣದಲ್ಲಿ ಬತ್ತಕ್ಕೆ ಬದಲು ಬಟಾಣಿ ಇತ್ತು ಎಂದು ಹೇಳಿದರೂ, ಈ ಪ್ರಶ್ನೆಗೆ ಇದೇ ಸದನದಲ್ಲಿ ವಿವರವಾಗಿ ಉತ್ತರ ಕೊಟ್ಟಿದ್ದೇನೆ ಅದರ ಮೇಲೂ ತಪ್ಪುಗಳು ಇದ್ದರೆ, ಅದನ್ನು ಕೂಡ ಪರಿಶೀಲನೆ ಮಾಡುವುದಕ್ಕೆ ತಯಾರಾದ್ದೇನೆ. ಬೈರೇಗೌಡರು ಬಾಜ್ರಾ ವಿಷಯ ಹೇಳಿದರು. ಇದರ ಬಗ್ಗೆ ಒಂದು ದೊಡ್ಡ ಪುಸ್ತಕವನ್ನೇ ಬರೆಯುವಷ್ಟು ಉತ್ತರ ಕೊಟ್ಟಿದ್ದೇನೆ. ಇನ್ನೂ ಹೆಚ್ಚಿನ ವಿಷಯ ಬೈರೇಗೌಡರಿಗೆ ಬೇಕಾಗಿದ್ದಲ್ಲಿ ಎಕ್ಸ್‌ಪ್ಲೇನ್ ಮಾಡುವುದಕ್ಕೆ ತಯಾರಾದ್ದೇನೆ. ಇನ್ನೊಬ್ಬ ಮಾನ್ಯ ಸದಸ್ಯರು ಮಾತನಾಡುತ್ತಾ ಬೆಂಗಳೂರು, ಕೋಲಾರ, ತುಮಕೂರು ಸೇರಿ ಒಂದು ಜೋನ್ ಮಾಡಿದಂತೆ ಉಳಿದ ಜಿಲ್ಲೆಗಳನ್ನು ೨-೩ ಸೇರಿಸಿ ಒಂದೊಂದು ಜೋನ್ ಮಾಡುವಂತೆ ಸಲಹೆ ಕೊಟ್ಟಿದ್ದಾರೆ. ಅದನ್ನು ಉಚಿತವಾಗಿ ಕಂಡುಬಂದರೆ ಮಾಡುತ್ತೇವೆ. ಇನ್ನೊಬ್ಬ ಮಾನ್ಯ ಸದಸ್ಯರು ಅಮೇರಿಕಾದಿಂದ ಕೇಂದ್ರ ಸರ್ಕಾರದವರು ೧೧೦ ರೂಪಾಯಿಗೆ ಒಂದು ಕ್ವಿಂಟಾಲಿನಂತೆ ಬತ್ತ ಕೊಂಡುಕೊಳ್ಳುತ್ತಾರೆ; ಇಲ್ಲಿಯ ರೈತರಿಗೆ ೮೦ ರೂಪಾಯಿ ಕೊಡುವುದಕ್ಕೆ ಅಳುತ್ತಾರೆಂದು ಹೇಳಿದರು ಆ ಬಗ್ಗೆ ಮಾನ್ಯ ಸದಸ್ಯರು ಕೇಂದ್ರ ಸರ್ಕಾರದಿಂದಲೇ ಉತ್ತಮ ಮಾಹಿತಿ ಪಡೆಯುವುದು ಒಳ್ಳೆಯದೆಂದು ಹೇಳುತ್ತೇನೆ. ಸಾಧ್ಯ ನಮ್ಮ ರೈತರಿಗೆ ಹೆಚ್ಚಿನ ರಕ್ಷಣೆ ಕೊಡುವುದಕ್ಕೆ ತಯಾರಿದ್ದೇವೆ; ಮಾನ್ಯ ಶಾಮಣ್ಣನವರು ಮಾತನಾಡುತ್ತಾ ಸಾಕಷ್ಟು ಆಹಾರ ಧಾನ್ಯ ಶೇಖರಣೆ ಮಾಡಿರುವುದರಿಂದ ಲೆವಿ ವಸೂಲಿ ಬೇಕಾಗಿಲ್ಲ ಎಂದು ಹೇಳಿದರು. ಹೋದ

ವರ್ಷ ಮಳೆ ಚೆನ್ನಾಗಿ ಬಂದು ಆಹಾರ ಧಾನ್ಯ ಚೆನ್ನಾಗಿ ಬಂದಿದ್ದರಿಂದ ದಾಸ್ತಾನು ಮಾಡಿದ್ದೇವೆ. ಬರುವ ವರ್ಷ ಹೇಗಿದೆಯೋ ನೋಡಬೇಕಾಗಿದೆ. ಅದಕ್ಕಾಗಿ ದಾಸ್ತಾನು ಮಾಡಬೇಕಾಗುತ್ತದೆ. ಮಾನ್ಯ ಕಾಮತ್ತರವರು ಶೇಖರಣೆ ವಿಚಾರದಲ್ಲಿ ಟೀಕೆಯನ್ನೂ ಕೂಡ ಮಾಡಿದರು; ಓವರ್‌ಹೆಡ್ ಚಾರ್ಜಸ್ ಜಾಸ್ತಿಯಾಗುತ್ತದೆಂದು. ಈ ವರ್ಷವೇ ತೆಗೆದುಕೊಳ್ಳಿ, ಮೂರುವರೆ ಲಕ್ಷ ಟನ್ ಆಹಾರಧಾನ್ಯವನ್ನು ಶೇಖರಣೆ ಮಾಡಬೇಕಾದರೆ ಎಷ್ಟು ಕೋಟಿ ರೂಪಾಯಿ ಖರ್ಚು ಆಗುತ್ತದೆ; ಅದಕ್ಕೆ ಬಡ್ಡಿ ಎಷ್ಟು ಕೊಡಬೇಕಾಗುತ್ತದೆ; ಉಗ್ರಾಣಗಳಿಗೆ ಬಾಡಿಗೆ ಕೊಡಬೇಕಾಗುತ್ತದೆ; ಆಹಾರಧಾನ್ಯವನ್ನು ಸರಿಯಾದ ರೀತಿಯಲ್ಲಿ ಜೋಪಾನವಾಗಿ ಇಡಬೇಕಾಗುತ್ತದೆ; ಇದಕ್ಕೆಲ್ಲಾ ಖರ್ಚು ಮಾಡಬೇಕಾಗುತ್ತದೆ. ಸರ್ಕಾರ ವರ್ತಕರಂತೆ ಲಾಭ ಪಡೆಯಬೇಕೆಂಬ ಆಸೆಯೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ರೈತರಿಂದ ಕೊಳ್ಳುವ ಬೆಲೆ ಎಷ್ಟು? ಮಾರಾಟ ಮಾಡುವ ಬೆಲೆಎಷ್ಟು?

ಶ್ರೀಮತಿ ಇ. ಇ. ವಾಜ್.—ಅದಕ್ಕಾಗಿಯೇ ಮೂರುವರೆ ಪರ್ಸೆಂಟ್ ಇದ್ದ ಪಾಲಿಸನ್ನು ೫ ಪರ್ಸೆಂಟ್‌ಗೆ ಹೆಚ್ಚಿಸಿದ್ದೇವೆ. ನಮಗೆ ನಷ್ಟವಾದರೂ ಸಹ ಅನ್ಯವಹಾರಕ್ಕೆ ಅವಕಾಶ ಕೊಡಬೇ ತೆರದ ಮಾರ್ಕೆಟ್ ದರದಲ್ಲಿಯೇ ಕೊಡುತ್ತಿದ್ದೇವೆ. ಇದರ ಜೊತೆಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ; ಬಹುಶಃ ನಾವೆಲ್ಲರೂ ಅದನ್ನು ಸ್ವಾಗತಿಸುತ್ತೀರಿ ಎಂದು ಕಾಣುತ್ತದೆ. ಅದು ಇನ್ನೂ ಜಾರಿಗೆ ಬರುವುದರಲ್ಲಿದೆ. ಒಂದು ತಿಂಗಳ ಸಂಬಳದಷ್ಟು ಧಾನ್ಯ ರೂಪದಲ್ಲಿ ಕೊಟ್ಟು; ಅದನ್ನು ಬಡ್ಡಿ ಇಲ್ಲದೆ ಹತ್ತು ಕಂತುಗಳಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಸರ್ಕಾರಿ ನೌಕರರಿಗೆ ಸಹಾಯ ಮಾಡುವ ಹಾಗೂ ಸಹಕಾರ ಸಂಘಗಳ ಹತ್ತಿರ ಹೋಗಿ ನಿಲ್ಲುವುದನ್ನು ತಪ್ಪಿಸುವ ಉದ್ದೇಶದಿಂದ ಈ ಕ್ರಮ ತೆಗೆದುಕೊಂಡಿದ್ದೇವೆ. ಇದರ ಜೊತೆಗೆ ಕಂಟ್ರೋಲ್ ಬಟ್ಟೆಯನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಿದರೂ; ಅಲ್ಲಿ ದೊರೆಯುವ ಎಲ್ಲ ರೀತಿಯ ಬಟ್ಟೆಯನ್ನು ಅಂದರೆ ಒಟ್ಟು ೨೩೭೫ ಬೇಲ್ಸ್ ಬಟ್ಟೆಯನ್ನು ತರಿಸುವುದಕ್ಕಾಗಿ ಇಂಡೆಂಟ್ ಹಾಕಿ ಏರ್ಪಾಡು ಮಾಡಿದ್ದೇವೆ; ಇದನ್ನು ಸಹಕಾರ ಸಂಘಗಳ ಮೂಲಕ ಪ್ರತಿಯೊಬ್ಬರಿಗೂ ದೊರೆಯುವಂತೆ ವ್ಯವಸ್ಥೆ ಮಾಡಲಾಗುತ್ತದೆ. ಇನ್ನೊಬ್ಬ ಮಾನ್ಯ ಸದಸ್ಯರು ಸರ್ಕಾರ ಈ ರೀತಿ ಮಾಡುತ್ತಾ ಹೋದರೆ ರೈತರು ಬೇಸಾಯ ಮಾಡುವುದನ್ನೇ ನಿಲ್ಲಿಸುತ್ತಾರೆಂದು ಹೇಳಿದರು; ರೈತರು ಯಾರೂ ತಮ್ಮ ಹೊಲವನ್ನು ಖಾಲಿ ಬಿಡುವುದಕ್ಕೆ ತಯಾರಿಲ್ಲ; ಸರ್ಕಾರದವರು ಅವರ ಸಹಾಯಕ್ಕೆ ಯಾವಾಗಬೇಕಾದರೂ ಬರುವುದಕ್ಕೆ ಸಿದ್ಧವಾಗಿದ್ದಾರೆ. ಇನ್ನೊಬ್ಬ ಮಾನ್ಯಸದಸ್ಯರು ತಮಿಳುನಾಡಿನಿಂದ ಎಷ್ಟು ಬತ್ತ ತಂದಿದ್ದೀರಿ: ಅದು ಏನಾಯಿತು: ಯಾವಯಾವ ಸಹಕಾರ ಸಂಘಗಳಿಗೆ ಕೊಟ್ಟಿದ್ದೀರಿ ವಿವರವಾದ ಮಾಹಿತಿ ಕೊಡಬೇಕೆಂದು ಹೇಳಿದರು.

೧೯೭೫-೭೬ರಲ್ಲಿ ತಮಿಳುನಾಡಿನಿಂದ ೩೨ ಸಾವಿರದ ೩೮೫ ಕ್ವಿಂಟಾಲ್ ದವಸ ಧಾನ್ಯಗಳನ್ನು ತರಿಸಿದ್ದೇವೆ ಅಂದರೆ ಅದರಲ್ಲಿ ೯ ಸಾವಿರದ ೫೩೪ ಕ್ವಿಂಟಾಲ್ ರಾಗಿ ಉಳಿದದ್ದು ನಾವು ಅಕ್ಕಿ ರೂಪದಲ್ಲಿ ತಂದಿದ್ದೇವೆ. ಅಕ್ಕಿ ರಾ ರೈಸ್, ಫಸ್ಟ್ ವೆರೈಟಿ ೬ ಸಾವಿರದ ೧೭೬ ಕ್ವಿಂಟಾಲ್ಸ್ ಮತ್ತೆ ಸ್ವಲ್ಪ ಚಿಲ್ಲರೆ ಕೇಜೀಸ್ ಬರುತ್ತದೆ ಅದನ್ನೆಲ್ಲಾ ಹೇಳಬೇಕಾದ್ದು ಇಲ್ಲ. ಸೆಕೆಂಡ್ ವೆರೈಟಿ ೧ ಸಾವಿರದ ಚಿಲ್ಲರೆ ಕ್ವಿಂಟಾಲ್ಸ್. ಮತ್ತೆ ಬಾಯಿಲ್ಡ್ ರೈಸ್ ೨ ಸಾವಿರದ ೭೬೪ ಕ್ವಿಂಟಾಲ್ಸ್, ಫಸ್ಟ್ ವೆರೈಟಿ ಆಫ್ ಪ್ಯಾಡಿ ೧೨ ಸಾವಿರದ ೫೦೪ ಕ್ವಿಂಟಾಲ್ಸ್. ನಮಗೆ ಸ್ವಲ್ಪ ಬರಗಾಲದ ಪರಿಸ್ಥಿತಿ ಬಂದುದರಿಂದ ಕೇಂದ್ರ ಸರ್ಕಾರದವರ ಒಂದು ಸಹಾಯದಿಂದ ನಾವು ಇಷ್ಟನ್ನು ನಮ್ಮ ರಾಜ್ಯಕ್ಕೆ ತಂದೆವು. ಇದರ ಒಟ್ಟು ಕ್ರಯ ಎಷ್ಟು ಎಂದರೆ ೩ ಕೋಟಿ ೬ ಲಕ್ಷದ ೧೩ ಸಾವಿರದ ೯೮೬ ರೂಪಾಯಿಗಳು. ನಾವು ಇವನ್ನೆಲ್ಲಾ ಎಲ್ಲೆಲ್ಲಿ ಹಂಚಿದ್ದೇವೆ ಎನ್ನುವ ಬಗ್ಗೆ ಡಿಟೇಲ್ಸ್ ಇದೆ. ಕೋಲಾರ, ಮಂಗಳೂರು ಮತ್ತು ನಮ್ಮ ಬೆಂಗಳೂರು ಸಿಟಿ ಇಲ್ಲಿ ವಿತರಣೆ ಯಾಗಿದೆ ಎಂಬುದನ್ನು ಹೇಳುತ್ತಾ ಇದರ ಪೂರ್ತಿ ಮಾಹಿತಿ ಮಾನ್ಯ ಸದಸ್ಯರಿಗೆ ಬೇಕಾದರೆ ಅವರು ಪಡೆಯಬಹುದು. ಇದರಲ್ಲಿ ಅಂದರೆ ಹಂಚಿಕೆಯಲ್ಲಿ ಏನಾದರೂ ಲೋಪ ದೋಷಗಳು ಬಂದಿನ್ನೆ, ಅವ್ಯವಹಾರ ನಡೆದಿದೆಯೆಂದು ಹೇಳಿದರೆ ಅದು ಅಷ್ಟೊಂದು ಉಚಿತವಲ್ಲವೆಂದು ಹೇಳಬಹುದಾಗಿದೆ.

ಆ ಮೇಲೆ ಅಂತರ ಜಿಲ್ಲಾ ನಿರ್ಬಂಧನೆಗಳನ್ನು ತೆಗೆದುಹಾಕಿದರೆ ಮುಂದೆ ತೊಂದರೆ ಯಾಗಬಹುದೆಂದು ಕೋಸ್ಟಲ್ ಭಾಗದಲ್ಲಿ, ಮತ್ತು ಅಕ್ಕಪಕ್ಕದ ರಾಜ್ಯಗಳಲ್ಲಿ ಸ್ವಲ್ಪ ಬರಗಾಲದ ಪರಿಸ್ಥಿತಿ ಕಂಡು ಬಂದುದರಿಂದ ಅಲ್ಲಿಗೆ ಆಹಾರ ಪದಾರ್ಥಗಳು ಹೋಗಬಹುದು ಎನ್ನುವ ಉದ್ದೇಶದಿಂದ ಇವತ್ತು ನಾವು ಕಂಟ್ರೋಲ್‌ನ್ನು ಇಟ್ಟುಕೊಳ್ಳಬೇಕಾಗಿದೆ. ಆದುದರಿಂದ ಇವತ್ತು ನಮ್ಮ ರಾಜ್ಯದಲ್ಲೂ ಕೂಡ ಆಹಾರ ಪದಾರ್ಥಗಳ ಮೇಲೆ ಸ್ವಲ್ಪಮಟ್ಟಿನ ಹತೋಟಿಯನ್ನು ಇಡಬೇಕಾಗಿದೆ ಅದನ್ನು ತೆಗೆಯುವುದಕ್ಕೆ ಬರುವ

ದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಕೆಲವು ಕಡೆಗಳಲ್ಲಿ ಸರಿಯಾಗಿ ಇಟ್ಟುಕೊಳ್ಳುತ್ತಿಲ್ಲವೆಂದು ಹೇಳಿದರು ಆದರೆ ಎಲ್ಲಾ ಕಡೆ ನಮ್ಮ ಆಫೀಸರ್‌ಗಳು ಹೋಗಿ ಚೆಕ್ ಮಾಡುತ್ತಿದ್ದಾರೆ ನಾನು ಕೂಡ ಟೂರ್ ಹೋದಾಗ ಎಲ್ಲಾ ಕಡೆಯೂ ಉಗ್ರಾಣಗಳನ್ನೂ ಯಾವ ರೀತಿಯಲ್ಲಿ ಇಟ್ಟಿದ್ದಾರೆ. ದಾಸ್ತಾನನ್ನು ಯಾವ ರೀತಿಯಲ್ಲಿ ಇಟ್ಟಿದ್ದಾರೆ ಎಂಬುದನ್ನೆಲ್ಲಾ ಚೆಕ್ ಮಾಡಿಕೊಂಡು ಬರುವ ಪ್ರವೃತ್ತಿಯನ್ನು ಇಟ್ಟುಕೊಂಡಿದ್ದೇನೆಂಬುದನ್ನು ಹೇಳಲು ಬಯಸುತ್ತೇನೆ.

ಇನ್ನೊಂದು ಮಾನ್ಯ ಸದಸ್ಯರೊಬ್ಬರು ಕರಾಳ ಶಾಸನವನ್ನು ತಂದಿದ್ದೀರಿ ಎಂದು ಹೇಳಿದರು, ಬಹುಶಃ ಅವರು ಒಳ್ಳೆಯ ಶಾಸನ ತಂದಿದ್ದೀರಿ ಎನ್ನುವ ಬದಲಾಗಿ ಕರಾಳ ಶಾಸನ ತಂದಿದ್ದೀರಿ ಎಂದು ಹೇಳಿರಬಹುದೆಂದು ಕಾಣುತ್ತದೆ. ಇದು ಖಂಡಿತವಾಗಿಯೂ ಕರಾಳ ಶಾಸನವಲ್ಲ. ಇದರಿಂದ ಜನರಿಗೂ ಒಳ್ಳೆಯದು ಆಗುತ್ತಿದೆ. ಆದುದರಿಂದ ಮಾನ್ಯ ಸದಸ್ಯರೆಲ್ಲರೂ ಇದನ್ನು ಒಳ್ಳೆಯ ಮತ್ತು ಉಚಿತವಾದ ಶಾಸನವೆಂದು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ನಮ್ಮ ಶ್ರೀಮಾನ್. ಕೆ. ಆರ್. ಎಸ್. ನಾಯ್ಡುರವರು ಇದನ್ನು ಸ್ವಾಗತಿಸುತ್ತಾ ಬಹಳ ಒಳ್ಳೆಯ ಮಾತುಗಳನ್ನು ಹೇಳಿದರು, ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ತಾರೀಫ್ ಮಾಡಿದ್ದಾರೆ ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಇನ್ನು ನಮ್ಮ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ರವರು ಇದನ್ನು ತಿದ್ದುಪಡಿ ಮಾಡಬಹುದು; ಇದೇ ರೀತಿ ಬೇರೆ ಆಹಾರ ಪದಾರ್ಥಗಳ ಮೇಲೂ ತಂದಿದ್ದರೆ ಒಳ್ಳೆಯದಿತ್ತು ಎಂದು ಹೇಳಿದರು ಆದರೆ ನಾವು ಮುಖ್ಯವಾಗಿ ತಂದಿರತಕ್ಕಂಥದ್ದು ಏನೆಂದರೆ ಈ ಲೆವಿಯನ್ನು ನಾವು ಕೊಂಡುಕೊಳ್ಳುತ್ತೇವೆ ಆಗ ಒಂದು ನಿಗದಿಯಾದ ದರದಲ್ಲಿ ಕೊಂಡುಕೊಳ್ಳಲು ಒಂದು ನಿಗದಿಯಾದ ಬೆಲೆಯನ್ನು ಗೊತ್ತು ಮಾಡಬೇಕಾಗುತ್ತದೆ. ಮತ್ತು ಯಾವ ಬೇಸಿಸ್‌ನ ಮೇಲೆ ಮಾಡಬೇಕು ಎನ್ನುವುದನ್ನು ತೋರಿಸುವುದಕ್ಕೆ ಇದನ್ನು ತಂದಿದ್ದೇವೆ. ಮತ್ತೆ ಕೆಲವು ಕಡೆ ಕೋರ್ಟಿನವರು ತೀರ್ಮಾನ ನಮ್ಮ ತೀರ್ಮಾನಕ್ಕೆ ವಿರುದ್ಧವಾದುದರಿಂದ, ಫುಡ್‌ಗ್ರೇನ್ಸ್‌ಗಳ ಬೆಲೆಯನ್ನು ಯಾವ ರೀತಿಯಲ್ಲಿ ನಿಗದಿ ಮಾಡಬೇಕು ಎನ್ನುವ ಬಗ್ಗೆ ತಿದ್ದುಪಡಿಯನ್ನು ತಂದಿದ್ದೇನೆ. ಮತ್ತೆ ಕಾರ್ಖಾನೆಗಳಲ್ಲಿ ತಯಾರಾಗುವಂಥ ಗ್ರಾಹಕರಿಗೆ ಬೇಕಾಗುವಂಥ ಸಾಮಾನುಗಳು ಯಾವು ಯಾವುವಿದೆ, ಯಾವುದು ಅತ್ಯಂತ ಅಗತ್ಯವಿದೆಯೋ ಅದನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿದ್ದೇವೆ.

(ಮಾನ್ಯ ಶ್ರೀ ಸಯನಕ್ ರವರು ಮತ್ತು ಶ್ರೀ ಕೊಣಂದೂರು ಲಿಂಗಪ್ಪ ನವರು ಕೋರಂ ಇಲ್ಲವೆಂದಾಗ ಕೋರಂ ಬೆಲ್ಲನ್ನು ಹಾಕಲಾಯಿತು–ಆ ನಂತರ ಮಂತ್ರಿಗಳವರು ತಮ್ಮ ಭಾಷಣವನ್ನು ಮುಂದುವರಿಸಿದರು)

ಮತ್ತೆ ಶಿಕಾರಿ ಪುರದ ಸದಸ್ಯರೊಬ್ಬರು ಲೆವಿಯನ್ನು ಕೊಟ್ಟರೂ ಕೊಂಡುಕೊಳ್ಳುತ್ತಿಲ್ಲವೆಂದು ಹೇಳಿದರು, ಆ ವಿಚಾರದ ಬಗ್ಗೆ ನಾನು ತಕ್ಷಣ ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ. ಇವತ್ತು ಮಾನ್ಯ ಸದಸ್ಯರೆಲ್ಲರೂ ಏನು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ, ಮತ್ತು ಇವತ್ತು ತಂದಿರತಕ್ಕಂಥ ತಿದ್ದುಪಡಿಯಿಂದ ನಿಜವಾಗಿಯೂ ರೈತರಿಗೂ ಒಳ್ಳೆಯದು ಆಗುವುದು ಮತ್ತು ಗ್ರಾಹಕರಿಗೂ ಒಳ್ಳೆಯದು ಆಗುತ್ತದೆ ಮತ್ತು ನಮ್ಮೆಲ್ಲರಿಗೂ ಒಳ್ಳೆಯದು ಆಗುತ್ತದೆಂದು ಹೇಳಿ ಇವತ್ತು ಇದರ ಬಗ್ಗೆ ಮಾನ್ಯ ಸದಸ್ಯರುಗಳು ಎಷ್ಟೇ ಟೀಕೆ ಮಾಡಿದ್ದರೂ ಕೂಡ ಇದರ ಬಗ್ಗೆ ಅವರ ಸಂಪೂರ್ಣ ಬೆಂಬಲ ಮತ್ತು ಸಹಕಾರವನ್ನು ಕೊಡುತ್ತಾರೆ ಎನ್ನತಕ್ಕಂಥದ್ದು ನನಗೆ ಮನದಟ್ಟಾಗಿದೆ. ಆದುದರಿಂದ ಈ ಬಿಲ್ಲನ್ನು ಪಾಸ್ ಮಾಡಿ ಅದು ಆದಷ್ಟು ಬೇಗ ಜಾರಿಗೆ ತರಲು ಅನುಕೂಲ ವಾಗಲು ಈ ಮಸೂದೆಯು ಪಾಸ್ ಆಗಲು ನಾವು ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ತಮ್ಮೆಗೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—I will put the consideration motion to the vote of the House.

The question is:

"That the Essential Commodities (Karnataka Amendment) Bill, 1976, be taken into consideration."

The motion was adopted

CLAUSE 2 to 8

MR. DEPUTY SPEAKER.—There are no amendments.

The question is :

"That clauses 2 to 8, both inclusive, do stand part of the Bill."

The motion was adopted.

clauses 2 to 8, both inclusive were added to the Bill.

CLAUSE 1 etc.

MR. DEPUTY SPEAKER.—The question is :

"That Clause 1, the Long Title the Preamble and the Enacting Formala do stand part of the Bill."

The motion was adopted.

Clause 1 the Long Title the Preamble and the Enacting Formala were added to the Bill."

Motion to pass

SMT. E.E. VAZ : I beg to move :

"That the Essential Commodities (Karnataka Amendment) Bill, 1976, be passed."

MR. DEPUTY SPEAKER. — The question is :

"That the Essential Commodities (Karnataka Amendment) Bill, 1976, be passed."

SRI B. B. SAYANAK.— I press for division.

The House divided

MR. DEPUTY SPEAKER.— The result of the division is:

s—...22 Noes......7. The "Ayes" have it.

The motion was put and adopted the Bill was passed

KARNATAKA ELECTRICITY BOARD (RECOVERY OF DUES) BILL, 1974

Motion to Consider

SRI H.C. SRIKANTAIAH. — (Minister of State for Electricity).— I beg to move :

"That the Karnataka Electricity Board (Recovery of Dues) Bill, 1974, be taken into consideration."